ಸೋಮವಾರ, ನವೆಂಬರ್ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 307 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಇತಿಹಾಸ ಅಧ್ಯಯನ ಮಾಡುವಾಗ ಸರಿಯಾದ ಕ್ರಮದಲ್ಲಿ ಟೈಮ್‌ಲೈನ್ ಬರೆಯುವುದು ಸವಾಲೇ ಆಗಿದೆ. ಇವನ್ನು ಸರಳವಾಗಿ ಹೇಗೆ ನೆನಪಿಡಬಹುದು? ವಿವರ ಇಲ್ಲಿದೆ...

ಆಳ-ಅಗಲ
ರಾಜ್ಯಪಾಲರ ಕಿರುಕುಳ

ಮಹುವಾ ಪ್ರಕರಣ: ಲೋಕಸಭೆ ನೀತಿ ಸಮಿತಿಯ ಸಭೆ ನಾಳೆ 8

ಹೂಡಿಕೆ ಹೊರ ಹರಿವಿಗಿಲ್ಲ ಕಡಿವಾಣ 12

ಶಿವಮೊಗ್ಗ ರೈಲು ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಪತ್ತೆ

ವಾರಸುದಾರರಿಲ್ಲದ ಬಾಕ್ಸ್: ಆತಂಕ 7

ಎಂಎಸ್‌ಐಎಲ್ ಚಿಟ್ ಫಂಡ್ ವಿಸ್ತರಣೆಗೆ ಯೋಜನೆ • ಸಾರ್ವಜನಿಕರ ನೇರ ನೋಂದಣಿಗೆ ಆ್ಯಪ್

ಚಿಟ್ ಫಂಡ್‌ಗೆ 'ಗ್ಯಾರಂಟಿ' ಬಳಕೆ

• ಭರತ್ ಜೋಶಿ

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳಿಂದ ಮಹಿಳೆಯರ ಕೈಸೇರುತ್ತಿರುವ ಹಣವನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಚಿಟ್ ಫಂಡ್ ವಹಿವಾಟಿನತ್ತ ಸೆಳೆಯಲು ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಚಿಟ್ ಫಂಡ್‌ನಲ್ಲಿ ಗ್ರಾಹಕರ ನೇರ ನೋಂದಣಿಗೆ ಅವಕಾಶವಿರುವ 'ಆ್ಯಪ್' ಸಿದ್ಧಪಡಿಸುತ್ತಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು 'ಗ್ಯಾರಂಟಿ' ಯೋಜನೆಗಳ ಸುತ್ತ ಆರ್ಥಿಕತೆಯೊಂದನ್ನು ಕಟ್ಟಲು ಹೆಜ್ಜೆ ಇಟ್ಟಿದೆ. ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಕುಟುಂಬಕ್ಕೆ ತಿಂಗಳಿಗೆ ₹ 4,000 ದಿಂದ ₹ 5,000 ದವರೆಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ಗೃಹಲಕ್ಷ್ಮಿ ಯೋಜನೆಯಡಿ 93 ಲಕ್ಷ ಮಹಿಳೆಯರಿಗೆ ಪ್ರತಿ ತಿಂಗಳು ತಲಾ ₹ 2,000 ಪಾವತಿಸಲಾಗುತ್ತಿದೆ. ಶಕ್ತಿ ಯೋಜನೆಯಲ್ಲೂ ಉಚಿತ ಬಸ್ ಪ್ರಯಾಣದ ಮೂಲಕ ಮಹಿಳೆಯರಿಗೆ ಉಳಿತಾಯವಾಗುತ್ತಿದೆ. ಮಹಿಳೆಯರು ಈ ಮೊತ್ತವನ್ನು ಚಿಟ್ ಫಂಡ್‌ನಲ್ಲಿ ತೊಡಗಿಸುವಂತೆ ಉತ್ತೇಜಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆ.

ಪ್ರಜಾವಾಣಿ ವಿಶೇಷ

ರಾಜ್ಯ ಸರ್ಕಾರದ ಸ್ವಾಮ್ಯದ ಎಂಎಸ್‌ಐಎಲ್‌ನ ಚಿಟ್ ಫಂಡ್‌ನಲ್ಲಿ 22,000 ಗ್ರಾಹಕರಿದ್ದು, ವಹಿವಾಟು ₹305 ಕೋಟಿ ಮಾತ್ರ ಇದೆ. ನೆರೆಯ ಕೇರಳ ರಾಜ್ಯ ಸರ್ಕಾರದ ಚಿಟ್ ಫಂಡ್ ವಹಿವಾಟು ₹27,000 ಕೋಟಿಯಷ್ಟಿದೆ. ಈಗ ಗ್ಯಾರಂಟಿ ಹಣದ ಬೆಂಬಲದಿಂದ ಎಂಎಸ್‌ಐಎಲ್ ಚಿಟ್ ಫಂಡ್ ವಹಿವಾಟನ್ನು ಹೆಚ್ಚಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆ.

'ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರ ಕೈ ಸೇರುತ್ತಿರುವ ಹಣವನ್ನು ಸೆಳೆದು ತನ್ನ ಚಿಟ್ ಫಂಡ್ ವಹಿವಾಟನ್ನು ಹೆಚ್ಚಿಸಿಕೊಳ್ಳಲು ಎಂಎಸ್‌ಐಎಲ್ ಒಪ್ಪಿದೆ' ಎಂದು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಪರಿಣಾಮವನ್ನು ಅರಿಯಲು ಅತೀಕ್ ಅವರು ನಿರಂತರವಾಗಿ ಸಭೆಗಳನ್ನು ನಡೆಸುತ್ತಿದ್ದಾರೆ. ಮಹಿಳೆಯರ ಕೈ ಸೇರುತ್ತಿರುವ ಹಣವನ್ನು ಉಳಿತಾಯ ಯೋಜನೆಗಳತ್ತ ಆಕರ್ಷಿಸುವ ಕುರಿತೂ ಅವರು ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ.

ವಿಸ್ತರಣೆಗೆ ಅವಕಾಶವಿದೆ: 'ರಾಜ್ಯದಲ್ಲಿ ಎಂಎಸ್‌ಐಎಲ್ ಚಿಟ್ ಫಂಡ್ ವಹಿವಾಟನ್ನು ₹ 10,000 ಕೋಟಿಗಳವರೆಗೆ ವಿಸ್ತರಿಸಲು ಅವಕಾಶವಿದೆ. ಈಗ ನಮ್ಮ ಚಿಟ್ ಫಂಡ್ ವಹಿವಾಟು ನಗರಗಳಿಗೆ ಸೀಮಿತವಾಗಿದೆ. ನಾವು ಗ್ರಾಮೀಣ ಪ್ರದೇಶಗಳನ್ನು ಇನ್ನೂ ತಲುಪಿಲ್ಲ' ಎಂದು ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದಲ್ಲಿ ಬಹುತೇಕ ಪ್ರತಿ ಕುಟುಂಬಕ್ಕೂ ಗ್ಯಾರಂಟಿ ಯೋಜನೆಗಳಿಂದ ಹಣ ತಲುಪುತ್ತಿದೆ. ಈಗ ಉಳಿತಾಯಕ್ಕೆ ಹೆಚ್ಚು ಅವಕಾಶಗಳಿವೆ. ಎಂಎಸ್‌ಐಎಲ್ ಚಿಟ್ ಫಂಡ್‌ನಲ್ಲಿ ಗುಂಪುಗಳಿಗೆ ತಕ್ಕಂತೆ ಶೇಕಡ 13 ರಿಂದ 15ರವರೆಗೂ ಲಾಭ ದೊರಕುತ್ತದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ಹೂಡಿಕೆಯ ಮೊತ್ತಕ್ಕೂ ಖಾತರಿ ಇರುತ್ತದೆ ಎಂದರು.

'ಗೃಹಲಕ್ಷ್ಮಿ ಯೋಜನೆಯಿಂದ ದೊರಕುತ್ತಿರುವ ಹಣವನ್ನು ಮಹಿಳೆಯರು ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಇತರ ತುರ್ತು ಬಳಕೆಯ ಉದ್ದೇಶಗಳಿಗಾಗಿ ಉಳಿತಾಯ ಮಾಡುವುದನ್ನು ರೂಢಿಸಿಕೊಳ್ಳಬೇಕು. ತಕ್ಷಣವೇ ಉಳಿತಾಯದ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು' ಎನ್ನುತ್ತಾರೆ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್.

'ಬರಲಿದೆ ಮೊಬೈಲ್ ಆ್ಯಪ್'

'ಚಿಟ್ ಫಂಡ್ ವಹಿವಾಟಿಗಾಗಿ ಮೊಬೈಲ್ ಆ್ಯಪ್ ಒಂದನ್ನು ರೂಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಗ್ರಾಹಕರ ನೋಂದಣಿ ಮಾತ್ರವಲ್ಲ, ಚಿಟ್ ಫಂಡ್ ವಹಿವಾಟಿನ ಎಲ್ಲ ವಿವರಗಳನ್ನೂ ಗ್ರಾಹಕರು ಆ್ಯಪ್ ಮೂಲಕವೇ ಪಡೆಯಲು ಅವಕಾಶ ಕಲ್ಪಿಸಲಾಗುವುದು' ಎಂದು ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ತಿಳಿಸಿದರು.

'ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಮಾದರಿಯಲ್ಲಿ 'ಉಳಿತಾಯ ಸಖಿ'ಯರನ್ನು ನೇಮಿಸಲಾಗುವುದು. ಅವರು ಮಾಡುವ ನೋಂದಣಿಗೆ ಪ್ರತಿಯಾಗಿ ಪ್ರೋತ್ಸಾಹಧನ ನೀಡಲಾಗುವುದು' ಎಂದರು.

49 ಶತಕ ಆಗ ಸಚಿನ್ ಈಗ ವಿರಾಟ್

ಕ್ರಿಕೆಟ್ ವಿಶ್ವಕಪ್ ಭಾರತ 2023

ಕೋಲ್ಕತ್ತ: ಭಾರತ ಕ್ರಿಕೆಟ್ ತಂಡದ 'ಚೇಸಿಂಗ್ ಮಾಸ್ಟರ್' ವಿರಾಟ್ ಕೊಹ್ಲಿ ಭಾನುವಾರ ತಮ್ಮ ಮೂವತ್ತೈದನೇ ಜನ್ಮದಿನವನ್ನು ಅವಿಸ್ಮರಣೀಯಗೊಳಿಸಿಕೊಂಡರು. ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ಎದುರು ನಡೆದ ಏಕದಿನ ಪಂದ್ಯದಲ್ಲಿ ಶತಕ ದಾಖಲಿಸಿದರು. ಇದರೊಂದಿಗೆ 'ಮಾಸ್ಟರ್ ಬ್ಲಾಸ್ಟರ್' ಸಚಿನ್ ತೆಂಡೂಲ್ಕರ್ ಅವರ 49 ಶತಕಗಳ ದಾಖಲೆಯನ್ನು ಸರಿಗಟ್ಟಿದರು. ಈ ಪಂದ್ಯವನ್ನು ಭಾರತ ತಂಡವು 243 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಆಡಿದ ಎಂಟು ಪಂದ್ಯಗಳಲ್ಲಿಯೂ ಗೆದ್ದು ಅಗ್ರಸ್ಥಾನ ಉಳಿಸಿಕೊಂಡಿತು.

ಪಂದ್ಯದ ಸ್ಕೋರ್

ಭಾರತ
5ಕ್ಕೆ 326 (50 ಓವರ್‌ಗಳಲ್ಲಿ)

ದಕ್ಷಿಣ ಆಫ್ರಿಕಾ
83 (27.1 ಓವರ್‌ಗಳಲ್ಲಿ)

ಫಲಿತಾಂಶ: ಭಾರತಕ್ಕೆ 243ರನ್ ಜಯ



ವಿರಾಟ್ ಕೊಹ್ಲಿ

101 ಅಜೇಯ
121 ಎಸೆತ
10 ಬೌಂಡರಿ

ಏಕದಿನ ಕ್ರಿಕೆಟ್ ಸಾಧನೆ

	ವಿರಾಟ್ ಕೊಹ್ಲಿ	ಸಚಿನ್ ತೆಂಡೂಲ್ಕರ್
ಪಂದ್ಯ	289	463
ಇನಿಂಗ್ಸ್	277	452
ರನ್	13626	18426
ಶ್ರೇಷ್ಠ	183	200*
ಶತಕ	49	49
ಅರ್ಧಶತಕ	70	96
ಸರಾಸರಿ	58.48	44.83

ಶತಕಗಳು (ಎಲ್ಲ ಮಾದರಿ)

ಆಟಗಾರ	ಒಟ್ಟು	ಟೆಸ್ಟ್	ಏಕದಿನ	ಟಿ20
ಸಚಿನ್ ತೆಂಡೂಲ್ಕರ್	100	51	49	-
ವಿರಾಟ್ ಕೊಹ್ಲಿ	79	29	49	1

13 ಪುಟ

ಒಳ ಪುಟ

ಅಧಿಕಾರದ ಖಾತರಿ ಸಿದ್ದರಾಮಯ್ಯಗೆ ಇಲ್ಲ: ಮೋದಿ 9

ಭೂ ವಿಜ್ಞಾನಿ ಪ್ರತಿಮಾ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ (43) ಅವರನ್ನು ಉಸಿರುಗಟ್ಟಿಸಿ, ಕತ್ತು ಕೊಯ್ದು ಕೊಲೆ ಮಾಡಲಾಗಿದ್ದು, ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯ ದೊಡ್ಡಕಲ್ಲಸಂದ್ರದ ಮನೆಯಲ್ಲಿ ಭಾನುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ತುಡ್ಕಿಯ ಪ್ರತಿಮಾ, 2008ರಲ್ಲಿ ಭೂ ವಿಜ್ಞಾನಿ ಆಗಿ ಕೆಲಸಕ್ಕೆ ಸೇರಿದ್ದರು. 2019ರಲ್ಲಿ ಅವರಿಗೆ ಹಿರಿಯ ಭೂ ವಿಜ್ಞಾನಿಯಾಗಿ ಬಡ್ತಿ ಸಿಕ್ಕಿತ್ತು. ಎಂಟು ವರ್ಷಗಳಿಂದ ಅವರು ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದರು.

ಕೆ.ಎಸ್. ಪ್ರತಿಮಾ

ಪ್ರತಿಮಾ ಪತಿ ಸತ್ಯನಾರಾಯಣ ಹಾಗೂ 16 ವರ್ಷದ ಮಗ, ಸ್ವಂತ ಊರಿನಲ್ಲಿದ್ದಾರೆ. ಪ್ರತಿಮಾ ಅವರು 5 ವರ್ಷಗಳಿಂದ ದೊಡ್ಡಕಲ್ಲಸಂದ್ರದ ಕುವೆಂಪು ನಗರದಲ್ಲಿರುವ ಎರಡು ಅಂತಸ್ತಿನ ಮನೆಯ ಮೊದಲ ಮಹಡಿಯಲ್ಲಿ ಒಂಟಿಯಾಗಿ ವಾಸವಿದ್ದರು. ಸ್ವಂತ ಊರಿನಲ್ಲಿ ಹೊಸ ಮನೆ ನಿರ್ಮಿಸಿದ್ದರು. ಇತ್ತೀಚೆಗಷ್ಟೇ ಗೃಹ ಪ್ರವೇಶ ಕಾರ್ಯಕ್ರಮ ನಡೆದಿತ್ತು. ಪತಿ ಹಾಗೂ ಮಗನ ಜೊತೆ ಪ್ರತಿಮಾ ಸಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇವರ ಸಹೋದರ ಪ್ರತೀಶ್, ಬನ್ನೇರುಘಟ್ಟ ರಸ್ತೆಯಲ್ಲಿರುವ ಮನೆಯಲ್ಲಿ ನೆಲೆಸಿದ್ದಾರೆ.

ಮಲಗುವ ಕೊಠಡಿಯಲ್ಲಿ ಮೃತದೇಹ: 'ಶನಿವಾರ ಕೆಲಸ ಮುಗಿಸಿದ್ದ ಪ್ರತಿಮಾ ರಾತ್ರಿ 7.45ರ ಸುಮಾರಿಗೆ ತಮ್ಮ ಕಾರಿನಲ್ಲಿ ಮನೆಗೆ ಬಂದಿದ್ದರು. ಚಾಲಕ ಚೇತನ್, ಮನೆ ಬಳಿ ಕಾರು ನಿಲ್ಲಿಸಿ ದ್ವಿಚಕ್ರ ವಾಹನದಲ್ಲಿ ತಮ್ಮ ಮನೆಯತ್ತ ತೆರಳಿದ್ದರು. ಚಾಲಕ ಸ್ಥಳದಿಂದ ಹೋಗುತ್ತಿದ್ದಂತೆ ಪ್ರತಿಮಾ ಮನೆಯತ್ತ ಹೋಗಿದ್ದರು. ಭಾನುವಾರ ಕುಟುಂಬದ ಕಾರ್ಯಕ್ರಮವಿತ್ತು. ಈ ಬಗ್ಗೆ ಮಾತನಾಡಲು ಸಹೋದರ ಪ್ರತೀಶ್, ರಾತ್ರಿ 8 ಗಂಟೆ ಸುಮಾರಿಗೆ ಪ್ರತಿಮಾ ಅವರಿಗೆ ಕರೆ ಮಾಡಿದ್ದರು. ಆದರೆ, ಅವರು ಕರೆ ಸ್ವೀಕರಿಸಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

8ನೇ ಪುಟ ನೋಡಿ

ಅರಣ್ಯ ಸಿಬ್ಬಂದಿ ಗುಂಡೇಟು; ಬೇಟೆಗಾರ ಸಾವು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದಲ್ಲಿ ಭಾನುವಾರ ಮುಂಜಾನೆ ಕಡವೆ ಬೇಟೆಯಾಡಿದ್ದ ತಂಡ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆದು, ಸಿಬ್ಬಂದಿ ಗುಂಡೇಟಿಗೆ ಬೇಟೆಗಾರ ಮೃತಪಟ್ಟಿದ್ದಾನೆ.

ಮನು

ಗುಂಡ್ಲುಪೇಟೆ ತಾಲ್ಲೂಕಿನ ಭೀಮನಬೀಡು ನಿವಾಸಿ ಮನು (27) ಮೃತಪಟ್ಟವನು. ಹೊಂಗಹಳ್ಳಿ ಬಳಿ ಘಟನೆ ನಡೆದಿದೆ. ಮೃತದೇಹದ ಬಳಿ ಗೋಣಿಚೀಲದಲ್ಲಿ ತುಂಬಿದ್ದ ಕಡವೆಯ ತಲೆ,ಕಾಲುಗಳು,ಮಾಂಸ ಪತ್ತೆಯಾಗಿದೆ.

ಬಂದೂಕು ಹಾಗೂ ಇತರ ಆಯುಧಗಳಿದ್ದ ಏಳೆಂಟು ಜನರ ತಂಡ ಶನಿವಾರ ತಡರಾತ್ರಿ ಸಂರಕ್ಷಿತ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ ಕಡವೆಯನ್ನು ಬೇಟೆಯಾಡಿದೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಬಿಎಂಪಿ: ಆಸ್ತಿ ಡಿಜಿಟಲೀಕರಣ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಪಿಎಂಪಿಯಲ್ಲಿ 'ಎ' ಖಾತಾ ಮತ್ತು 'ಬಿ' ಖಾತಾ ಪ್ರಮಾಣ ಪತ್ರಗಳನ್ನು ತ್ವರಿತವಾಗಿ ನೀಡಲು ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಗೊಳಿಸುವ ವಿಶೇಷ ಅಭಿಯಾನ ಆರಂಭಗೊಂಡಿದೆ.

ಭ್ರಷ್ಟಾಚಾರ ನಿಯಂತ್ರಣ ಮತ್ತು ಕೆಲಸದ ವಿಳಂಬ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದ್ದು, ಆಸ್ತಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಮೊದಲ ಹಂತದ ಪ್ರಕ್ರಿಯೆ ಆರಂಭವಾಗಿದೆ. ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒಗಳು) ಶನಿವಾರ ಬಿಬಿಎಂಪಿಯ ಎಂಟು ವಲಯ ಕಚೇರಿಗಳಲ್ಲಿ ದಾಖಲೆಗಳನ್ನು ನಿರ್ದಿಷ್ಟ ರೂಪದಲ್ಲಿ ಡಿಜಿಟಲೀಕರಣ ಗೊಳಿಸುವ ಕಾರ್ಯ ನಡೆಸಿದರು. ಸುಮಾರು 20 ಲಕ್ಷ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಬೇಕಿದೆ. ಕಂದಾಯ ಇಲಾಖೆ ಖಾಸಗಿ ಏಜೆನ್ಸಿಗಳ ಸಹಾಯ ಪಡೆದುಕೊಂಡಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರ ಸೂಚನೆಯ ಮೇರೆಗೆ ಡಿಜಿಟಲ್ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸದ್ಯ ಬಹುತೇಕ ಬಿಬಿಎಂಪಿ ವಾರ್ಡ್‌ಗಳಲ್ಲಿ ಖಾತಾ ಪ್ರಮಾಣಪತ್ರಗಳನ್ನು ಮುದ್ರಿತ ರೂಪದಲ್ಲಿ ನೀಡಲಾಗುತ್ತಿದೆ. ಸ್ಕ್ಯಾನಿಂಗ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆಸ್ತಿ ದಾಖಲೆಗಳನ್ನು ಸಂಪೂರ್ಣವಾಗಿ ಡಿಜಿಟಲ್‌ಗೆ ವರ್ಗಾಯಿಸಲಾಗುವುದು. ಆಗ 'ಬಿ' ಖಾತಾ ಪಟ್ಟಿಯಲ್ಲಿರುವ ಆಸ್ತಿಗಳಿಗೆ ಅಕ್ರಮವಾಗಿ 'ಎ' ಖಾತಾ ಪ್ರಮಾಣ ಪತ್ರ ನೀಡುವಂತಹ ಪ್ರಕರಣಗಳಿಗೆ ಕಡಿವಾಣ ಬೀಳಲಿದೆ. ಬಿಬಿಎಂಪಿಗೆ ಉಂಟಾಗುವ ಆದಾಯ ನಷ್ಟವೂ ತಪ್ಪಲಿದೆ.

'ಡಿಜಿಟಲೀಕರಣದ ಮೇಲ್ವಿಚಾರಣೆ ಜವಾಬ್ದಾರಿಯನ್ನು ವಲಯ ಜಂಟಿ ಆಯುಕ್ತರು ಮತ್ತು ಜಿಲ್ಲಾಧಿಕಾರಿಗೆ ವಹಿಸಲಾಗಿದೆ. ಮುಂದಿನ ಮೂರು ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸುವ ವಿಶ್ವಾಸವಿದೆ. ಆಸ್ತಿ ಸಂಬಂಧಿತ ಎಲ್ಲ ವಹಿವಾಟುಗಳನ್ನು ಆನ್‌ಲೈನ್ ಮೂಲಕ ಮಾಡುವುದರಿಂದ ದುರುಪಯೋಗವೂ ತಪ್ಪಲಿದೆ' ಎಂದು ಬಿಬಿಎಂಪಿಯ ವಿಶೇಷ ಆಯುಕ್ತ (ಕಂದಾಯ) ಮುನೀಶ್ ಮೌದ್ಗಿಲ್ ಪ್ರತಿಕ್ರಿಯಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

ಶಿವಾನಂದ ವೃತ್ತದ ಕುಮಾರಕೃಪಾ ಪಾರ್ಕ್ ಈಸ್ಟ್ ರಸ್ತೆಯ ಪಾದಚಾರಿ ಮಾರ್ಗದ ದುಸ್ಥಿತಿ.

'ಪಾದಚಾರಿ ಮಾರ್ಗ ಸರಿಪಡಿಸಿ'

ಶಿವಾನಂದ ವೃತ್ತದ ಕುಮಾರಕೃಪಾ ಪಾರ್ಕ್ ಈಸ್ಟ್ ರಸ್ತೆಯ ಪಾದಚಾರಿ ಮಾರ್ಗವು ಹಾಳಾಗಿದೆ. ಒಂದು ಬದಿಯಿಂದ ಇನ್ನೊಂದು ಬದಿಗೆ ಸಾಗುವ ಮಧ್ಯದಲ್ಲಿ ಗುಂಡಿ ಬಿದ್ದಿದ್ದು, ಅದಕ್ಕೆ ಬ್ಯಾರಿಕೇಡ್ ಹಾಕಲಾಗಿದೆ. ಇದರಿಂದ, ಮುಖ್ಯರಸ್ತೆಯಲ್ಲಿ ಹಾದು ಮತ್ತೊಂದು ಬದಿಯ ಪಾದಚಾರಿ ಮಾರ್ಗಕ್ಕೆ ಹೋಗಬೇಕಾದ ಸ್ಥಿತಿ ನಿರ್ಮಾಣ ವಾಗಿದೆ. ಇದರಿಂದ, ವಿದ್ಯಾರ್ಥಿಗಳು, ಮಹಿಳೆಯರು ವೃದ್ಧರಿಗೆ ಸಮಸ್ಯೆಯಾಗುತ್ತಿದೆ. ಕೂಡಲೇ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ರಾಜೇಶ್, ಸ್ಥಳೀಯ ನಿವಾಸಿ

'ಬೇಕಾದಾಗ ಉರಿಯದ ಬೀದಿ ದೀಪ'



ಶಿವನಗರ ಸಂಜೆ 5 ಗಂಟೆಗೇ ಹೊತ್ತಿಸಿರುವ ಬೀದಿ ದೀಪ.

ಶಿವನಗರದ 12ನೇ ಡಿ ಮುಖ್ಯ ರಸ್ತೆಯಲ್ಲಿ ಸಂಜೆ 5 ಗಂಟೆಗೆ ಬೀದಿ ದೀಪಗಳನ್ನು ಉರಿಸಲಾಗುತ್ತದೆ. ಮುಂಜಾನೆ 5 ಗಂಟೆಗೆ ಇನ್ನೂ ಕತ್ತಲೆ ಇರುವಾಗಲೇ ಈ ಬೀದಿ ದೀಪಗಳನ್ನು ಆರಿಸಲಾಗುತ್ತಿದೆ. ಇದರಿಂದ, ವಾಯುವಿಹಾರಕ್ಕೆ ತೆರಳುವವರಿಗೆ ಅಸುರಕ್ಷತೆ ಭಯ ಕಾಡುತ್ತಿದೆ. ಸಾರ್ವಜನಿಕರಿಗೆ ಬೇಕಾದಾಗ ಸರಿಯಾದ ಸಮಯದಲ್ಲಿ ದೀಪ ಹಾಕಬೇಕು ಮತ್ತು ಸರಿಯಾದ ಸಮಯದಲ್ಲಿ ಆರಿಸುವಂತೆ ಬಿಬಿಎಂಪಿ ಕ್ರಮ ಕೈಗೊಳ್ಳಬೇಕು.

ಎಂ.ಎ.ಪಾಷ, ಸ್ಥಳೀಯ ನಿವಾಸಿ

ಆಂಜನೇಯ ದೇವಸ್ಥಾನದ ಪಾದಚಾರಿ ಮಾರ್ಗದಲ್ಲಿ ತರಕಾರಿ ಮಾರಾಟ ಮಾಡುತ್ತಿರುವುದು.

'ತರಕಾರಿ ಮಾರಾಟಗಾರರನ್ನು ಸ್ಥಳಾಂತರಿಸಿ'

ಅವೆನ್ಯೂ ರಸ್ತೆಯಿಂದ ಆಂಜನೇಯ ದೇವಸ್ಥಾನದ ಹಿಂಭಾಗದ ಪಾದಚಾರಿ ಮಾರ್ಗ ಮತ್ತು ಮೈಸೂರು ಬ್ಯಾಂಕ್ ವೃತ್ತದ ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿಗಳಲ್ಲಿ ಹಣ್ಣು-ತರಕಾರಿ ಮಾರಾಟ ಮಾಡುವವರನ್ನು ಸ್ಥಳಾಂತರಿಸಬೇಕು. ಇದರಿಂದ, ಪ್ರತಿನಿತ್ಯ ಸಂಚಾರ ದಟ್ಟಣೆಯಾಗುತ್ತಿದ್ದು, ಶಾಲಾ-ಕಾಲೇಜು ಸೇರಿದಂತೆ ಕಚೇರಿಗಳಿಗೆ ತಲುಪಲು ತಡವಾಗುತ್ತಿದೆ. ಪೊಲೀಸ್ ಕಂಟ್ರೋಲ್ ರೂಂಗೆ ದೂರು ನೀಡಲಾಗಿದೆ. ಆದರೆ, ಹಲಸೂರು ಗೇಟ್, ಉಪ್ಪಾರಪೇಟೆ ಮತ್ತು ಚಿಕ್ಕಪೇಟೆ ಪೊಲೀಸ್ ಠಾಣೆಯ ಪೊಲೀಸರು ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ. ಸಂಚಾರ ಪೊಲೀಸರು, 'ಇದಕ್ಕೂ ನಮಗೂ ಸಂಬಂಧವೇ ಇಲ್ಲ' ಎನ್ನುವಂತೆ ವರ್ತಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ತರಕಾರಿ ವ್ಯಾಪಾರಿಗಳನ್ನು ಬೇರೆ ಕಡೆ ಸ್ಥಳಾಂತರ ಮಾಡುವ ಕೆಲಸ ಮಾಡಬೇಕು.

ಗೋಪಾಲ್ ಕೆ., ವಾಹನ ಸವಾರ

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ಕಮ್ಮನಹಳ್ಳಿಯ ಸ್ವಾಮಿ ಉಲ್ಲಾಸಪ್ಪ (ಎಂಪಾಯರ್) ವೃತ್ತದ ರಸ್ತೆಯ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಈ ಪಾದಚಾರಿ ಮಾರ್ಗದಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳು, ವೃದ್ಧರು ಮತ್ತು ಮಹಿಳೆಯರು ಓಡಾಡುತ್ತಾರೆ. ಆದರೆ, ಈ ಪಾದಚಾರಿ ಮಾರ್ಗದಲ್ಲಿರುವ ನೆಲ ಹಾಸು(ಪೇವರ್ಸ್) ಕಿತ್ತು ಹೋಗಿದ್ದು, ರಸ್ತೆಯಲ್ಲಿ ನಡೆಯುವುದೇ ದುಸ್ತರವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಸ್ವಾಮಿ, ಸ್ಥಳೀಯ ನಿವಾಸಿ

ಸ್ವಾಮಿ ಉಲ್ಲಾಸಪ್ಪ ವೃತ್ತದ ರಸ್ತೆಯ ಪಾದಚಾರಿ ಮಾರ್ಗದ ನೆಲಹಾಸು(ಪೇವರ್ಸ್) ಕಿತ್ತು ಹೋಗಿರುವುದು.

'ವಿದ್ಯಾರಣ್ಯಪುರ: ರಸ್ತೆಯಲ್ಲಿರುವ ಕಸ ತೆರವುಗೊಳಿಸಿ'

ವಿದ್ಯಾರಣ್ಯಪುರದ ಎಚ್‌ಎಂಟಿ ಬಡಾವಣೆಯ 1ನೇ ಬ್ಲಾಕ್‌ನ 11ನೇ ಮುಖ್ಯರಸ್ತೆಯಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಬಿಬಿಎಂಪಿ ಪೌರಕಾರ್ಮಿಕರು ಈ ಭಾಗದ ಎಲ್ಲ ರಸ್ತೆಗಳ ಕಸವನ್ನು ಈ ರಸ್ತೆಯ ಅಂಚಿನಲ್ಲಿ ಹಾಕುತ್ತಿದ್ದಾರೆ. ಒಂದು ವಾರವಾದರೂ ಕಸದ ರಾಶಿಯನ್ನು ವಿಲೇವಾರಿ ಮಾಡುತ್ತಿಲ್ಲ. ಜತೆಗೆ ಕೆಲ ನಾಗರಿಕರು ಸಹ ತಮ್ಮ ಮನೆಯ ಕಸ ಇಲ್ಲಿಯೇ ಹಾಕುತ್ತಿದ್ದಾರೆ. ಇದರಿಂದ, ಈ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಕಸ ವಿಲೇವಾರಿ ಮಾಡಿ ಬಡಾವಣೆ ಸೌಂದರ್ಯ ಹೆಚ್ಚಿಸಬೇಕು.

ವಿದ್ಯಾರಣ್ಯಪುರ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ.

ಮಂಜುನಾಥ, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗ ಸ್ವಚ್ಛಗೊಳಿಸಿ'

ನಗರದ ಪಿ. ಕಾಳಿಂಗರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇಲ್ಲಿ ಕಟ್ಟಡ ತ್ಯಾಜ್ಯ, ಮನೆ ತ್ಯಾಜ್ಯ ಸೇರಿ ರಾಶಿಗಟ್ಟಲೇ ಪ್ಲಾಸ್ಟಿಕ್ ಹಾಕಲಾಗುತ್ತಿದೆ. ಬಿಬಿಎಂಪಿಯಿಂದ ಇಲ್ಲಿ ಕಸ ಹಾಕುವವರಿಗೆ ದಂಡ ವಿಧಿಸಲಾಗುವುದು ಎಂಬ ಬ್ಯಾನರ್ ಹಾಕಲಾಗಿದೆ. ಆದರೂ ಎಲ್ಲರೂ ಇಲ್ಲಿಯೇ ಕಸ ಹಾಕುತ್ತಾರೆ. ಬಿಬಿಎಂಪಿ ಸಿಬ್ಬಂದಿ ಇಲ್ಲಿನ ಕಸ ತೆರವುಗೊಳಿಸುವ ಕೆಲಸ ಮಾಡುತ್ತಿಲ್ಲ. ಈ ರಸ್ತೆಯಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ.



ನಗರದ ಪಿ. ಕಾಳಿಂಗರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ.

ಶಿವಪ್ರಸಾದ್, ಸ್ಥಳೀಯ ನಿವಾಸಿ,

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Notice is hereby given to the general public that my client is intending to purchase all that immovable property described in the Schedule B and C hereunder from its present owner **Mr. SUBIR KAWAL HIRA,** aged about 54 years, son of Mr. Kawal Lilaram Hira, Ordinarily at 296, Evelyn Way, San Francisco, CA 94127, USA, presently at Flat No.201, 2nd Floor, "UMIYA ORCHID", No.228, 2nd Main, 6th Cross, Defence Colony, Indiranagar, Bangalore-560 038, who is representing that he is the absolute owner of the Schedule B and C property, other than himself no other person/s have any right, title, interest or charge over the Schedule B and C property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/their/objection/s with relevant documentary proof to the undersigned at the address given below within **SEVEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule B and C property and my client will proceed to complete the Sale transaction.

SCHEDULE- A

All that piece and parcel of the immovable property bearing Municipal Corporation No.228, situated at **Defence Colony,** HAL 2nd Stage, in the Bruhat Bangalore Mahanagara Palike Ward No.74, New Ward No.80, Bangalore, measuring East to West 105 feet and North to South 70 feet, in all measuring a total extent of 7350 square feet and bounded on the: East by: Property bearing No.247; West by:30 feet Road; North by: Property bearing No.277; South by: Property bearing No.229;

SCHEDULE - B

An undivided 11.755% share, right, title, interest and ownership in the Schedule 'A' Property mentioned herein above. (which is equivalent to 864 square feet)

SCHEDULE - C

All that piece and parcel of Residential Flat bearing **No.201,** present **Municipal Corporation Sub No.228/4, PID No.74-2-228/4,** on the Second Floor of the multi-storied apartment building known as **"UMIYA ORCHID",** having a super built up area of about **2045** square feet, (which is inclusive of balconies and a proportionate share in the common areas) together with Two car parking space in the Basement of the apartment building.

Bangalore
Dated 04.11.2023.

A. NAGARAJA, Advocate & Notary,
No. 6, KHB Buildings, II Block,
13th Cross, Indiranagar II Stage,
Bangalore - 560 038.Ph:9448067511.

DH Classifieds More value, more impact
NAME CHANGE
ಪ್ರಜಾವಾಣಿ
Tell us your New Name!
Book your AD WITH US NOW!
www.dhclassifieds.com
BOOK NOW
For more details contact:
9886213331 | 9901641752
9845114560 | 9900428036
9731810277 | 080- 45557163/164

EDUCATION CORNER

SINCE 2004
BALC®
ರಿಯಾಯಿತಿ 50%
ಬಾಲ್ಕ್ - 50% ರಿಯಾಯಿತಿ ಶುಲ್ಕದಲ್ಲಿ
ಶ್ರೇಷ್ಠ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣ
Learn : Tally Prime, Adv Excel, SAP, C, C++, Java, Python AI, ML, Civil / Mechanical CADD, DTP, Web Design, Animation, Digital Marketing Training, Spoken English

ಬಾಲ್ಕ್ ರಾಜಾಜಿನಗರ 88848 68882
ಬಾಲ್ಕ್ ಟೋಲ್ಗೇಟ್ 88847 08887
ಬಾಲ್ಕ್ ಸುಂಕದಕಟ್ಟೆ 98860 50481/2
ಬಾಲ್ಕ್ ಜಯನಗರ 8884 483 483
ಬಾಲ್ಕ್ ಉಲ್ಲಾಳುರಸ್ತೆ 88845 48887
ಬಾಲ್ಕ್ ಬಸವನಗುಡಿ 8884 482 482
ಕೋಣನಕುಂಟೆ ಕ್ರಾಸ್ 8884 72 8887
ಕೆಂಗೇರಿ ಉಪನಗರ 8884 64 8887
www.balc.in
www.balccadd.com

BUSINESS

Business Offers

Finance

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Machinery & Tools

SALE: TWO DG set of 62.5KV & 15.1KV are for SALE. Interested parties may inspect between 10.30am & 5.00pm at:- Indira Gandhi National Open University, Old BMTC Divisional Office (South),Shanthinagar, Bangalore-27, and submit quotations in a sealed envelope within 7days from the date of this Advertisement. For details contact: 9900569598. Sr.Regional Director

JOB OPPORTUNITIES

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Commerical

Joint Venture

COMMERCIAL PROPERTY for JD in Prime location measuring 62x62 K.G. Road, Gandhinagar, Bangalore. Contact:- 9448363096.

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

H.O:#156, 8th Main, 17th Cross, Malleswaram, Bengaluru - 560 055. Ph: 080- 23341972/ 2344 9450/ 2344 2648

ಸ್ಥಿರಾಸ್ತಿ ಸ್ವಾಧೀನತೆಯ ಪ್ರಕಟಣೆ

ಕೆಳಸಹಿದಾರರು ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: **12-07-2023**ರಂದು ಈ ಕೆಳಗಿನ ಸಾಲಗಾರರಾದ **ಶ್ರೀ. ಮುನಿಯಪ್ಪ, ದಿವಂಗತರಾಗಿದ್ದು, ಕೆಳಕಂಡ ಇವರ ಉತ್ತರಾಧಿಕಾರಿಗಳಾದ ಶ್ರೀಮತಿ ಮುನಿವೆಂಕಟಮ್ಮ, ಲೇಟ್ ಮುನಿಯಪ್ಪ ರವರ ಪುತ್ರಿ, ಶ್ರೀಮತಿ ಭೈರಮ್ಮ, ಲೇಟ್ ಮುನಿಯಪ್ಪರವರ ಪುತ್ರಿ, ಶ್ರೀಮತಿ ಸರಸ್ವತಿ, ಲೇಟ್ ಮುನಿಯಪ್ಪರವರ ಪುತ್ರಿ,** 215, 1ನೇ ಮೈನ್, ಸುಬ್ರಮಣ್ಯನಗರ, ಬೆಂಗಳೂರು-560021. ಇವರಿಗೆ ದಿನಾಂಕ **12-07-2023ರ** ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.6,66,627/ ಮತ್ತು ರೂ.67,582/- ಒಟ್ಟು ಮೊತ್ತ ರೂ.7,59,209/- (ಏಳು ಲಕ್ಷ ಐವತ್ತೊಂಬತ್ತು ಸಾವಿರದ ಇನ್ನೂರ ಒಂಬತ್ತು ರೂಗಳು ಮಾತ್ರ).** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ **13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 31.10.2023 ರಂದು** ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,** 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560 055ಗೆ ದಿನಾಂಕ **30.06.2023** ರವರೆಗೆ ಬರಬೇಕಾದ ಬಾಕಿ **ರೂ.6,66,627/ ಮತ್ತು ರೂ.67,582/- ಒಟ್ಟು ಮೊತ್ತ ರೂ. 7,59,209/- (ಏಳು ಲಕ್ಷ ಐವತ್ತೊಂಬತ್ತು ಸಾವಿರದ ಇನ್ನೂರ ಒಂಬತ್ತು ರೂಗಳು ಮಾತ್ರ** ಪಾವತಿಸಬೇಕು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ), ಹಾಗೂ ಬಡ್ಡಿಯನ್ನು ಪರಿಗಣಿಸಲಾಗುವುದು.

ಸ್ಥಿರಾಸ್ತಿಯ ವಿವರ

ಬಿ.ಬಿ.ಎಂ.ಪಿ ವಾರ್ಡ್ ನಂ.9, (ಸುಬ್ರಮಣ್ಯನಗರ) (ಪಿ.ಐ.ಡಿ. ವನಂ.9-33-14) ನಂ.14, ಹಳೇ ನಂ.36. ಮುನೇಶ್ವರ ಟೆಂಪಲ್ ರೋಡ್, ಎ ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ 18 ಅಡಿ, ಉತ್ತರದಿಂದ ದಕ್ಷಿಣಕ್ಕೆ 48 ಅಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ - ಚಿಕ್ಕತಮ್ಮಯ್ಯ ರವರ ಸೈಟ್, ಪಶ್ಚಿಮಕ್ಕೆ - ಚಿಕ್ಕಮುನಿಯಪ್ಪ ರವರ ಸೈಟ್, ಉತ್ತರಕ್ಕೆ - ದೊಡ್ಡಮುನಿಸ್ವಾಮಪ್ಪ ನವರ ಸೈಟ್, ದಕ್ಷಿಣಕ್ಕೆ - ರೋಡ್.

ಕೆಳಸಹಿದಾರರು ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: **03-07-2023**ರಂದು ಈ ಕೆಳಗಿನ ಸಾಲಗಾರರಾದ **ಶ್ರೀಮತಿ ಸ್ವರ್ಣ. ಜೆ.ಶಿವಲಿಂಗಯ್ಯ, ಜೆ.ಶಿವಲಿಂಗಯ್ಯ ರವರ ಪತ್ನಿ,** ನಂ.578, 10ನೇ 'ಡಿ' ಕ್ರಾಸ್, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಹಂತ, ಮಹಾಲಕ್ಷ್ಮಿಪುರಂ, ಬೆಂಗಳೂರು-560086. ಇವರಿಗೆ ದಿನಾಂಕ **03-07-2023ರ** ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.71,51,204/- (ಎಪ್ಪತ್ತೊಂದು ಲಕ್ಷ ಐವತ್ತೊಂದು ಸಾವಿರದ ಇನ್ನೂರ ನಾಲ್ಕು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ **13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 31.10.2023 ರಂದು** ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,** 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560 055ಗೆ ದಿನಾಂಕ **31.05.2023** ರವರೆಗೆ ಬರಬೇಕಾದ ಬಾಕ್ತಿ **ರೂ71,51,204/- (ಎಪ್ಪತ್ತೊಂದು ಲಕ್ಷ ಐವತ್ತೊಂದು ಸಾವಿರ ಇನ್ನೂರ ನಾಲ್ಕು ರೂಗಳು ಮಾತ್ರ)** ಪಾವತಿಸಬೇಕು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ), ಹಾಗೂ ಬಡ್ಡಿಯನ್ನು ಪರಿಗಣಿಸಲಾಗುವುದು.

ಸ್ಥಿರಾಸ್ತಿಯ ವಿವರ

ಬಿ.ಬಿ.ಎಮ್.ಪಿ ವಾರ್ಡ್ ನಂ.78, ವಸಂತನಗರ, ಪಿ.ಐ.ಡಿ ನಂ.78-85-5/1, ಬಿ.ಬಿ.ಎಮ್.ಪಿ./ಬಿ.ಡಿ.ಎ/ಮುನಿಸಿಪಲ್/ಪ್ರಾಪರ್ಟಿ ಹೊಸ ನಂ. 5/1, 1ನೇ ಕ್ರಾಸ್, ವಸಂತನಗರ, ಬೆಂಗಳೂರು-560052 ವಿಭಾಗವಾಗದ ಸ್ವತ್ತಿನ ಪ್ರಾಪರ್ಟಿಯ 1/5 ಭಾಗ ಪೂರ್ವದಿಂದ ಪಶ್ಚಿಮಕ್ಕೆ 60 ಅಡಿ ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ-ಪ್ರಾಪರ್ಟಿ ನಂ.29, ಪಶ್ಚಿಮಕ್ಕೆ-ರೋಡ್, ಉತ್ತರಕ್ಕೆ-ಪ್ರಾಪರ್ಟಿ ನಂ.36, ದಕ್ಷಿಣಕ್ಕೆ-ಪ್ರಾಪರ್ಟಿ ನಂ.34.

ಕೆಳಸಹಿದಾರರು ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: **12-07-2023**ರಂದು ಈ ಕೆಳಗಿನ ಸಾಲಗಾರರಾದ **ರಾಮಸ್ವಾಮಿ.ಜಿ ದಿವಂಗತರಾಗಿದ್ದು ಕೆಳಕಂಡ ಇವರ ಉತ್ತರಾಧಿಕಾರಿಗಳಾದ ಶ್ರೀಮತಿ ನಂಜಮ್ಮ, ಲೇಟ್ ರಾಮಸ್ವಾಮಿ.ಜಿ ರವರ ಪತ್ನಿ, ಶ್ರೀ ಯಶೋಧರಮೂರ್ತಿ.ಆರ್, ಲೇಟ್ ರಾಮಸ್ವಾಮಿ.ಜಿ ರವರ ಪುತ್ರ, ಶ್ರೀ ರವಿಕುಮಾರ್.ಆರ್, ಲೇಟ್ ರಾಮಸ್ವಾಮಿ.ಜಿ ರವರ ಪುತ್ರ, ಶ್ರೀ ಬಾಲರಾಜು.ವೈ, ಶ್ರೀ ಯಶೋಧರಮೂರ್ತಿ.ಆರ್ ರವರ ಪುತ್ರ, ಶೀ ಚಂದ್ರಶೇಖರ್.ವೈ ಶ್ರೀ ಯಶೋಧರಮೂರ್ತಿ.ಆರ್ ರವರ ಪುತ್ರ,** ನಂ.11, ಹಳೇ ನಂ.5, 16ನೇ ಕ್ರಾಸ್, 13ನೇ ಮೈನ್, ಮಲ್ಲೇಶ್ವರಂ, ಬೆಂಗಳೂರು-560055 ಇವರಿಗೆ ದಿನಾಂಕ **12-07-2023ರ** ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.52,74,587/- (ಐವತ್ತೆರಡು ಲಕ್ಷ ಎಪ್ಪತ್ತನಾಲ್ಕು ಸಾವಿರದ ಐನೂರ ಎಂಬತ್ತೇಳು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ **13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 31.10.2023 ರಂದು** ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,** 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560 055ಗೆ ದಿನಾಂಕ **30.06.2023** ರವರೆಗೆ ಬರಬೇಕಾದ ಬಾಕ್ತಿ **ರೂ.52,74,587/-** (ಐವತ್ತೆರಡು ಲಕ್ಷ ಎಪ್ಪತ್ತನಾಲ್ಕು ಸಾವಿರದ ಐನೂರ **ಎಂಬತ್ತೇಳು ರೂಗಳು ಮಾತ್ರ)** ಪಾವತಿಸಬೇಕು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ), ಹಾಗೂ ಬಡ್ಡಿಯನ್ನು ಪರಿಗಣಿಸಲಾಗುವುದು.

ಸ್ಥಿರಾಸ್ತಿಯ ವಿವರ

ಬಿ.ಬಿ.ಎಮ್.ಪಿ ವಾರ್ಡ್ ನಂ.7, ಪಿ.ಐ.ಡಿ ನಂ.7-29-5 ನಂ.11, ಹಳೇ ನಂ.5, 13ನೇ ಮೈನ್, 16ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ 81+71/2, ಅಡಿ, ಉತ್ತರದಿಂದ ದಕ್ಷಿಣಕ್ಕೆ-40 ಅಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ-13ನೇ ಮೈನ್ ರೋಡ್, ಪಶ್ಚಿಮಕ್ಕೆ-ರೈಲ್ವೆ ಲೈನ್, ಉತ್ತರಕ್ಕೆ-ಮನೆ ನಂ.4, ದಕ್ಕಿಣಕ್ಕೆ-ಮನೆ ನಂ.6.

ದಿನಾಂಕ: **31.10.2023**
ಬೆಂಗಳೂರು.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ

ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಲೇಖಕ ಚೌಡಯ್ಯ ವಿರಚಿತ 'ಭೋವಿ ಸಂಘ ನಡೆದು ಬಂದ ದಾರಿ' ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ರಾಜ್ಯ ಭೋವಿ(ವಡ್ಡರ) ಸಂಘದ ಅಧ್ಯಕ್ಷ ಎಸ್.ಎಲ್.ಗಂಗಾಧರಪ್ಪ, ಮಾಜಿ ಸಿ.ಎಂ ವೀರಪ್ಪ ಮೊಯಿಲಿ, ಮಾಜಿ ಶಾಸಕ ಎಂ.ವಿ.ನಾಗರಾಜು, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ ಇದ್ದಾರೆ.

ನೆಲಮಂಗಲ: ಸಮಾಜದ ಒಳಿತಿಗಾಗಿ ಜೀವಿಸುವವರು ಶ್ರೇಷ್ಠರು. ಮಕ್ಕಳ ಶ್ರೇಯಕ್ಕಾಗಿ ಶ್ರಮಿಸುವ ತಂದೆ, ತಾಯಿ ಮಹಾ ತ್ಯಾಗಿಗಳು ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ತಿಳಿಸಿದರು.

ರಾಜ್ಯ ಭೋವಿ ಸಂಘ ಆಯೋಜಿಸಿದ್ದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಹಾಗೂ 'ಭೋವಿ ಸಂಘ ನಡೆದು ಬಂದ ದಾರಿ'ಯ ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೌಢ್ಯದ ಬದುಕನ್ನು ನೀಡುವ ಸಮಾಜದ ಮಧ್ಯೆ ಸತ್ಯವನ್ನು ಹುಡುಕಾಟ ಮಾಡುವ ಶಕ್ತಿಯನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಭೋವಿ ಭವನವನ್ನು ರಾಜಧಾನಿಯಲ್ಲಿ ನಿರ್ಮಾಣ ಮಾಡಲಾಗಿದೆ. 6 ವರ್ಷಗಳಿಂದ ಪ್ರತಿ ಜಿಲ್ಲೆಯಲ್ಲೂ ಪ್ರತಿಭಾನ್ವಿತರಿಗೆ ನಗದು ಬಹುಮಾನ ನೀಡಲಾಗುತ್ತಿದೆ ಎಂದು ರಾಜ್ಯ ಭೋವಿ(ವಡ್ಡರ) ಸಂಘದ ಅಧ್ಯಕ್ಷ ಎಸ್. ಎಲ್. ಗಂಗಾಧರಪ್ಪ ವಿವರ ನೀಡಿದರು.

ಸಂಘದ ಚಟುವಟಿಕೆಗಳಿಗೆ ಸಹಕಾರ ನೀಡುವುದಾಗಿ ಶಾಸಕ ಶ್ರೀನಿವಾಸ್ ತಿಳಿಸಿದರು. ಲೇಖಕ ಚೌಡಯ್ಯ ಅವರ 'ಎತ್ತಿನ ಹೊಳೆ ಯೋಜನೆಗೆ ಬಾರಮ್ಮ ನೇತ್ರಾವತಿ' ಹಾಗೂ 'ಭೋವಿ ಸಂಘ ನಡೆದು ಬಂದ ದಾರಿ' ಕೃತಿಗಳನ್ನು ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ ಲೋಕಾರ್ಪಣೆ ಮಾಡಿದರು. ಭೋವಿ ಸಂಘ ನಿರ್ಮಾಣಕ್ಕೆ ₹5 ಲಕ್ಷ ನೀಡುವುದಾಗಿ ಭರವಸೆ ನೀಡಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಆಗಮಿಸಿದ್ದ 56 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಮಾಜಿ ಶಾಸಕ ಎಂ.ವಿ. ನಾಗರಾಜು ಲೇಖಕ ಎಲ್.ಎನ್. ಮುಕುಂದರಾಜು, ಸಂಘದ ಸಂಚಾಲಕ ರಾಜಣ್ಣ, ಮಾಕಳಿ ರವಿ, ಕಾಂಗ್ರೆಸ್ ಮುಖಂಡ ಗೋವರ್ಧನ್ (ಗೋಪಿ) ಇದ್ದರು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಮಾದಿಗ ಸಮುದಾಯ ಮುಖಂಡರ ಸಭೆ: ಅತಿಥಿಗಳು: ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಎಲ್. ಹನುಮಂತಯ್ಯ, ಎಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ರೂಪಾ ಶಶಿಧರ್, ಡಿ. ತಿಮ್ಮಯ್ಯ, ಕೆ.ಎಸ್. ಬಸವಂತಪ್ಪ, ಎನ್. ಶ್ರೀನಿವಾಸ್, ಧರ್ಮಸೇನ, ಜಿ.ಎಸ್. ಮಂಜುನಾಥ್, ಆಯೋಜನೆ: ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಮಧ್ಯಾಹ್ನ 3

'ಐಸಿರಿ-2023' ಕರುನಾಡ ಸಾಂಸ್ಕೃತಿಕ ಉತ್ಸವ: ಅತಿಥಿಗಳು: ಎಂ. ಕೃಷ್ಣಪ್ಪ, ಯತೀಂದ್ರ ಸಿದ್ದರಾಮಯ್ಯ, ಪ್ರಿಯಕೃಷ್ಣ, ಡಿ. ರವಿಶಂಕರ್, ನೀಲಕಂಠೇಗೌಡ, ಪುಟ್ಟಣ್ಣ, ಅಧ್ಯಕ್ಷತೆ: ವಿನಯ್ ಕುಮಾರ್ ಜಿ.ಬಿ., ಆಯೋಜನೆ: ಇನ್‌ಸೈಟ್ಸ್‌ಐಎಎಸ್, ಇನ್‌ಸ್ಟಾ ಕೆಎಎಸ್, ಸ್ಥಳ: ಇನ್‌ಸೈಟ್ಸ್ ಐಎಎಸ್ ಮುಖ್ಯ ಕಚೇರಿ, ದ್ವಾರಕನಗರ, ಅತ್ತಿಗುಪ್ಪೆ, ಸಂಜೆ 4ರಿಂದ

'ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ' ಪ್ರದಾನ: ಎಂ.ಎನ್. ವೆಂಕಟಾಚಲಯ್ಯ, ಪ್ರಶಸ್ತಿ ಪುರಸ್ಕೃತರು: ಎಚ್.ಡಿ. ದೇವೇಗೌಡ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5.30



ಎಂ.ಎನ್. ವೆಂಕಟಾಚಲಯ್ಯ

'ಗಡಿನಾಡ ಕನ್ನಡ ಹೋರಾಟಗಾರರಿಗೆ ಸುವರ್ಣ ಪುರಸ್ಕಾರ, ಶಾಂತವೇರಿ ಗೋಪಾಲಗೌಡರ ನೆನಪಿನ ವಿಶೇಷ ಸಂಚಿಕೆ ಬಿಡುಗಡೆ: ರಾಜಪ್ಪ ದಳವಾಯಿ, ಉದ್ಘಾಟನೆ: ಸತೀಶ್ ಕುಲಕರ್ಣಿ, ಅತಿಥಿ: ಎಚ್.ಎಲ್. ಪುಷ್ಪ, ಪುರಸ್ಕಾರ ಪುರಸ್ಕೃತರು: ಅಶೋಕ ಚಂದರಗಿ, ಅ.ಕೃ. ಸೋಮಶೇಖರ್, ಕೆ.ಜಿ. ಶರಣಪ್ಪ ಗದಲೇಗಾಂವ, ಅಧ್ಯಕ್ಷತೆ: ಪಿ. ಮಲ್ಲಿಕಾರ್ಜುನಪ್ಪ, ಆಶಯ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಕನ್ನಡ ಹವ್ಯಾಸಿ ನಾಟಕೋತ್ಸವಕ್ಕೆ ಚಾಲನೆ: ಕೆ.ಎ. ದಯಾನಂದ, ಆಶಯ ನುಡಿ: ಮಂಗಳಾ, ಗಿರೀಶರಾವ್ ಹತ್ವಾರ್, ಉಪಸ್ಥಿತಿ: ಎಲ್. ವೆಂಕಟಪ್ಪ, ಎಂ. ನರಸಿಂಹ, ಅಧ್ಯಕ್ಷತೆ: ಶ್ರೀರಾಮೇಗೌಡ, ಟಿ. ಲಕ್ಷ್ಮಿನಾರಾಯಣ ಅವರ 'ಸ್ವಾತಂತ್ರ್ಯ ಸಮರ ಕರುನಾಡು ಅಮರ' ನಾಟಕ ಪ್ರದರ್ಶನ: ಪ್ರಸ್ತುತಿ: ರಂಗ ವಿಜಯ, ನಿರ್ದೇಶನ: ಮಾಲೂರು ವಿಜಿ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಸಂಜೆ 5.30

This festive season bring home a Kia and get a scratch card with an assured gift of up to ₹75 000, or get a chance to win a trip to Dubai as a bumper prize. Book and take delivery of your Kia and add more light to this auspicious time.

Scratch the card to win an assured gift of up to ₹ 75 000 (1st - 15th Nov)**

Bumper Prize Trip to Dubai | iPad 25.9 cm (10.2") (9th Gen) | iPhone 14 128GB | Cashback of ₹ 6 000 | Fuel Voucher of ₹ 6 000 | Kia Genuine Accessories of ₹ 6 000 | Gold Voucher Worth ₹ 10 000 | Philips Audio Multimedia 4.1 Speakers | Gift Card up to ₹ 10 000 | Choose Your Gift + Benefit Vouchers Worth ₹ 5 000

Exclusive ownership privileges for the Sonet* (1st - 30th Nov)

Free Maintenance for 3 years˅	Extended Warranty Up to 5 years#	Zero Down Payment Up to 100% processing fee waiver^	Additional Benefits for select corporates

Exclusive ownership privileges for the Carens* (1st - 30th Nov)

Special Accessories Package˜	Zero Down Payment Up to 100% processing fee waiver^	Additional Benefits for select corporates	Competitive Interest Rate 8.75% onwards^

Kia cars now available through Canteen Stores Department (CSD).

For more information, visit our dealership or contact: 1800 108 5000 | www.kia.com/in | Book Kia | 093195 91407 | kiacare@kiaindia.net | Look for "Kia India" @

*T&C Apply. **Scratch and win offer (1st – 15th Nov, 2023) is applicable only on Sonet & Carens and early delivery on Seltos (Selected trims only) as per availability. ˅Service inclusion as per periodic maintenance schedule defined in the owner's manual under normal driving conditions and applicable up to 3 years/30 000 km whichever is earlier. #Limited Period Offer. 3 year standard warranty & 2 year extended warranty. ^With select partners banks only. ˜Special accessory package is applicable on all trims (chrome kit).The product shown is for representation purposes only. Actual features, colors and specifications may not be part of standard fitment and may vary. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, and other details of any model as mentioned or to modify/discontinue any offer/scheme/service without prior notice. For more details, visit your nearest Kia dealership. Kia urges you to follow traffic rules. These are meant to keep you safe on roads. Valid only in Andhra Pradesh, Karnataka, and Telangana.

Advaith Kia Lalbagh Main Road Tel: 9611006006 | **Epitome Kia** Whitefield: Tel: 9606970216 Yelahanka: Tel: 7406343339 Kolar: Tel: 8951903224 | **JSP Kia** Hosur Road: Tel: 9606011244 Bellandur: Tel: 9071077717 | **Naara Kia** J.P Nagar Tel: 7406528200 | **PPS Kia** Mysore Road: Tel: 6309990010 Tumkur: Tel: 6303622210 | **Taapasi Kia** Kalyan Nagar Tel: 8095537777 | **VST Kia** Palace Road: Tel: 9606988123 Yeshwanthpur: Tel: 9606988124

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: **Ananda Honda - BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9844478636; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ವಾಣಿವಿಲಾಸ ಆಸ್ಪತ್ರೆಯ ಎದೆಹಾಲು ಬ್ಯಾಂಕ್‌ಗೆ ಉತ್ತಮ ಸ್ಪಂದನೆ • ಆಸ್ಪತ್ರೆ ಹೊರಗಡೆಯ ತಾಯಂದಿರಿಂದಲೂ ದಾನ

2 ಸಾವಿರ ಶಿಶುಗಳಿಗೆ ನೆರವಾದ 'ಅಮೃತಧಾರೆ'

• ವರುಣ ಹೆಗಡೆ

ಬೆಂಗಳೂರು: ಇಲ್ಲಿನ ವಾಣಿವಿಲಾಸ ಆಸ್ಪತ್ರೆಯ 'ಅಮೃತಧಾರೆ' ಎದೆಹಾಲು ಬ್ಯಾಂಕಿಗೆ ತಾಯಂದಿರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈ ಬ್ಯಾಂಕಿನ ನೆರವಿನಿಂದ ಎರಡು ಸಾವಿರ ಶಿಶುಗಳಿಗೆ ತಾಯಂದಿರ ಎದೆಹಾಲು ಒದಗಿಸಲಾಗಿದೆ.

ಅಗತ್ಯ ಪ್ರಮಾಣದಲ್ಲಿ ಎದೆಹಾಲು ಸಿಗದ ಹಾಗೂ ಎದೆಹಾಲು ವಂಚಿತ ಮಕ್ಕಳಿಗಾಗಿ ನಿರ್ಮಿಸಲಾಗಿದ್ದ ಈ ಬ್ಯಾಂಕ್‌ಗೆ ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಇದು ಸರ್ಕಾರಿ ವ್ಯವಸ್ಥೆಯಡಿ ನಿರ್ಮಾಣವಾದ ರಾಜ್ಯದ ಪ್ರಥಮ ಎದೆಹಾಲು ಬ್ಯಾಂಕ್ ಎಂಬ ಹಿರಿಮೆಗೆ ಭಾಜನವಾಗಿದೆ. ಪ್ರಾರಂಭಿಕ ದಿನಗಳಲ್ಲಿ ಮಾಹಿತಿ ಕೊರತೆಯಿಂದಾಗಿ ಎದೆಹಾಲು ದಾನಕ್ಕೆ ತಾಯಂದಿರು ಹಿಂದೇಟು ಹಾಕಿದ್ದರು. ಆದರೆ, ಈಗ ಎದೆಹಾಲಿನ ದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿದ್ದರಿಂದ ಆಸ್ಪತ್ರೆಯಲ್ಲಿನ ತಾಯಂದಿರ ಜತೆಗೆ ಹೊರಗಡೆಯಿಂದಲೂ ತಾಯಂದಿರು ಆಸ್ಪತ್ರೆಗೆ ಬಂದು, ಎದೆಹಾಲು ದಾನ ಮಾಡುತ್ತಿದ್ದಾರೆ. ಇದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಎದೆಹಾಲು ಸಂಗ್ರಹಿಸಲು ಆಸ್ಪತ್ರೆಗೆ ಸಾಧ್ಯವಾಗಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯ ಪ್ರಕಾರ ಆರು ತಿಂಗಳೊಳಗಿನ ಶೇ 46 ರಷ್ಟು ಶಿಶುಗಳಿಗೆ ಸಮರ್ಪಕವಾಗಿ ಸ್ತನ್ಯ-ಪಾನವಾಗುತ್ತಿಲ್ಲ. ಎಲ್ಲ ಮಕ್ಕಳಿಗೂ ತಾಯಂದಿರ ಎದೆಹಾಲು ದೊರೆಯಬೇಕೆಂಬ ಉದ್ದೇಶದಿಂದಲೇ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿರುವ ವಾಣಿವಿಲಾಸ ಆಸ್ಪತ್ರೆಯಲ್ಲಿ ₹ 1 ಕೋಟಿ ವೆಚ್ಚದಲ್ಲಿ ತಾಯಂದಿರ ಎದೆಹಾಲಿನ ಬ್ಯಾಂಕ್ ನಿರ್ಮಿಸಲಾಗಿತ್ತು. ಆಸ್ಪತ್ರೆಯಲ್ಲಿ ಜನಿಸಿದ ಶಿಶುಗಳಿಗೆ ಅಲ್ಲಿನ ವೈದ್ಯರು ಪರಿಶೀಲಿಸಿ, ಎದೆಹಾಲು ಪೂರೈಕೆಗೆ ಬ್ಯಾಂಕ್‌ಗೆ ಶಿಫಾರಸು ಸಲ್ಲಿಸುತ್ತಿದ್ದಾರೆ. ನವಜಾತ ತೀವ್ರ ನಿಗಾ ಘಟಕದಲ್ಲಿ (ಎನ್‌ಐಸಿಯು) ಇರುವ ಶಿಶುಗಳಿಗೆ ಪ್ರತಿನಿತ್ಯ ಸರಾಸರಿ ಒಂದೂವರೆ ಲೀಟರ್ ಎದೆಹಾಲು ಒದಗಿಸಲಾಗುತ್ತಿದೆ.

ಅಮೃತಧಾರೆ' ಎದೆಹಾಲು ಬ್ಯಾಂಕಿನಲ್ಲಿ ಸಂಸ್ಕರಿಸಿ ಇಡಲಾಗಿರುವ ಎದೆಹಾಲು – ಪ್ರಜಾವಾಣಿ ಚಿತ್ರ

ಎದೆಹಾಲು ಬ್ಯಾಂಕ್‌ಗೆ ತಾಯಂದಿರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆಸ್ಪತ್ರೆಯ ಹೊರಗಿನ ತಾಯಂದಿರು ದಾನದ ಬಗ್ಗೆ ವಿಚಾರಿಸುತ್ತಿದ್ದಾರೆ. ಕೆಲವರು ಸಂಗ್ರಹಿಸಿ, ಕಳುಹಿಸುತ್ತಿದ್ದಾರೆ.

ಡಾ. ಸವಿತಾ ಸಿ., ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ

290 ಲೀ. ಸಂಗ್ರಹ: ಎದೆಹಾಲು ಬ್ಯಾಂಕ್‌ನಲ್ಲಿ ಆಸ್ಪತ್ರೆಯೊಳಗಿನ ದಾನಿಗಳಿಂದ ಈವರೆಗೆ 270.09 ಲೀ. ಎದೆಹಾಲು ಸಂಗ್ರಹಿಸಲಾಗಿದೆ. ಆಸ್ಪತ್ರೆ ಹೊರಗಿನ ತಾಯಂದಿರಿಂದ 19.84 ಲೀ. ಎದೆಹಾಲನ್ನು ದಾನವಾಗಿ ಪಡೆಯಲಾಗಿದೆ. ಆಸ್ಪತ್ರೆಯೊಳಗಿನ ತಾಯಂದಿರಲ್ಲಿ 1,307 ಮಂದಿ ಎದೆಹಾಲನ್ನು ದಾನ ಮಾಡಿದರೆ, ಹೊರಗಡೆಯಿಂದ ಹತ್ತು ತಾಯಂದಿರು ದಾನವಾಗಿ ನೀಡಿದ್ದಾರೆ. ವಿವಿಧ ಆಸ್ಪತ್ರೆಗಳೂ ಎದೆಹಾಲಿಗೆ ಇಲ್ಲಿನ ಬ್ಯಾಂಕ್‌ಗೆ ಬೇಡಿಕೆ ಸಲ್ಲಿಸುತ್ತಿವೆ. ಆದರೆ, ಆಸ್ಪತ್ರೆ ನೀತಿಯ ಪ್ರಕಾರ ಹೊರಗಡೆಗೆ ನೀಡಲು ಅವಕಾಶವಿಲ್ಲ.

'ನವಜಾತ ತೀವ್ರ ನಿಗಾ ಘಟಕದಲ್ಲಿ (ಎನ್‌ಐಸಿಯು) ಇರುವ ಎದೆಹಾಲಿನಿಂದ ವಂಚಿತರಾಗಿರುವ ಶಿಶುಗಳಿಗೆ ಈ ಬ್ಯಾಂಕ್‌ನಿಂದ ಎದೆಹಾಲು ಪೂರೈಸಲಾಗುತ್ತದೆ. ಎದೆಹಾಲನ್ನು ಪಡೆಯುವಾಗ ಅಗತ್ಯ ಪರೀಕ್ಷೆ ಮಾಡಲಾಗುತ್ತದೆ. ಆರೋಗ್ಯವಂತ ತಾಯಿಯಿಂದ ಮಾತ್ರ ಎದೆಹಾಲನ್ನು ಪಡೆಯಲಾಗುತ್ತದೆ. ಹೊರಗಡೆಯ ದಾನಿಗಳು ಆಸ್ಪತ್ರೆಯನ್ನು ಸಂಪರ್ಕಿಸಿದಲ್ಲಿ ವಿಡಿಯೊ ಕಾಲ್ ಮೂಲಕ ಅಗತ್ಯ ಮಾರ್ಗದರ್ಶನ ಮಾಡಲಾಗುತ್ತದೆ. ಬಳಿಕ ಆಸ್ಪತ್ರೆಗೆ ಎದೆಹಾಲನ್ನು ದಾನ ಮಾಡಬಹುದು' ಎಂದು ಎದೆಹಾಲು ಬ್ಯಾಂಕ್‌ನ ಅರ್ಚನಾ ತಿಳಿಸಿದರು. ಎದೆಹಾಲು ದಾನಕ್ಕೆ ಸಂಪರ್ಕಕ್ಕೆ: 9886931261

'6 ತಿಂಗಳು ಶೇಖರಣೆ ಸಾಧ್ಯ'

'ಬ್ಯಾಂಕ್‌ನಲ್ಲಿ ಸಂಗ್ರಹಿಸಿದ ಹಾಲನ್ನು ಪ್ಯಾಶ್ಚರೀಕರಿಸಿದ ಬಳಿಕ ಪ್ಯಾಕ್ ಮಾಡಿ, 120 ಡಿಗ್ರಿ ಸೆಲ್ಸಿಯಸ್‌ನಲ್ಲಿ ಸಂರಕ್ಷಿಸಿ ಇಡಲಾಗುತ್ತದೆ. ಮಗುವಿಗೆ ಕುಡಿಸುವಾಗ ಅದನ್ನು ಸಾಮಾನ್ಯ ಉಷ್ಣಾಂಶಕ್ಕೆ ತರಲಾಗುತ್ತದೆ. ಇದನ್ನು ಆರು ತಿಂಗಳವರೆಗೂ ಶೇಖರಿಸಿಡಲು ಸಾಧ್ಯ. ಖಾಸಗಿ ಎದೆಹಾಲು ಬ್ಯಾಂಕ್‌ಗಳಲ್ಲಿ 150 ಮಿ.ಲೀ. ಹಾಲಿಗೆ ₹6,500ರಿಂದ ₹8,000 ಪಾವತಿಸಬೇಕಾಗುತ್ತದೆ. ಇಲ್ಲಿ ಎದೆಹಾಲು ಅಗತ್ಯವಿರುವ ಮಕ್ಕಳಿಗೆ ಉಚಿತವಾಗಿ ಒದಗಿಸಲಾಗುತ್ತಿದೆ' ಎಂದು ವಾಣಿವಿಲಾಸ ಆಸ್ಪತ್ರೆಯ ವೈದ್ಯರು ತಿಳಿಸಿದರು.

ಯಾರಿಗೆಲ್ಲ ಹಾಲು ಪೂರೈಕೆ?

ಅವಧಿ ಪೂರ್ವ ಜನಿಸಿದ ಶಿಶುಗಳು, ಅಸ್ವಸ್ಥ ಶಿಶುಗಳು, ಅನಾಥ ಶಿಶುಗಳು, ಮೃತಪಟ್ಟ ತಾಯಂದಿರ ಶಿಶುಗಳು, ರೋಗಗ್ರಸ್ತ ಬಾಣಂತಿಯರ ಶಿಶುಗಳು ಹಾಗೂ ಎದೆಹಾಲು ಉತ್ಪಾದನೆ ಆಗದಿರುವ ತಾಯಂದಿರ ಶಿಶುಗಳಿಗೆ ಈ ಕೇಂದ್ರದಿಂದ ಎದೆಹಾಲನ್ನು ನೀಡಲಾಗುತ್ತದೆ.

ಹೆರಿಗೆ ರಜೆ: ಮಹಿಳಾ ಯೋಧರಿಗೂ ವಿಸ್ತರಣೆ

ನವದೆಹಲಿ (ಪಿಟಿಐ): ಭೂಸೇನೆ, ನೌಕಾಪಡೆ, ವಾಯುಪಡೆಯ ಮಹಿಳಾ ಅಧಿಕಾರಿಗಳಿಗೆ ನೀಡುತ್ತಿರುವ ಹೆರಿಗೆ, ಮಕ್ಕಳ ಆರೈಕೆ ಹಾಗೂ ದತ್ತು ಮಗು ಪೋಷಣೆಯ ರಜೆಯ ಸೌಲಭ್ಯವನ್ನು ಈ ಮೂರೂ ಪಡೆಗಳ ಮಹಿಳಾ ಯೋಧರಿಗೂ ಒದಗಿಸುವ ಪ್ರಸ್ತಾವನೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದಾರೆ.

ಶಸಸ್ತ್ರ ಪಡೆಗಳಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲ ಮಹಿಳೆಯರಿಗೂ, ಅವರ ಶ್ರೇಣಿ ಪರಿಗಣಿಸದೇ ಸಮಾನವಾಗಿ ಈ ಸೌಲಭ್ಯ ಕಲ್ಪಿಸಬೇಕೆಂಬುದು ಸಚಿವ ಸಿಂಗ್ ಅವರ ದೃಷ್ಟಿಕೋನವಾಗಿತ್ತು. ಅದೇ ನಿಟ್ಟಿನಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರಕ್ಷಣಾ ಸಚಿವಾಲಯ ಭಾನುವಾರ ಹೇಳಿದೆ.

'ರಜೆ ನಿಯಮ ವಿಸ್ತರಣೆಯು ಅವರ ಕೌಟುಂಬಿಕ ಮತ್ತು ಸಾಮಾಜಿಕ ಹೊಣೆಗಾರಿಕೆ ನಿಭಾಯಿಸಲು ಸಹಕಾರಿಯಾಗಲಿದೆ. ಅಲ್ಲದೆ, ಸೇನೆಯಲ್ಲಿ ಮಹಿಳೆಯರ ಕೆಲಸದ ಸ್ಥಿತಿಗತಿ ಸುಧಾರಿಸಲಿದೆ' ಎಂದು ಸಚಿವಾಲಯವು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸಂಘದ ಸದಸ್ಯರ ಮಕ್ಕಳಿಂದ ಗಾಯನ, ನೃತ್ಯದ ಸೊಬಗು

ಟಿಪಿಎಂಎಲ್ ಸಹಕಾರ ಸಂಘ: ಸುವರ್ಣ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿಮಿಟೆಡ್ ನೌಕರರ ಪತ್ತಿನ ಸಹಕಾರ ಸಂಘದ ಸುವರ್ಣ ಮಹೋತ್ಸವವು ನಗರದಲ್ಲಿ ಭಾನುವಾರ ಸಂಭ್ರಮದಿಂದ ನೆರವೇರಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಹಾಗೂ ಸದಸ್ಯರ ಮಕ್ಕಳು ಗಾಯನ, ನೃತ್ಯ, ತಬಲಾ ವಾದನದ ಮೂಲಕ ರಂಜಿಸಿದರು. ಮಕ್ಕಳಿಂದ ಹಿಡಿದು ಹಿರಿಯ ಸದಸ್ಯರವರೆಗೂ ವಿವಿಧ ಕಾರ್ಯಕ್ರಮ ನೀಡಿದರು. ಜಾನಪದ, ಸಿನಿಮಾ ಗೀತೆಗಳ ಸೊಬಗು ರಸದೌತಣ ನೀಡಿತು.

ಸಂಘದ ಅಧ್ಯಕ್ಷ ಎಚ್.ಎ.ಪ್ರಕಾಶ್ ಮಾತನಾಡಿ, 'ಸಮಾನ ಮನಸ್ಕರು ಸೇರಿ ಈ ಸಹಕಾರ ಸಂಘ ಆರಂಭಿಸಿದ್ದರು. ಸಂಘದ ಸದಸ್ಯರಿಗೆ ಸಾಲ ಸೌಲಭ್ಯ ನೀಡುವ ಮೂಲಕ ಕಷ್ಟ ಕಾಲದಲ್ಲಿ ನೆರವಾಗುತ್ತಿದೆ. ಮಿತವ್ಯಯದ ಚೌಕಟ್ಟಿನಲ್ಲಿಯೇ ಸಂಘ ಮುನ್ನಡೆಯುತ್ತಿದೆ. ಬೇರೆ ಯಾವುದೇ ಬ್ಯಾಂಕ್‌ನಿಂದ ಆರ್ಥಿಕ ನೆರವು ಪಡೆಯದೆ ಇರುವ ಸಂಪನ್ಮೂಲ ಬಳಸಿಕೊಂಡು ಸಂಘ ನಡೆಸಲಾಗುತ್ತಿದೆ' ಎಂದು ಹೇಳಿದರು.

'ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವುದಕ್ಕೆ ಸಾಕಷ್ಟು ಕಟ್ಟುಪಾಡು ಇದೆ. ಆದರೆ, ಸಹಕಾರದ ಸಂಘದಲ್ಲಿ ಕಷ್ಟಕಾಲದಲ್ಲಿ ಸದಸ್ಯರಿಗೆ ಸುಲಭವಾಗಿ ಸಾಲ ನೀಡಲಾಗುತ್ತಿದೆ' ಎಂದು ಹೇಳಿದರು. ಬಿಎನ್‌ಇಯು ಕಾರ್ಯದರ್ಶಿ ಕೆ.ರವೀಂದ್ರ ಪ್ರಸಾದ್ ಮಾತನಾಡಿ, 'ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿಸುತ್ತಿದ್ದಾರೆ. ಅದೇ ಕಾರಣಕ್ಕೆ ಸಂಘವು ಉತ್ತಮವಾಗಿ ನಡೆಯುತ್ತಿದೆ' ಎಂದು ಶ್ಲಾಘಿಸಿದರು.

ನಿರ್ದೇಶಕ ಪಿ.ಎಂ.ಮಂಜುನಾಥ್ ಮಾತನಾಡಿ, '1969ರಲ್ಲಿ ಸಂಘ ಸ್ಥಾಪನೆಯಾಯಿತು. 54 ವರ್ಷ ಕಳೆದಿದೆ. ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ಸುವರ್ಣ ಸಂಭ್ರಮ ಆಚರಣೆ ತಡವಾಗಿದೆ. ಪ್ರತಿ ಸದಸ್ಯರಿಗೆ ₹1.60 ಲಕ್ಷ ಸಾಲ ನೀಡಲಾಗುತ್ತಿದೆ. ಮಾಸಿಕ ₹100ನಿಂದ ಪ್ರಾರಂಭವಾದ ಠೇವಣಿ, ಈಗ ಮಾಸಿಕ ₹500ಕ್ಕೆ ಏರಿಕೆಯಾಗಿದೆ. ಪ್ರಸ್ತುತ ಶೇ 10ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ' ಎಂದು ಹೇಳಿದರು. 'ಅರ್ಜಿ ಹಾಕಿದ ತಕ್ಷಣವೇ ಸಾಲ ನೀಡುವ ವ್ಯವಸ್ಥೆಯಿದೆ' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಹಾಜರಿದ್ದರು. ಸಂಘದ ಅಭ್ಯುದಯಕ್ಕೆ ಶ್ರಮಿಸಿದ ಮಾಜಿ ನಿರ್ದೇಶಕರಾದ ಕೆ.ಎನ್.ಚಂದ್ರಶೇಖರ್ ದಂಪತಿ ಸೇರಿದಂತೆ ಹಲವರನ್ನು ಇದೇ ವೇಳೆ ಸನ್ಮಾನಿಸಲಾಯಿತು. 'ಸಂಚಿ' ಹೆಸರಿನ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

ನಗರದಲ್ಲಿ ಭಾನುವಾರ ದಿ ಪ್ರಿಂಟರ್ಸ್ (ಮೈಸೂರು) ಪ್ರೈ.ಲಿ. ನೌಕರರ ಪತ್ತಿನ ಸಹಕಾರ ಸಂಘದ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಕ್ಕಳೊಂದಿಗೆ ಸಂಘದ ಅಧ್ಯಕ್ಷ ಎಚ್‌.ಎ.ಪ್ರಕಾಶ್, ನಿರ್ದೇಶಕರಾದ ಹರೀಶ್, ಪಿ.ಎಂ.ಮಂಜುನಾಥ, ಕೆ.ಎಂ.ಬಸವರಾಜ್, ದೇವಾನಂದ್ ಹಾಗೂ ಸದಸ್ಯರಾದ ಮುಕ್ಬುಲ್ ಭಾಷಾ ಇದ್ದರು

ಸುದ್ದಿ 2 ನಿಮಿಷ

ಶಾಲಾ ಮಕ್ಕಳಿಗೆ ಲಸಿಕಾ ಅಭಿಯಾನ

ಬೆಂಗಳೂರು: ಆರೋಗ್ಯ ಇಲಾಖೆಯು 1ರಿಂದ 5ನೇ ತರಗತಿ ಹಾಗೂ 10ನೇ ತರಗತಿ ಮಕ್ಕಳಿಗೆ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಈ ತಿಂಗಳು ಲಸಿಕೆ ಅಭಿಯಾನ ಹಮ್ಮಿಕೊಂಡಿದೆ.

ಗಂಟಲುಮಾರಿ (ಡಿಫ್ತೀರಿಯಾ) ಕಾಯಿಲೆಯ ಅಪಾಯದಿಂದ ರಕ್ಷಿಸಲು ಶಾಲಾ ಮಕ್ಕಳಿಗೆ ಅವರ ವಯಸ್ಸಿನ ಅನುಗುಣವಾಗಿ ಡಿ.ಪಿ.ಟಿ./ಟಿ.ಡಿ ಲಸಿಕೆಯನ್ನು ಆಯಾ ಪ್ರದೇಶಗಳ ಶಾಲೆಗಳಲ್ಲಿ ಶಿಬಿರ ಏರ್ಪಡಿಸಿ, ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ. ಈ ರೋಗದ ವಿರುದ್ಧ ಸಮರ ಸಾರಲು ಲಸಿಕೆ ಸಹಕಾರಿಯಾಗಿದೆ. ಆದ್ದರಿಂದ ಮಗು ಲಸಿಕೆ ಪಡೆದಿರುವ ಅಥವಾ ಪಡೆಯದಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ಇಲಾಖೆ ಹೇಳಿದೆ.

16 ವರ್ಷದವರೆಗಿನ ಮಕ್ಕಳಿಗೆ ಮಾರಣಾಂತಿಕ ಕಾಯಿಲೆ ತಡೆಯಲು ವಿವಿಧ ಲಸಿಕೆಗಳನ್ನು ನೀಡಬೇಕಾಗುತ್ತದೆ. ಈ ಲಸಿಕೆಯನ್ನು ಕೆಲ ಪೋಷಕರು ಮರೆಯುತ್ತಾರೆ. ಹೀಗಾಗಿ, ಶಾಲೆಗಳಲ್ಲಿಯೇ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

ವೆಂಕಟಾಲ: ಕಡಲೇಕಾಯಿ ಪರಿಷೆಗೆ ಚಾಲನೆ

ಯಲಹಂಕ: ವೆಂಕಟಾಲದ ಅಭಯ ಮಹಾಗಣಪತಿ ದೇವಾಲಯದ 11ನೇ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿರುವ ಎರಡು ದಿನಗಳ ಕಡಲೇಕಾಯಿ ಪರಿಷೆಗೆ ಶನಿವಾರ ಚಾಲನೆ ನೀಡಲಾಯಿತು.

ಸ್ಥಳೀಯ ವ್ಯಾಪಾರಿಗಳಲ್ಲದೇ ದೇವನಹಳ್ಳಿ, ಚಿಕ್ಕಬಳ್ಳಾಪುರ, ಬೂದಿಗೆರೆ, ಜಾವಗಲ್, ಪಾವಗಡ, ತುಮಕೂರು, ಹೊಸಕೋಟೆ, ಗೌರಿಬಿದನೂರು ಸೇರಿದಂತೆ ವಿವಿಧ ತಾಲ್ಲೂಕುಗಳ ರೈತರು, ತಾವು ಬೆಳೆದಿದ್ದ ನಾಟಿ, ಕಾಬೂಲ್, ಸಾಮ್ರಾಟ್, ಬೋಂಡ ಸೇರಿ ವಿವಿಧ ತಳಿಗಳ ಕಡಲೇಕಾಯಿಯನ್ನು ತಂದು ಮಾರಾಟ ಮಾಡಿದರು. ಗ್ರಾಹಕರು ಉತ್ಸಾಹದಿಂದ ಹಸಿ, ಹುರಿದ ಮತ್ತು ಬೇಯಿಸಿದ ಕಡಲೇಕಾಯಿಗಳನ್ನು ಖರೀದಿಸುತ್ತಿದ್ದ ದೃಶ್ಯಗಳು ಕಂಡುಬಂದವು.

10 ವರ್ಷಗಳ ಹಿಂದೆ ಅಭಯಮಹಾಗಣಪತಿ ದೇವಾಲಯವನ್ನು ನಿರ್ಮಿಸಲಾಗಿತ್ತು. ಅಲ್ಲಿಂದ ಪ್ರತಿವರ್ಷ ಕಡಲೇಕಾಯಿ ಪರಿಷೆ ನಡೆಸಲಾಗುತ್ತಿದೆ. ಇದಕ್ಕೆ ಗ್ರಾಹಕರು ಮತ್ತು ವರ್ತಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ತಿಳಿಸಿದರು.

ಬಸವನಗುಡಿ ದೂರ ಇರುವುದರಿಂದ ಸಂಚಾರದ ಒತ್ತಡದ ನಡುವೆ ಮಕ್ಕಳು ಮತ್ತು ಕುಟುಂಬ ಸದಸ್ಯರನ್ನು ಕಡಲೇಕಾಯಿ ಪರಿಷೆಗೆ ಕರೆದುಕೊಂಡು ಹೋಗಲು ಕಷ್ಟವಾಗುತ್ತದೆ. ಇಲ್ಲೇ ಪರಿಷೆ ನಡೆಯುತ್ತಿರುವುದರಿಂದ ಕುಟುಂಬ ಸದಸ್ಯರೊಂದಿಗೆ ಭೇಟಿ ನೀಡಿ ಸಂಭ್ರಮಿಸಲು ಅವಕಾಶವಾಗಿದೆ ಎಂದು ಯಲಹಂಕ ಪತ್ರಿಕೆ ವಿತರಕ ವೈ.ಸಿ. ವೀರಭದ್ರ ತಿಳಿಸಿದರು.

ಬೇರೆ ಕಡೆಗಳಲ್ಲಿ ನಡೆಯುವ ಪರಿಷೆಗಳಲ್ಲಿ ಕಡಲೇಕಾಯಿ ವ್ಯಾಪಾರ ಮಾಡಲು ಜಾಗಕ್ಕಾಗಿ ಹಣ ನೀಡಬೇಕು. ಆದರೆ ಇಲ್ಲಿ ಆಯೋಜಕರು ವ್ಯಾಪಾರ ಮಾಡಲು ಉಚಿತವಾಗಿ ಜಾಗ, ಕಾಫಿ, ಉಪಾಹಾರ ಮತ್ತು ಊಟದ ಜೊತೆಗೆ ₹ 500 ಪ್ರೋತ್ಸಾಹಧನ ನೀಡುತ್ತಾರೆ ಎಂದು ಚಿಕ್ಕಬಳ್ಳಾಪುರದ ಕಡಲೇಕಾಯಿ ವ್ಯಾಪಾರಿ ವೆಂಕಟರೆಡ್ಡಿ ಸಂತಸ ವ್ಯಕ್ತಪಡಿಸಿದರು.

'ಬಿಜೆಪಿ–ಜೆಡಿಎಸ್ ತಂತ್ರ ಫಲಿಸದು'

ರಾಜರಾಜೇಶ್ವರಿ ನಗರ: 'ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸಲು ಸಾಧ್ಯವಾಗದ ಜೆಡಿಎಸ್, ಬಿಜೆಪಿ ನಾಯಕರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಇಲ್ಲ ಸಲ್ಲದ ಆರೋಪ ಮಾಡುವ ಮೂಲಕ ಚುನಾವಣೆಯಲ್ಲಿ ಗೆಲ್ಲಲು ಮುಂದಾಗಿದ್ದಾರೆ. ಅವರ ತಂತ್ರ, ಶ್ರಮ ವಿಫಲವಾಗಲಿದೆ' ಎಂದು ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಮುಂಬರುವ ಲೋಕಸಭಾ ಚುನಾವಣೆಯ ಅಂಗವಾಗಿ ನಡೆದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸಭೆಯಲ್ಲಿ ವೀಕ್ಷಕರಾಗಿ ಅವರು ಮಾತನಾಡಿದರು.

ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷ ಪ್ರಬಲವಾಗಿದೆ. ಹಿಂದೆ ನಮ್ಮಲ್ಲಿ ಆದ ತೊಂದರೆಯಿಂದ ಮೈಸೂರು, ಹಾಸನ, ತುಮಕೂರು, ಬೆಂಗಳೂರು ದಕ್ಷಿಣ, ಉತ್ತರ, ಕೇಂದ್ರದಲ್ಲಿ ಬಿಜೆಪಿ, ಜೆಡಿಎಸ್ ಸಂಸದರು ಆಯ್ಕೆಯಾಗಿದ್ದರು. ಈ ಬಾರಿ ಅವರ ಆಟ ನಡೆಯಲ್ಲ' ಎಂದು ತಿಳಿಸಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ, ಶಾಸಕರಾದ ಬಿ ಶಿವಣ್ಣ, ಎಸ್.ರವಿ ಮತ್ತಿತರರು ಇದ್ದರು.

ಚಿಕ್ಕತೋಗೂರಿನಲ್ಲಿ ಕಾಣಿಸಿದ ಚಿರತೆ?

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕೂಡ್ಲುಗೇಟ್ ಬಳಿ ಚಿರತೆ ಕಾಣಿಸಿಕೊಂಡು ಆತಂಕ ಮೂಡಿಸಿದ್ದ ವಿಷಯ ಮಾಸುವ ಮುನ್ನವೇ ಶನಿವಾರ ರಾತ್ರಿ ಎಲೆಕ್ಟ್ರಾನಿಕ್ ಸಿಟಿ ಸಮೀಪದ ಚಿಕ್ಕ ತೋಗೂರಿನಲ್ಲಿ ಚಿರತೆ ಕಾಣಿಸಿಕೊಂಡಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಶನಿವಾರ ರಾತ್ರಿ 7.40ರ ಸುಮಾರಿಗೆ ಚಿಕ್ಕತೋಗೂರು ಬಳಿ ಬಾಲಕನೊಬ್ಬನಿಗೆ ಮನೆ ಬಳಿ ಚಿರತೆ ಕಾಣಿಸಿಕೊಂಡಿದೆ ಎಂದು ಹೇಳಲಾಗಿದೆ. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಆದರೆ, ಚಿರತೆ ಹೆಜ್ಜೆ ಗುರುತು ಅಥವಾ ಹತ್ತಿರದ ಯಾವುದೇ ಸಿಸಿ ಟಿವಿ ಕ್ಯಾಮೆರಾಗಳಲ್ಲಿ ಚಿರತೆ ಸಂಚರಿಸಿರುವ ದೃಶ್ಯ ಸೆರೆಯಾಗಿಲ್ಲ.

'ಮನೆ ಬಳಿ ಇದ್ದಾಗ ಶನಿವಾರ ರಾತ್ರಿ 7.40ರ ಸುಮಾರಿಗೆ ಕಾಂಪೌಂಡ್ ಒಳಗೆ ಚಿರತೆ ಬಂದಿದ್ದನ್ನು ನೋಡಿ ಭಯಗೊಂಡೆ. ಕೂಡಲೇ ಬಾಗಿಲು ಬಂದ್ ಮಾಡಿದೆ. ಕೆಲ ಹೊತ್ತು ಮೆಟ್ಟಿಲು ಮೇಲೆ ಕುಳಿತು ಬಳಿಕ ಪರಾರಿ ಆಯಿತು' ಎಂದು ಚಿಕ್ಕ ತೋಗೂರು ಗ್ರಾಮದ ಅಕ್ಷಯ್ ತಿಳಿಸಿದ್ದಾರೆ.

ಚಿರತೆ ಕಾಣಿಸಿರುವ ಶಂಕೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಒಂದೆಡೆ ಗುಂಪುಗೂಡದಂತೆ, ರಾತ್ರಿ ವೇಳೆ ಅನಗತ್ಯವಾಗಿ ಓಡಾಡದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸೂಚನೆ ನೀಡಿದ್ದಾರೆ. ಅಲ್ಲದೆ ಚಿರತೆ ಕಂಡಲ್ಲಿ ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ.

ಇದರ ನಡುವೆ ಚಿಕ್ಕ ತೋಗೂರಿನ ಹೊರವಲಯದಲ್ಲಿ ಮಂಜುನಾಥ್ ಎಂಬುವವರ ತೋಟದ ಬಳಿ ಚಿರತೆ ಹೆಜ್ಜೆ ಹೋಲುವ ಗುರುತು ಪತ್ತೆಯಾಗಿದೆ.

ಹೆಜ್ಜೆ ಗುರುತು ಪರಿಶೀಲಿಸಿದ ಅರಣ್ಯ ಇಲಾಖೆ ಸಿಬ್ಬಂದಿ, 'ಇದು ಕಾಡು ಬೆಕ್ಕಿನ ಹೆಜ್ಜೆ ಗುರುತು ಇರಬಹುದು' ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಚಿಕ್ಕತೋಗೂರು ಸುತ್ತಮುತ್ತ ನೈಸ್ ರಸ್ತೆ ಜಾಗದಲ್ಲಿ ಆಗಾಗ ಚಿರತೆ ಓಡಾಟ ಕಂಡುಬರುತ್ತಿದೆ. ಆದರೂ, ಶೋಧ ಕಾರ್ಯ ಮುಂದುವರಿಸುತ್ತೇವೆ ಎಂದು ಅಧಿಕಾರಿಗಳು ಹೇಳಿದರು.

'ನಮ್ಮ ಸಿಬ್ಬಂದಿ ಸ್ಥಳಕ್ಕೆ ಭೇಟಿ ಪರಿಶೀಲಿಸಿದ್ದಾರೆ. ಚಿರತೆ ಕಾಣಿಸಿಕೊಂಡಿರುವುದಕ್ಕೆ ಯಾವುದೇ ಸುಳಿವು ಲಭ್ಯವಾಗಿಲ್ಲ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಲಿಂಗರಾಜ್ ತಿಳಿಸಿದ್ದಾರೆ.

ನರಸೀಪುರ ಬಳಿಯ ಮೋರಿ ಹತ್ತಿರ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ರಸ್ತೆ ಗುಂಡಿ: ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ದಾಬಸ್ ಪೇಟೆಯಿಂದ ಮಧುಗಿರಿ ಹಾಗೂ ಪಾವಗಡಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ-3ರ ರಸ್ತೆಯು ನರಸೀಪುರ ತೋಪಿನ ಬಳಿ ಗುಂಡಿಗಳಿಂದ ಕೂಡಿದೆ. ಇದರಿಂದ ವಾಹನ ಸವಾರರು ಪರಿತಪಿಸುವಂತಾಗಿದೆ.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್) -2ರಡಿ ಈ ರಸ್ತೆಯನ್ನು ಮಾಗಡಿ-ದಾಬಸ್ ಪೇಟೆ-ಕೊರಟಗೆರೆವರೆಗೆ ಸುಮಾರು 68 ಕಿ.ಮೀ. ಅಭಿವೃದ್ಧಿಪಡಿಸಲಾಗಿತ್ತು. ಈ ರಸ್ತೆ ಮಾರ್ಗದ ಮೂಲಕ ತುಮಕೂರು, ಕೊರಟಗೆರೆ, ಮಧುಗಿರಿ, ಪಾವಗಡ, ಆಂಧ್ರಪ್ರದೇಶದ ಮಿಡಗೇಶಿ, ಕಲ್ಯಾಣದುರ್ಗಕ್ಕೆ ಸಂಪರ್ಕಿಸಲಿದೆ. ದೇವರಾಯನದುರ್ಗ, ಗೊರವನಹಳ್ಳಿ ಲಕ್ಷ್ಮಿ ದೇವಾಲಯ, ಮಧುಗಿರಿ ಏಕಶಿಲಾ ಬೆಟ್ಟ, ಪಾವಗಡದ ಶನಿಮಹಾತ್ಮ ದೇವಾಲಯಗಳಿಗೆ ಇದೇ ಮಾರ್ಗದಲ್ಲಿ ಸಾಗಬೇಕಿದೆ. ಒಂದು ವರ್ಷದಿಂದ ಈ ರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿವೆ.

ಸೋಂಪುರ ಕೈಗಾರಿಕಾ ಪ್ರದೇಶವಾಗಿರುವುದರಿಂದ, ಈ ರಸ್ತೆಯಲ್ಲಿ ಜನ ಸಂಚಾರ ಹೆಚ್ಚಿದೆ. ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ವಾಹನ ಸವಾರರ ಪ್ರಮಾಣ ಹೆಚ್ಚಿರುತ್ತದೆ. ರಾತ್ರಿ ವೇಳೆ ಗುಂಡಿಗಳು ಕಾಣದೆ ಬಿದ್ದು ಗಾಯಗೊಂಡಿದ್ದಾರೆ ಎನ್ನುತ್ತಾರೆ ಸ್ಥಳೀಯರು.

'ಈ ರಸ್ತೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಭಾರ ತುಂಬಿದ ಟಿಪ್ಪರ್ ಹಾಗೂ ಟ್ರ್ಯಾಕ್ಟರ್‌ಗಳು ದಿನನಿತ್ಯ ಸಾಗುತ್ತಿವೆ. ಇದರಿಂದ ರಸ್ತೆ ಕಿತ್ತು ಹೋಗುತ್ತಿದೆ. ಇದೇ ರಸ್ತೆಯ ಇನ್ನೊಂದು ಮೋರಿಯ ಬಳಿಯೂ ರಸ್ತೆ ಗುಂಡಿ ಬಿದ್ದಿತ್ತು. ಸಂಬಂಧಿಸಿದವರು ಅಲ್ಲಷ್ಟೇ ರಸ್ತೆ ದುರಸ್ತಿ ಮಾಡಿ ಡಾಂಬರು ಹಾಕಿದ್ದಾರೆ. ಇಲ್ಲಿ ಹಾಗೆಯೇ ಬಿಟ್ಟಿರುವುದರಿಂದ ಗುಂಡಿಗಳು ಹೆಚ್ಚಾಗಿವೆ' ಎಂದು ಸವಾರರೊಬ್ಬರು ತಿಳಿಸಿದರು. 'ಮೋರಿಯ ಬಳಿ ಬಿದ್ದಿರುವ ಗುಂಡಿ ಸರಿಪಡಿಸಲು ಗಮನಹರಿಸಬೇಕು' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎನ್. ಜಿ.ರಮೇಶ್ ಆಗ್ರಹಿಸಿದರು.

ಚಿತ್ರಾವಳಿ

ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಭಾನುವಾರ ಅಕಾಡೆಮಿ ಆಫ್ ಮ್ಯೂಸಿಕ್ ಸಂಸ್ಥೆಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದುಷಿ ರಂಜನಿ ಮತ್ತು ಗಾಯತ್ರಿ ಸಹೋದರಿಯರಿಗೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಅವರು 'ಅಕಾಡೆಮಿ ಆಫ್ ಮ್ಯೂಸಿಕ್ ಚೌಡಯ್ಯ –2023' ಪ್ರಶಸ್ತಿ ಪ್ರದಾನ ಮಾಡಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು ಗಾಯನ ಸಮಾಜ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 53ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಯದುಗಿರಿ ಯತಿರಾಜ ನಾರಾಯಣ ರಾಮನುಜ ಜೀಯರ್ ಸ್ವಾಮೀಜಿ ಮತ್ತು ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್‌.ವಿ. ಪ್ರಸಾದ್ ಅವರು ಗಾಯಕ ವಿದ್ಯಾಭೂಷಣ ಅವರಿಗೆ 'ಸಂಗೀತ ಕಲಾರತ್ನ' ಬಿರುದು ಹಾಗೂ ವಿ.ಟಿ. ಶ್ರೀನಿವಾಸನ್ ಸ್ಮಾರಕ ಪ್ರಶಸ್ತಿ ಪ್ರದಾನ ಮಾಡಿದರು. ಈ ಪ್ರಶಸ್ತಿಯು 50 ಸಾವಿರ ನಗದು ಒಳಗೊಂಡಿದೆ. ಇದೇ ಸಮಾರಂಭದಲ್ಲಿ ಎಚ್‌.ಕೆ. ನರಸಿಂಹಮೂರ್ತಿ (ಎಡದಿಂದ ಮೂರನೆಯವರು) ಅವರಿಗೆ 'ಕರ್ನಾಟಕ ಕಲಾಚಾರ್ಯ' ಬಿರುದು ನೀಡಲಾಯಿತು. ಕಲಾವಿದರಾದ ಚಿಂತನಪಲ್ಲಿ ಕೆ. ರಮೇಶ್, ಶ್ರೀನಿವಾಸ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪೀಣ್ಯ ದಾಸರಹಳ್ಳಿ ಬಳಿಯ ಹಾವನೂರು ಬಡಾವಣೆಯಲ್ಲಿ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ ನೇತೃತ್ವದಲ್ಲಿ ಆಯೋಜಿಸಲಾದ ಬಡವರಿಗೆ ತಳ್ಳುಗಾಡಿ, ಪೌರಕಾರ್ಮಿಕರಿಗೆ ಸೀರೆ, ಆಟೊ ಚಾಲಕರಿಗೆ ಶಾಸಕ ಎಸ್‌. ಮುನಿರಾಜು ಸಮವಸ್ತ್ರ ವಿತರಿಸಿದರು. ರಮೇಶ್ ಸೌಂದರ್ಯ ಇದ್ದರು.

ನಕಲಿ ಕಾರ್ಡ್ ತಡೆಗೆ ಹೊಸ ಆ್ಯಪ್: ಸಂತೋಷ ಲಾಡ್

ಹಾವೇರಿ: 'ರಾಜ್ಯದಲ್ಲಿ ಶೇಕಡ 60ರಿಂದ 70ರಷ್ಟು ಕಾರ್ಮಿಕ ಕಾರ್ಡ್‌ಗಳು ನಕಲಿ ಕಾರ್ಡ್‌ಗಳಾಗಿದ್ದು ಅವುಗಳನ್ನು ತಡೆಯಲು ಹೊಸ ಆ್ಯಪ್ ಬಿಡುಗಡೆ ಮಾಡಲಾಗುತ್ತಿದೆ' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.

ಹಿರೇಕೆರೂರು ಪಟ್ಟಣದಲ್ಲಿ ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾರ್ಮಿಕ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಟ್ಟು 45 ಲಕ್ಷ ಕಾರ್ಮಿಕರು ಕಾರ್ಮಿಕ ಕಾರ್ಡ್‌ಗಳನ್ನು ಹೊಂದಿದ್ದಾರೆ. ಕಳೆದ ವರ್ಷದಲ್ಲಿ 39 ಲಕ್ಷ ಹೊಸ ಕಾರ್ಡ್‌ಗಳನ್ನು ವಿತರಿಸಲಾಗಿದೆ' ಎಂದರು.

'ನಕಲಿ ಕಾರ್ಡ್‌ಗಳನ್ನು ತಡೆಗಟ್ಟಲು ಕಾರ್ಮಿಕ ಸಂಘಟನೆಗಳ ಪಾತ್ರ ಮಹತ್ವದ್ದಾಗಿದ್ದು, ಅವರು ಸಲಹೆ, ಸೂಚನೆ ಹಾಗೂ ಸಹಾಯದಿಂದ ಅವುಗಳನ್ನು ತಡೆಹಿಡಿಯಲು ಸಾಧ್ಯ. ಕಾರ್ಮಿಕ ಕಾರ್ಯನಿರ್ವಹಿಸುವ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿ ಖುದ್ದು ಭೇಟಿ ನೀಡಿ ಪರಿಶೀಲನೆ ಮಾಡಿ, ನೈಜ ಕಾರ್ಮಿಕರನ್ನು ಗುರುತಿಸಿ ಹೊಸ ಕಾರ್ಡ್ ವಿತರಿಸಲಿದ್ದಾರೆ' ಎಂದರು

ಡಿ. ರಾಮಾ ನಾಯಕ್ ಅವರ ಕೃತಿ ಲೋಕಾರ್ಪಣೆ ಕಾರ್ಯಕ್ರಮ

ಮಹಾಚಲನವೇ ಮನುಕುಲದ ಚರಿತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಕುಲದ ಮಹಾಚರಿತ್ರೆಗಳನ್ನು ನೋಡಿದರೆ ಎಲ್ಲವೂ ಮಹಾಚಲನವೇ ಆಗಿವೆ ಎಂದು ಬರಹಗಾರ ಕೆ.ವೈ. ನಾರಾಯಣಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಡಿ. ರಾಮಾ ನಾಯಕ್ ಅವರ 'ಮಹಾಚಲನೆ' ಬಂಜಾರರ ಜೀವನಗಾಥೆ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಂಜಾರ ಸಮಾಜವು ಈ ರೀತಿಯ ನಿರಂತರ ಚಲನೆ ಇರುವ ಸಮುದಾಯ. ಭಾರತದಲ್ಲಷ್ಟೇ ಅಲ್ಲ, ಅನೇಕ ದೇಶಗಳಲ್ಲಿ ಬಂಜಾರ ಜನರು ಹರಡಿದ್ದಾರೆ. ಈಜಿಪ್ಟ್ ಕಡೆ ಇರುವ ಜಿಪ್ಸಿಗಳು, ರಷ್ಯಾ ಕಡೆ ಇರುವ ರೋಮಾಗಳು ಎಲ್ಲರೂ ಬಂಜಾರರು. ಇದರ ಬಗ್ಗೆಯೇ ಈ ಕೃತಿ ಬೆಳಕು ಚೆಲ್ಲುತ್ತದೆ. ಯುರೋಪಿನ ಸಂಸ್ಕೃತಿ, ಜನಜೀವನದ ಮೇಲೆ ಬಂಜಾರ ಸಮುದಾಯ ಬೀರಿದ ಪ್ರಭಾವಗಳ ಬಗ್ಗೆ ಸಂಶೋಧನೆಗಳಾಗಬೇಕು ಎಂದು ತಿಳಿಸಿದರು.

ಚಲನೆಯ ಜೀವನದಲ್ಲಿ ಬಂಜಾರರು ಪಡುವ ಸಂಕಷ್ಟಗಳು, ಬದುಕಿಗಾಗಿ ನಡೆಸುವ ಹೋರಾಟಗಳು ಶೈಕ್ಷಣಿಕ ತಿಳಿವಳಿಕೆಯ ಭಾಗವಾಗಿಲ್ಲ ಎಂಬುದನ್ನು 'ಮಹಾಚಲನೆ' ಕೃತಿ ಸೂಚ್ಯವಾಗಿ ತಿಳಿಸುತ್ತದೆ. ಕಷ್ಟಗಳು ಏನೇ ಇರಲಿ, ಲೋಕಕ್ಕೆ ಕಾಣುವುದು ಬಣ್ಣದ ಚಿತ್ತಾರ. ಬಂಜಾರರ ಬದುಕಿನ ಸೌಂದರ್ಯ ಮೀಮಾಂಸೆ ಮತ್ತು ಕಾವ್ಯ ಮೀಮಾಂಸೆಯ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಸಲಹೆ ನೀಡಿದರು.

ಕೃತಿ ಬಿಡುಗಡೆ ಮಾಡಿದ ಸಾಹಿತಿ ಹಂಪ ನಾಗರಾಜಯ್ಯ ಮಾತನಾಡಿ, 'ಡಿ. ರಾಮಾ ನಾಯಕ್ ಅವರು ಬಂಜಾರ ಸಮಾಜದ ಕೊಲಂಬಸ್. ಅವರು ಗುಡಿಸಲಿನಲ್ಲಿ ಹುಟ್ಟಿ, ಕಷ್ಟದಲ್ಲಿ ಬೆಳೆದು ಹತ್ತಾರು ದೇಶಗಳನ್ನು ಸುತ್ತಿದ್ದಾರೆ. ಅವೆಲ್ಲವನ್ನು ದಾಖಲಿಸುತ್ತಲೇ ಸಮುದಾಯದ ಇತಿಹಾಸವನ್ನು ನೀಡಿದ್ದಾರೆ. ಸುಲಲಿತ ಬರವಣಿಗೆಯ ಮೂಲಕ ಓದುಗರನ್ನು ಹೊಸಲೋಕಕ್ಕೆ ಕೊಂಡೊಯ್ಯುತ್ತಾರೆ' ಎಂದು ವಿಶ್ಲೇಷಿಸಿದರು.

ಸಾಹಿತಿ ಬಿ.ಟಿ. ಲಲಿತಾ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಬರಹಗಾರ ಕೆ. ಪುಟ್ಟಸ್ವಾಮಿ, ವಿಧಾನ ಪರಿಷತ್‌ನ ಮಾಜಿ ಸಚೇತಕ ಪ್ರಕಾಶ್ ರಾಥೋಡ್, ನಿವೃತ್ತ ಐಎಫ್‌ಎಸ್ ಅಧಿಕಾರಿ ಎ.ಸಿ. ಲಕ್ಷ್ಮಣ, ಕೃತಿಕಾರ ಡಿ. ರಾಮಾನಾಯಕ್ ಇದ್ದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಮಹಾಚಲನ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಬರಹಗಾರ ಕೆ.ವೈ ನಾರಾಯಣಸ್ವಾಮಿ, ಪ್ರಕಾಶ್ ರಾಥೋಡ್, ಕೃತಿಕಾರ ಡಿ. ರಾಮಾ ನಾಯಕ್, ಲೇಖಕಿ ಬಿ.ಟಿ ಲಲಿತಾ ನಾಯಕ್, ಸಾಹಿತಿ ಹಂಪ ನಾಗರಾಜಯ್ಯ, ಸಿರಿ ಚನ್ನನಾಯಕ ಮತ್ತು ನಿವೃತ್ತ ಐಎಫ್‌ಎಸ್ ಅಧಿಕಾರಿ ಎ.ಸಿ ಲಕ್ಷ್ಮಣ ಇದ್ದರು ಪ್ರಜಾವಾಣಿ ಚಿತ್ರ

ಕೃತಿ ಪರಿಚಯ

ಕೃತಿ: ಮಹಾಚಲನೆ
ಲೇಖಕ: ಡಿ. ರಾಮಾ ನಾಯಕ್
ಪ್ರಕಾಶನ: ಅಂತರರಾಷ್ಟ್ರೀಯ ಬಂಜಾರ ರೋಮಾ ಸಂಸ್ಥೆ
ಪುಟ: 304
ದರ: ₹ 1,800

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅಭಿಮತ

‘ವೈದ್ಯರ ನೇಮಕಾತಿ ಆದ್ಯತೆಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಲಸೌಕರ್ಯಗಳ ಹೆಸರಿನಲ್ಲಿ ಭೂತದ ಬಂಗಲೆಗಳನ್ನು ನಿರ್ಮಿಸುವ ಬದಲು ಅಗತ್ಯ ವೈದ್ಯರು, ಶುಶ್ರೂಷಕರು ಹಾಗೂ ಇನ್ನಿತರ ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡಬೇಕು’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಮೆಡಿಕಲ್ ಸರ್ವಿಸ್ ಸೆಂಟರ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 7ನೇ ಅಖಿಲ ಭಾರತ ವೈದ್ಯಕೀಯ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ದೇಶದಲ್ಲಿ ಇಂದಿಗೂ ಬಡ ಹಾಗೂ ಮಧ್ಯಮ ವರ್ಗದ ಜನರೇ ಹೆಚ್ಚಿದ್ದಾರೆ. ಆದರೆ, ದೇಶದಲ್ಲಿನ ಒಟ್ಟು ಆಸ್ಪತ್ರೆಗಳಲ್ಲಿ ಶೇ 70ರಷ್ಟು ಖಾಸಗಿ ಆಸ್ಪತ್ರೆಗಳಾಗಿವೆ. ಶೇ 30ರಷ್ಟಿರುವ ಸರ್ಕಾರಿ ಆಸ್ಪತ್ರೆಗಳಲ್ಲೂ ಸಮರ್ಪಕ ಮೂಲ ಸೌಲಭ್ಯ, ಅವಶ್ಯಕವಿರುವಷ್ಟು ವೈದ್ಯರು ಹಾಗೂ ಸಿಬ್ಬಂದಿಯಿಲ್ಲ. ಹೀಗಾಗಿ, ದೇಶದ ಬಹುತೇಕ ಜನರಿಗೆ ಕೈಗೆಟಕುವ ದರದಲ್ಲಿ ಉತ್ತಮ ಚಿಕಿತ್ಸೆ ಸಿಗುತ್ತಿಲ್ಲ. ಗುಣಮಟ್ಟದ ಆರೋಗ್ಯ ವ್ಯವಸ್ಥೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಜೆಟ್‌ನಲ್ಲಿ ಶೇ 8 ರಿಂದ 10ರಷ್ಟು ಅನುದಾನವನ್ನು ನೀಡಬೇಕು’ ಎಂದು ಹೇಳಿದರು.

‘ಯುವವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ತಂತ್ರಜ್ಞಾನ ಮತ್ತು ಪರೀಕ್ಷೆಗಳ ಮೇಲೆ ಅವಲಂಬಿತರಾಗುವ ಮೊದಲು ರೋಗಿಗಳ ಜತೆಗೆ ಮಾತನಾಡಬೇಕು. ರೋಗಿಯ ಆರೋಗ್ಯದ ಇತಿಹಾಸವನ್ನು ತಿಳಿದುಕೊಂಡು, ನಂತರ ಚಿಕಿತ್ಸಾ ಕ್ರಮವನ್ನು ನಿರ್ಧರಿಸಬೇಕು. ಅನಗತ್ಯವಾಗಿ ಪರೀಕ್ಷೆಗಳನ್ನು ಮಾಡಿಸುವ ಕ್ರಮವನ್ನು ಬಿಡಬೇಕು’ ಎಂದು ತಿಳಿಸಿದರು.

ವೈದ್ಯಕೀಯ ಸಮ್ಮೇಳನದಲ್ಲಿ ಡಾ.ಸಿ.ಎನ್. ಮಂಜುನಾಥ್ ಮಾತನಾಡಿದರು. ಡಾ.ಅಶೋಕ ಸಮಂತಾ, ಡಾ. ವಿನಾಯಕ ಸರ್ಲಿಕ, ಡಾ. ಸುಭಾಸದಾಸ ಗುಪ್ತಾ, ಡಾ. ತರುಣ್ ಮಂಡಲ್, ಡಾ. ವಿಶ್ವಾನಾಥ ಪಾರಿಯಾ, ಡಾ. ಕಿಸಾನ್ ಪ್ರಧಾನ್, ಡಾ. ಸುಧಾ ಕಾಮತ್ ಹಾಗೂ ಸೆಂಟರ್‌ನ ಪದಾಧಿಕಾರಿಗಳು ಇದ್ದರು

‘ನಮ್ಮ ಭಾರತವು ಎರಡು ರೀತಿಯಿದೆ. ಆಕಾಶದಲ್ಲಿ ವಿಮಾನದ ಮೂಲಕ ನೋಡುವ ಭಾರತದಲ್ಲಿ ಎಲ್ಲವೂ ಸರಿಯಾಗಿ, ಅಂದವಾಗಿಯೇ ಕಾಣಿಸುತ್ತದೆ. ರೈಲ್ವೆ ಪ್ರಯಾಣದ ವೇಳೆ ರೈಲ್ವೆ ಹಳಿಯ ಅಕ್ಕಪಕ್ಕದಲ್ಲಿ ಕಾಣುವುದು ಇನ್ನೊಂದು ಭಾರತ. ಇಂದಿಗೂ ನಮ್ಮ ಜನರಿಗೆ ಸರಿಯಾದ ಆರೋಗ್ಯ ವ್ಯವಸ್ಥೆ, ನೈರ್ಮಲ್ಯ, ಶುದ್ಧ ಕುಡಿಯುವ ನೀರು ಸೇರಿ ವಿವಿಧ ಮೂಲ ಸೌಲಭ್ಯಗಳನ್ನು ನೀಡಲು ಸಾಧ್ಯವಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಮೆಡಿಕಲ್ ಸರ್ವಿಸ್ ಸೆಂಟರ್ ಪ್ರಧಾನ ಕಾರ್ಯದರ್ಶಿ ಡಾ.ಅಶೋಕ ಸಮಂತಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದಲ್ಲಿ ದೇಶದ ಆರೋಗ್ಯ ರಂಗದ ಕುರಿತ ವಿವಿಧ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ದಾಳಿ ಸಂಚು: 7 ಮಂದಿ ವಿರುದ್ಧ ಚಾರ್ಜ್‌ಶೀಟ್

ಮುಂಬೈ(ಪಿಟಿಐ): ಕರ್ನಾಟಕವು ಸೇರಿ ದೇಶದ ವಿವಿಧ ಭಾಗಗಳಲ್ಲಿ ಐ.ಎಸ್ ಉಗ್ರರ ಮಾದರಿಯಲ್ಲಿ ದಾಳಿಗೆ ಸಂಚು ರೂಪಿಸಿದ್ದ ಏಳು ಮಂದಿ ಆರೋಪಿಗಳ ವಿರುದ್ಧ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ನ್ಯಾಯಾಲಯದಲ್ಲಿ ಚಾರ್ಜ್‌ಶೀಟ್ ಸಲ್ಲಿಸಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಐ.ಎಸ್ ಮಾದರಿ ದಾಳಿ ನಡೆಸಲು ಪುಣೆಯಲ್ಲಿ ಸಂಚು ರೂಪಿಸಿದ್ದ ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ (ಐಪಿಸಿ) ವಿವಿಧ ಸೆಕ್ಷನ್‌ಗಳ ಅಡಿ, ಇಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ಚಾರ್ಜ್ ಶೀಟ್ ಸಲ್ಲಿಸಲಾಯಿತು ಎಂದು ಕೇಂದ್ರೀಯ ತನಿಖಾ ಏಜೆನ್ಸಿಯ ವಕ್ತಾರರು ಹೇಳಿದರು.

‘ಭಾರತದಲ್ಲಿ ಉಗ್ರ ಕೃತ್ಯಗಳನ್ನು ನಡೆಸುವುದು ಅವರ ಉದ್ದೇಶವಾಗಿತ್ತು. ಆರೋಪಿಗಳು ಕರ್ನಾಟಕ, ಗೋವಾ, ಮಹಾರಾಷ್ಟ್ರ, ತೆಲಂಗಾಣ ಮತ್ತು ಇತರ ರಾಜ್ಯಗಳು ಒಳಗೊಂಡಂತೆ ಅನೇಕ ರಾಜ್ಯಗಳಲ್ಲಿ ಸ್ಫೋಟಕಗಳನ್ನು ಹುದುಗಿರಿಸಿ, ಸ್ಫೋಟ ನಡೆಸುವ ಸಂಚು ಮಾಡಿದ್ದರು. ರಾಷ್ಟ್ರೀಯ ಭದ್ರತೆಗೆ ಭಾರಿ ಅಪಾಯ ತಂದೊಡ್ಡುವ ಯೋಜನೆ ಹೊಂದಿದ್ದರು’ ಎಂದು ಹೇಳಿದರು.

‘ಆರೋಪಿಗಳು ಭಯೋತ್ಪಾದನೆ ಮತ್ತು ಹಿಂಸಾಚಾರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗಾಗಿ ಇರಾಕ್ ಮತ್ತು ಸಿರಿಯಾಗಾಗಿ (ಐ.ಎಸ್) ಭಾರತ ಮತ್ತು ವಿದೇಶಗಳಲ್ಲಿ ವಿವಿಧ ಮೂಲಗಳಿಂದ ಹಣ ಸಂಗ್ರಹಿಸುವಲ್ಲಿ ತೊಡಗಿಸಿಕೊಂಡಿದ್ದರು’ ಎಂದು ವಕ್ತಾರರು ತಿಳಿಸಿದ್ದಾರೆ.

ವೈಭವದ ಬಾಗಲಗುಂಟೆ ಮಾರಮ್ಮ ದೇವಿಯ ಜಾತ್ರೆಯ ಸಿಂಗಾರ

ಸಂಭ್ರಮದ ಮಾರಮ್ಮ ದೇವಿ ಜಾತ್ರೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯಲ್ಲಿ ಮಾರಮ್ಮ ದೇವಿಯ ಜಾತ್ರೆ ಸಂಭ್ರಮ ಮನೆ ಮಾಡಿತ್ತು. ಶನಿವಾರ ಬೀದಿಗಳು ಹಾಗೂ ಅಂಗಡಿಗಳಲ್ಲಿ ವಿದ್ಯುತ್ ದೀಪಗಳ ಅಲಂಕಾರ ಜಾತ್ರೆಯ ಸಂಭ್ರಮ ಹೆಚ್ಚಿಸಿತು.

ಭಾನುವಾರ ಮಧ್ಯಾಹ್ನ 2 ಗಂಟೆಗೆ ಮಾರಮ್ಮದೇವರ ಪುಣ್ಯಾಃ, ರಾತ್ರಿ 8:30ಕ್ಕೆ ಜಾತ್ರೆಯ ಪ್ರಮುಖ ಆಕರ್ಷಣೆ ಕುರ್ಜಿ ಮರ ಎತ್ತುವುದು ನಡೆಯಿತು. ಬಾಗಲಗುಂಟೆಯ ಪ್ರಮುಖ ರಸ್ತೆಗಳಲ್ಲಿ ಮಾರಮ್ಮ ದೇವಿಯ ಮೆರವಣಿಗೆ ನಡೆಯಿತು.

ಸೋಮವಾರ ಬೆಳಿಗ್ಗೆ 8ಕ್ಕೆ ನವಗ್ರಹಗಳಿಗೆ ಬೆಲ್ಲದ ಆರತಿ ಮತ್ತು ಪೂಜೆ, ಬೆಳಿಗ್ಗೆ 9ಕ್ಕೆ ವೇಣುಗೋಪಾಲಸ್ವಾಮಿಗೆ ಬೆಲ್ಲದ ಆರತಿ, 10ಕ್ಕೆ ಆಂಜನೇಯಸ್ವಾಮಿಗೆ ಬೆಲ್ಲದ ಆರತಿ, 11ಕ್ಕೆ ರಾಮದೇವರ ಸ್ವಾಮಿಗೆ ಬೆಲ್ಲದ ಆರತಿ, ಮಧ್ಯಾಹ್ನ 1ಕ್ಕೆ ಮಾರಮ್ಮದೇವಿಗೆ ದೊಡ್ಡದಾರತಿ ಮತ್ತು ಬಾಯಿಬೀಗ ಸೇವೆ, 2 ಗಂಟೆಗೆ ಅಲುಗು ಸೇವೆ, 3ಕ್ಕೆ ಭಕ್ತಾದಿಗಳು ಅಗ್ನಿಕುಂಡದಲ್ಲಿ ನಡೆಯುವುದು, ಸಂಜೆ 6.30ಕ್ಕೆ ಪಳೇಕಮ್ಮ ಮತ್ತು ಮುತ್ತುರಾಯಸ್ವಾಮಿಗೆ ಬೆಲ್ಲದ ಆರತಿ ಸೇವೆ ನಡೆಯಲಿದೆ. ಮಂಗಳವಾರ ಬೆಳಿಗ್ಗೆ 9ಕ್ಕೆ ಗ್ರಾಮದ ಎಲ್ಲಾ ದೇವರುಗಳಿಗೂ ಮಹಾಮಂಗಳಾರತಿ ನಡೆಯಲಿದೆ.







ಇತಿಹಾಸ ಕಲಿಕೆಯಲ್ಲಿ ಟೈಮ್‌ಲೈನ್

ಇತಿಹಾಸ ಅಧ್ಯಯನ ಮಾಡುವಾಗ ಸರಿಯಾದ ಕ್ರಮದಲ್ಲಿ ಟೈಮ್‌ಲೈನ್ ಬರೆಯುವುದು ಸವಾಲೇ ಆಗಿದೆ. ಇವನ್ನು ಸರಳವಾಗಿ ಹೇಗೆ ನೆನಪಿಡಬಹುದು ? ವಿವರ ಇಲ್ಲಿದೆ...

ಆರ್.ಬಿ. ಗುರುಬಸವರಾಜ

ಇತಿಹಾಸ ಎಂಬುದು ಮಾನವನ ಜ್ಞಾನದ ಅವಿಭಾಜ್ಯ ಅಂಗ. ಅದು ಕೇವಲ ನಡೆದ ಘಟನೆಗಳ ಕಾಲಾನ್ವಯಿಕ ಪಟ್ಟಿಯಲ್ಲ. ಅದು ನಿರ್ದಿಷ್ಟಕಾಲ, ದೇಶ, ವ್ಯಕ್ತಿ, ಮತ್ತು ಸಾಮಾಜಿಕ ಹಿನ್ನೆಲೆ ಎಂಬ ವಿವಿಧ ಆಯಾಮಗಳನ್ನು ತಿಳಿಸುವ ಸೂತ್ರವೂ ಹೌದು. ಸತ್ಯಾನ್ವೇಷಣೆಯೇ ಇತಿಹಾಸದ ಉದ್ದೇಶವಾಗಿದ್ದು, ಅದು ವಿಜ್ಞಾನದಂತೆ ಕ್ರಮಬದ್ಧ ಅಧ್ಯಯನ, ಅವಲೋಕನ, ವಿಶ್ಲೇಷಣೆ, ಹೋಲಿಕೆ ಮತ್ತು ನಿರ್ಣಯ/ಸಾಮಾನ್ಯೀಕರಣ ಹಂತಗಳನ್ನೂ ಒಳಗೊಂಡಿವೆ.

ಕೆಲವು ಇತಿಹಾಸಕಾರರು ಇತಿಹಾಸವನ್ನು ವಿಜ್ಞಾನವೆಂದು ತಿಳಿದಿದ್ದರೂ ನಿರೂಪಣೆಯ ವಿಚಾರಕ್ಕೆ ಬಂದಾಗ ಕಲಾತ್ಮಕ ನಿರೂಪಣೆಯ ನಿದರ್ಶನ ನೀಡುತ್ತಾರೆ. ವಿಜ್ಞಾನಕ್ಕಿಂತ ಹೆಚ್ಚೆಂದು ವಾದಿಸುತ್ತಾರೆ. ಕೆಲವೊಮ್ಮೆ ತಮ್ಮ ನಿರೂಪಣೆಯಲ್ಲಿ ತಪ್ಪು ಅಭಿಪ್ರಾಯವನ್ನು ತಂದರೂ ವೈಜ್ಞಾನಿಕ ತತ್ವದ ಚೌಕಟ್ಟು ನೀಡಿ, ವಿಷಯದೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಹಾಗಾಗಿ ಇತಿಹಾಸ ಸದಾ ಚಲನಾತ್ಮಕವಾದುದು. ಅದು ಕಾಲದ ಜೊತೆಗೆ ಸಾಗುತ್ತದೆ. ಈ ಕಾಲ ಚಲಿಸುವಾಗ ಅದು ತನ್ನೊಳಗೆ ಹುದುಗಿಕೊಂಡ ಹಲವು ಸಂಸ್ಕೃತಿಗಳನ್ನು ಅನಾವರಣಗೊಳಿಸುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಇತಿಹಾಸ ಅಧ್ಯಯನದಲ್ಲಿ ಟೈಮ್‌ಲೈನ್‌ಗೆ ಬಹಳ ಮಹತ್ವ ಇದೆ. ಇದನ್ನು ಅರಿತು ನೆನಪಿಟ್ಟುಕೊಂಡು ಪರೀಕ್ಷೆ ಬರೆದವರು ಸುಲಭವಾಗಿ ಅಂಕ ಗಳಿಸಲು ಸಾಧ್ಯವಾಗುತ್ತದೆ.

ಏನಿದು ಟೈಮ್‌ಲೈನ್?

ಟೈಮ್‌ಲೈನ್ ಅಂದರೆ ಕಾಲಗಣನೆ . ಅಂದರೆ ಕಾಲದ ದೃಶ್ಯ ನಿರೂಪಣೆಯಾಗಿದ್ದು ಅದು ಅನುಕ್ರಮ ಮಾಹಿತಿಯನ್ನು ಒಳಗೊಂಡಿರುತ್ತದೆ. ಕಾಲಗಣನೆ ಮೂಲಕ ಐತಿಹಾಸಿಕ ಘಟನೆಗಳ ನಡುವಿನ ಅನುಕ್ರಮ ಮತ್ತು ಕಾರಣ ಸಂಬಂಧವನ್ನು ಗುರುತಿಸಬಹುದು. ಘಟನೆಗಳನ್ನು ಒಂದು ಸುಸಂಬದ್ಧವಾದ ತಾತ್ಕಾಲಿಕ ರೇಖೆಯ ಮೇಲೆ ಮ್ಯಾಪಿಂಗ್ ಮಾಡುವ ಮೂಲಕ ಇತಿಹಾಸವನ್ನು ಜೀವಂತಗೊಳಿಸಿ ನಿರೂಪಿಸುವುದೇ ಕಾಲಗಣನೆಯಾಗಿದೆ. ಇತಿಹಾಸ ಅಧ್ಯಯನದಲ್ಲಿ ಕಾಲಗಣನೆ ಹೆಚ್ಚು ಮೌಲ್ಯಯುತವಾದ ಸಂಪನ್ಮೂಲವಾಗಿವೆ.

ಇತಿಹಾಸದಲ್ಲಿ ಟೈಮ್‌ಲೈನ್

ಮಾನವರ ಇತಿಹಾಸದಲ್ಲಿ ಕಾಲಗಣನೆಯ ಆವಿಷ್ಕಾರ, ಉಲ್ಲೇಖ ಅತ್ಯಂತ ಮಹತ್ವಪೂರ್ಣವಾಗಿದೆ. ದಿನ, ವಾರ, ತಿಂಗಳು, ವರ್ಷವನ್ನು ದಾಖಲಿಸುವುದು ಅತಿ ಮುಖ್ಯವಾಗಿದೆ. ಈಗ ನಾವು ಸಾಮಾನ್ಯವಾಗಿ ಕ್ರಿ.ಶ. ಮತ್ತು ಕ್ರಿ.ಪೂ. ಕಾಲವೆಂದು ಗುರುತಿಸುತ್ತೇವೆ. ಕ್ರಿಸ್ತನ ಜನನದಿಂದ ಕ್ರಿಸ್ತಶಕ ಪ್ರಾರಂಭ. ಹಿಜಿರಶಕವನ್ನು ಮುಸ್ಲಿಂ ಶಕವೆಂದು ಕರೆಯಲಾಗಿದೆ. ಇದು ಮಹಮ್ಮದ್ ಪೈಗಂಬರರು ಮೆಕ್ಕಾ ನಗರದಿಂದ ತನ್ನ ಮತ್ತು ತನ್ನ ಅನುಯಾಯಿಗಳ ರಕ್ಷಣೆಗಾಗಿ ಮದಿನಾ(ಯಾತ್ರಿಬ್)ಗೆ ವಲಸೆ ಹೋದ (ಸಾ.ಶ. 622) ವರ್ಷವಾಗಿದೆ.

ಭಾರತದ ರಾಷ್ಟ್ರೀಯ ಶಕವರ್ಷ (22 ಮಾರ್ಚ್ 1957) ವನ್ನು ಜಾರಿಗೊಳಿಸಲಾಗಿದೆ. ಇದು ಕ್ರಿ.ಶದ ವರ್ಷಕ್ಕಿಂತ 78 ವರ್ಷ ಕಡಿಮೆ ಇದೆ(ಶಾಲಿವಾಹನ ಶಕ). ಮಧ್ಯಯುಗೀನ ಇತಿಹಾಸವು ಸಾ.ಶ. 700 ರಿಂದ 1800ರ ವರೆಗೆ ಒಳಗೊಂಡಿದೆ. ಆಯಾ ಕಾಲಘಟ್ಟದಲ್ಲಿನ ಜನರ ಸಂಸ್ಕೃತಿ, ಭಾಷೆ, ಬರವಣಿಗೆ, ಉಡುಗೆ ತೊಡುಗೆ, ಕಟ್ಟಡಗಳು, ಚಿತ್ರಕಲೆ, ಸಂಗೀತ, ಆರ್ಥಿಕ ರಾಜಕೀಯ ಜೀವನದ ಬಗ್ಗೆ ಅಧ್ಯಯನ ಮಾಡಲು ಇತಿಹಾಸ ಸಹಕಾರಿ.

ಟೈಮ್‌ಲೈನ್ ಏಕೆ ಮುಖ್ಯ ?

ನಡೆದ ಘಟನೆಗಳು ಯಾವಾಗ? ಮತ್ತು ಎಲ್ಲಿ? ಎಂಬುದು ಸ್ಪಷ್ಟವಾಗಿದ್ದಾಗ ಮಾತ್ರ ಇತಿಹಾಸ ಅರ್ಥಪೂರ್ಣ ಕಥೆಯಾಗುತ್ತದೆ. ಯಾವುದೇ ಒಂದು ಘಟನೆಗೆ ಸಂಬಂಧಿಸಿದಂತೆ ಯಾವಾಗ? ಎಲ್ಲಿ? ಎಂಬುದನ್ನು ಅರಿಯದೆ, ಹೇಗೆ? ಮತ್ತು ಏಕೆ? ಎಂದು ಉತ್ತರಿಸುವುದು ಸಾಧ್ಯವಿಲ್ಲ. ಆದ್ದರಿಂದ ಇತಿಹಾಸವನ್ನು ಪೂರ್ಣವಾಗಿ ಗ್ರಹಿಸಬೇಕೆಂದರೆ, ಘಟನೆ ನಡೆದ ಕಾಲ ಹಾಗೂ ಸ್ಥಳದ ಅರಿವು ಅತ್ಯಗತ್ಯ. ಮಾನವ ಜೀವನದ ಅನನ್ಯ ಅಧ್ಯಯನವಾಗಿರುವುದರಿಂದ ಅನುಕ್ರಮ ಅಧ್ಯಯನ ಮುಖ್ಯ. ಅನುಕ್ರಮ ಅಧ್ಯಯನಕ್ಕೆ ಟೈಮ್‌ಲೈನ್ ತುಂಬಾ ಸಹಾಯಕ. ಇತಿಹಾಸದ ಟೈಮ್‌ಲೈನ್ ರಚಿಸಿಕೊಂಡು ಅಧ್ಯಯನ ಮಾಡಿ.

ಟೈಮ್‌ಲೈನ್ ರಚನೆ ಹೇಗೆ?

ಇತಿಹಾಸದ ಪ್ರಮುಖ ಐತಿಹಾಸಿಕ ಘಟನೆಗಳನ್ನು ಅಧ್ಯಯನ ಮಾಡುವಾಗ ಟೈಮ್‌ಲೈನ್ ರಚನೆ ಉತ್ತಮ ವಿಧಾನವಾಗಿದೆ. ದೃಷ್ಟಾಂತಗಳು ಮತ್ತು ಘಟನೆಗಳನ್ನು ಆಧಾರವಾಗಿಟ್ಟುಕೊಂಡು ವೇಗವಾಗಿ ಮತ್ತು ಸುಲಭವಾಗಿ ಟೈಮ್‌ಲೈನ್ ಅನ್ನು ರಚಿಸಿಕೊಳ್ಳಬಹುದು.

ಟೈಮ್‌ಲೈನ್ ರಚಿಸಲು ಕೆಳಗಿನ ಅಂಶಗಳು ಸಹಾಯಕವಾಗಿವೆ. ಆರಂಭಿಕ ಮತ್ತು ಅಂತಿಮ ದಿನಾಂಕವನ್ನು ನಿರ್ಧರಿಸಿ. ಯಾವ ಕ್ರಮದಲ್ಲಿ ದಾಖಲಿಸಬೇಕು ಎಂಬುದನ್ನು ನಿರ್ಧರಿಸಿ. ಅಂದರೆ ತಿಂಗಳು, ವರ್ಷ, ದಶಕ, ಶತಮಾನ ಹೀಗೆ ಕ್ರಮದಲ್ಲಿ ದಾಖಲಿಸಬೇಕೆಂಬ ಸ್ಪಷ್ಟತೆ ಇರಲಿ. ಘಟನೆಗಳ ಪಟ್ಟಿಯನ್ನು ಸಿದ್ಧ ಮಾಡಿಕೊಳ್ಳಿ. ಘಟನೆಗಳು ಸಂಭವಿಸುವ ನಿರ್ದಿಷ್ಟ ಸಮಯವನ್ನು ವಿವಿಧ ಮೂಲಗಳಿಂದ ಸಂಶೋಧಿಸಿ ನಿಖರಪಡಿಸಿಕೊಳ್ಳಿ.

ಸ್ಪಷ್ಟವಾಗಿ ಟೈಮ್‌ಲೈನ್ ಬರೆದುಕೊಳ್ಳಿ. ಪ್ರಮುಖ ಐತಿಹಾಸಿಕ ಘಟನೆಗಳ ಜೊತೆಗೆ ಸಾಕ್ಷ್ಯಗಳು, ಫೋಟೊಗಳು ಮತ್ತು ಕವಿತೆಗಳಂತಹ ವೈವಿಧ್ಯಮಯ ಸ್ವರೂಪದಿಂದ ರಚಿಸಿದರೆ ಅಧ್ಯಯನಕ್ಕೆ ತುಂಬಾ ಅನುಕೂಲವಾಗುತ್ತದೆ. ವಿವಿಧ ಪರಿಕಲ್ಪನೆಗಳನ್ನಾಧರಿಸಿ ವಿವಿಧ ಟೈಮ್‌ಲೈನ್ ರಚಿಸಿದರೆ ಅಧ್ಯಯನಕ್ಕೊಂದು ಸ್ಪಷ್ಟತೆ ಇರುತ್ತದೆ.

ಶಕ ಬಂದಿದ್ದು ಯಾಕೆ?

ಸಾಮಾನ್ಯ ಶಕ ಎಂಬ ಪದ ಕಳೆದ ನಾಲ್ಕಾರು ವರ್ಷಗಳಿಂದ ಚಾಲ್ತಿಯಲ್ಲಿದೆ. ಕ್ರಿಸ್ತಶಕ ಮತ್ತು ಕ್ರಿಸ್ತಪೂರ್ವ ಎಂಬುದಕ್ಕೆ ಪರ್ಯಾಯವಾಗಿ ಸಾಮಾನ್ಯ ಶಕ ಮತ್ತು ಸಾಮಾನ್ಯ ಶಕಪೂರ್ವ ಎಂಬ ಪದಗಳನ್ನು ಬಳಸಲಾಗುತ್ತದೆ.



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಅರಣ್ಯಶಾಸ್ತ್ರ ಕಲಿತರೆ ಅವಕಾಶಗಳಿವೆಯೇ?

1. ನಾನು ಕಳೆದ ವರ್ಷ ಬಿ.ಟೆಕ್ (ಮೆಕ್ಯಾನಿಕಲ್) ಮಾಡಿದ್ದು ಈವರೆಗೆ ಯಾವ ಉದ್ಯೋಗವೂ ಸಿಕ್ಕಿಲ್ಲ. ಸಿಗುವ ಕೆಲವೇ ಸಂದರ್ಶನಗಳಲ್ಲಿ ಏನೋ ಎಡವಟ್ಟಾಗುತ್ತಿದೆ ಎನಿಸುತ್ತಿದೆ. ಮುಂದೆ ಎಂಟೆಕ್ ಮಾಡುವುದೋ ಅಥವಾ ಉದ್ಯೋಗಕ್ಕೇ ತಯಾರಾಗುವುದೋ ತಿಳಿಯುತ್ತಿಲ್ಲ. ನಿಮ್ಮ ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ಬಿ.ಟೆಕ್ (ಮೆಕ್ಯಾನಿಕಲ್) ಮಾಡಿದ ನಂತರವೂ ಉತ್ತಮ ಉದ್ಯೋಗ ಸಿಗದಿರಲು ಕಾರಣಗಳೇನು ಎಂದು ಸ್ವಯಂ-ಮೌಲ್ಯಮಾಪನ ಮಾಡಬೇಕು. ಸಾಮಾನ್ಯವಾಗಿ, ಉದ್ಯೋಗದಲ್ಲಿ ಯಶಸ್ವಿಯಾಗಲು ಎಂಜಿನಿಯರಿಂಗ್ ಜ್ಞಾನದ ಜೊತೆಗೆ ಪ್ರಾಥಮಿಕ ಮತ್ತು ವೃತ್ತಿ ಸಂಬಂಧಿತ ಕೌಶಲಗಳ ಅಗತ್ಯವಿರುತ್ತದೆ. ಉದ್ಯೋಗದ ಸಂದರ್ಶನಗಳಲ್ಲಿ, ಇವುಗಳು ಅಭ್ಯರ್ಥಿಗಳಲ್ಲಿವೆಯೇ ಎಂದು ಪರೀಕ್ಷಿಸಲಾಗುತ್ತದೆ. ಉದಾಹರಣೆಗೆ, ಪ್ರಾಥಮಿಕ ಕೌಶಲಗಳಾದ ಸಮಯದ ನಿರ್ವಹಣೆ, ಸಂವಹನ ಕೌಶಲ, ಅಂತರ್-ವೈಯಕ್ತಿಕ ಕೌಶಲ ಮತ್ತು ನಾಯಕತ್ವದ ಕೌಶಲಗಳು ಯಾವುದೇ ವೃತ್ತಿಯಲ್ಲಿ ಮುಖ್ಯವಾಗುತ್ತದೆ. ಹಾಗೂ, ವೃತ್ತಿ ಸಂಬಂಧಿತ ಕೌಶಲಗಳಾದ ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ, ವಿಶ್ಲೇಷಾತ್ಮಕ ಕೌಶಲ, ಇತ್ಯಾದಿ ಕೌಶಲಗಳೂ ಎಂಜಿನಿಯರಿಂಗ್ ಉದ್ಯೋಗದ ಆಕಾಂಕ್ಷಿಗಳಲ್ಲಿರಬೇಕು.

ಹಾಗಾಗಿ, ನಿಮ್ಮ ಶಕ್ತಿ, ಸಾಮರ್ಥ್ಯ, ಕುಂದು ಕೊರತೆಗಳನ್ನರಿತು, ಪ್ರಾಮಾಣಿಕ ಪ್ರಯತ್ನಗಳಿಂದ ಈ ಕೌಶಲಗಳನ್ನು ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಬೇಕು. ವ್ಯಕ್ತಿತ್ವ ಮತ್ತು ವೃತ್ತಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಯಲು ಇಂದು ವಿಭಿನ್ನವಾದ ಮತ್ತು ವಿಸ್ತಾರವಾದ ಅವಕಾಶಗಳಿವೆ. ವ್ಯಕ್ತಿತ್ವ ವೃದ್ಧಿಸುವ ಕೇಂದ್ರಗಳು, ಕೌಶಲ ತರಬೇತಿ ಕೇಂದ್ರಗಳು, ಕೌಶಲ ಆಯೋಗಗಳು, ಆನ್‌ಲೈನ್ ತರಗತಿಗಳು, ಸಾಧಕರ ಯಶಸ್ಸಿನ ಕಥೆಗಳು, ವಿಡಿಯೊಗಳು, ಪುಸ್ತಕಗಳು ಇತ್ಯಾದಿಗಳನ್ನು ಉಪಯೋಗಿಸಿಕೊಂಡು ವ್ಯಕ್ತಿತ್ವದ ಪರಿಪೂರ್ಣತೆಯನ್ನು ಗಳಿಸಿ, ವೃತ್ತಿ ಜೀವನವನ್ನು ಯಶಸ್ವಿಯಾಗಿ ರೂಪಿಸಿಕೊಳ್ಳಬಹುದು. ಕೆಲವು ವರ್ಷಗಳ ಅನುಭವದ ನಂತರ ಅಗತ್ಯವೆನಿಸಿದರೆ, ಸಂಜೆ/ವಾರಾಂತ್ಯ ತರಗತಿಗಳ ಮೂಲಕ ಎಂಟೆಕ್ ಮಾಡಬಹುದು.

ಅಚ್ಚುಕಟ್ಟಾದ ಬಯೋಡೇಟ ಬರೆಯುವುದರ ಬಗ್ಗೆ ಮತ್ತು ಸಂದರ್ಶನಗಳನ್ನು ಆತ್ಮವಿಶ್ವಾಸದಿಂದ ಎದುರಿಸುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=faQz_iLCWEk

2. ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಮಾಡುತ್ತಿದ್ದು, ಮೆಡಿಕಲ್/ಎಂಜಿನಿಯರಿಂಗ್ ಅಲ್ಲದೆ ಬೇರೆ ಯಾವ ಕೋರ್ಸ್ ಮಾಡಬಹುದು? ಬಿ.ಎಸ್ಸಿ (ಫಾರೆಸ್ಟ್ರಿ) ಬಗ್ಗೆ ಮಾಹಿತಿ ನೀಡಬಹುದೇ?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ (ವಿಜ್ಞಾನ) ನಂತರ ಅಪಾರವಾದ ಕೋರ್ಸ್ ಆಯ್ಕೆಗಳಿವೆ. ಉದಾಹರಣೆಗೆ ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್, ಐಟಿ, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ ಕೃಷಿ, ಪಶುಸಂಗೋಪನೆ, ಹೈನುಗಾರಿಕೆ, ಬಯೋಟೆಕ್ನಾಲಜಿ, ನರ್ಸಿಂಗ್, ಪ್ಯಾರಾಮೆಡಿಕಲ್, ಆಹಾರ ತಂತ್ರಜ್ಞಾನ ಸೇರಿದಂತೆ ಹಲವಾರು ಆಯ್ಕೆಗಳು), ಬಿ.ಫಾರ್ಮಾ, ಬಿಕಾಂ, ಬಿಕಾಂ (ಹಾನರ್ಸ್), ಬಿಎ, ಬಿಎ (ಹಾನರ್ಸ್) ಬಿಸಿಎ, ಬಿಬಿಎ, ಬಿ.ಡಿಸೈನ್, ಸಿಎ, ಎಸಿಎಸ್, ಸಿಎಂಎ ಇತ್ಯಾದಿ ಕೋರ್ಸ್‌ಗಳನ್ನು ಮಾಡಬಹುದು.

ಹಾಗೂ, ಇತ್ತೀಚಿನ ವರ್ಷಗಳಲ್ಲಿ ಮುನ್ನೆಲೆಗೆ ಬಂದಿರುವ ನಾಲ್ಕು ವರ್ಷದ ಬಿ.ಎಸ್ಸಿ (ಅರಣ್ಯ ಶಾಸ್ತ್ರ) ಕೋರ್ಸ್ ಮುಖಾಂತರ ಆಕರ್ಷಕವಾದ ವೃತ್ತಿಯನ್ನು ರೂಪಿಸಿಕೊಳ್ಳಬಹುದು. ಜಾಗತಿಕ ತಾಪಮಾನದ ಏರಿಕೆ ಮತ್ತು ಪರಿಸರ ವ್ಯವಸ್ಥೆಯ ಬಗ್ಗೆ ಕಾಳಜಿ, ವನ್ಯಜೀವಿಗಳ ಮೂಲಭೂತ ಅಂಶಗಳು, ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ, ಜಲವಿಜ್ಞಾನ, ಮಣ್ಣು ಮತ್ತು ನೀರಿನ ಸಮಸ್ಯೆ, ತೋಟಗಾರಿಕೆ ಇಂತಹ ವಿಷಯಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು, ಈ ಕೋರ್ಸ್ ಮಾಡಬಹುದು. ಸಿರ್ಸಿ ನಗರ ಮತ್ತು ಕೊಡಗಿನ ಪೊನ್ನಂಪೇಟೆಯಲ್ಲಿರುವ ಎರಡು ಕಾಲೇಜುಗಳಿಗೆ ಸಿಇಟಿ ಪರೀಕ್ಷೆಯ ಮೂಲಕ ಸೀಟ್ ಹಂಚಿಕೆಯಾಗುತ್ತದೆ.

ಈ ಕೋರ್ಸ್ ನಂತರ ಸರ್ಕಾರದ ಅರಣ್ಯ ಇಲಾಖೆ ಮತ್ತು ಖಾಸಗಿ ವಲಯದ ಕೃಷಿ ವ್ಯಾಪಾರೋದ್ಯಮ ಕಂಪನಿಗಳಲ್ಲಿ ಉದ್ಯೋಗವನ್ನು ಅರಸಬಹುದು. ಹೆಚ್ಚಿನ ತಜ್ಞತೆಗಾಗಿ ಎಂ.ಎಸ್ಸಿ/ಪಿ.ಎಚ್‌ಡಿ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=JlMo33YxTiA

3. ಸರ್, ನಾನು ಮುಂದಿನ ವರ್ಷಕ್ಕೆ ಸಿವಿಲ್ ಎಂಜಿನಿಯರಿಂಗ್ ಮುಗಿಸುತ್ತೇನೆ. ನಂತರ, ಯಾವ ಕ್ಷೇತ್ರದಲ್ಲಿ ಬೇಗ ಕೆಲಸ ದೊರಕಬಹುದು? ಅಥವಾ ಬೇರೆ ಯಾವ ಕ್ಷೇತ್ರದಲ್ಲಿ ಪ್ರಯತ್ನ ಮಾಡಬೇಕು?

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಆಸಕ್ತಿಗೆ ಅನುಗುಣವಾಗಿ ಹೆದ್ದಾರಿ ಯೋಜನೆಗಳು, ರಸ್ತೆ ಮತ್ತು ಸೇತುವೆ ನಿರ್ಮಾಣ, ರೈಲ್ವೆ, ಅಣೆಕಟ್ಟು ಮತ್ತು ನೀರಾವರಿ ಯೋಜನೆಗಳು, ಗ್ರಾಮೀಣಾಭಿವೃದ್ಧಿ, ನಗರಗಳಲ್ಲಿ ಮೂಲ ಸೌಕರ್ಯ ನಿರ್ಮಾಣ, ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳು, ವಸತಿ ಮುಂತಾದ ವಲಯಗಳಲ್ಲಿ ವೃತ್ತಿಯನ್ನು ಅರಸಬಹುದು. ಹಾಗೂ, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಹುದ್ದೆಗಳನ್ನು ಪಡೆದುಕೊಳ್ಳಬಹುದು. ನಮ್ಮ ಅಭಿಪ್ರಾಯದಂತೆ, ನೀವು ಓದಿರುವ ಕೋರ್ಸಿಗೂ ವೃತ್ತಿಗೂ ಸಾಮ್ಯತೆಯಿದ್ದರೆ, ವೃತ್ತಿ ಜೀವನದ ಸಾಧನೆಗೆ ನೆರವಾಗುತ್ತದೆ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

16) ಬಿಟ್ಟ ಸ್ಥಳ ತುಂಬಿ

4) ರಕ್ತದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ.................... ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

5) ದ್ಯುತಿಸಂಶ್ಲೇಷಣಾ ಕ್ರಿಯೆಗೆ ಬೇಕಾದ ಕಚ್ಚಾಪದಾರ್ಥಗಳು .... ಮತ್ತು ....

ಉತ್ತರ:– ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು

6) ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಬೇಕಾದ ಅಂಶಗಳು .... ಮತ್ತು....................

ಉತ್ತರ:– ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್

7) ಸಸ್ಯಗಳು ಬೆಳಗಿನ ಹೊತ್ತಿನಲ್ಲಿ .... ಬಳಸಿಕೊಳ್ಳುವ ಕಾರಣ ಅದೂ ಬಿಡುಗಡೆ ಮಾಡುವುದಿಲ್ಲ

ಉತ್ತರ:– ಕಾರ್ಬನ್ ಡೈ ಆಕ್ಸೈಡ್

8) ನಮ್ಮ ದೇಹದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ .... ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

9) ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ಅದೂ ನಮ್ಮ .... ದೊಡ್ಡದಿದೆ

ಉತ್ತರ:– ಮುಷ್ಟಿಯಷ್ಟು

10)...............ಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥಹ ನೈಟ್ರೋಜನ್ ಯುಕ್ತ ತ್ಯಾಜ್ಯಗಳನ್ನು ತೆಗೆದುಹಾಕುತ್ತದೆ.

ಉತ್ತರ:– ಮೂತ್ರಪಿಂಡ

17) ಮಾನವ ಹೃದಯದ ಭೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



18) ಮೀನುಗಳು ಆಕ್ಸಿಜನ್ ಅನ್ನು ಹೇಗೆ ಪಡೆದುಕೊಳ್ಳುತ್ತವೆ.?

ಉತ್ತರ:– ಮೀನುಗಳು ತಮ್ಮ ಬಾಯಿಯ ಮೂಲಕ ನೀರನ್ನು ಒಳ ತೆಗೆದುಕೊಂಡು ಕಿವಿರುಗಳ ಕಡೆಗೆ ಬಲವಾಗಿ ತಳ್ಳುತ್ತವೆ. ಅಲ್ಲಿ ಕರಗಿರುವ ಆಕ್ಸಿಜನ್ ಅನ್ನು ರಕ್ತದ ಮೂಲಕ ಪಡೆದುಕೊಳ್ಳುತ್ತವೆ.

19) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ

ಉತ್ತರ:– ಮನುಷ್ಯರಲ್ಲಿ (ಚಿತ್ರ ನೋಡಿ) ಮೂಗಿನ ಹೊಳ್ಳೆಗಳ ಮೂಲಕ ಗಾಳಿ ಒಳ ತೆಗೆದುಕೊಳ್ಳಲ್ಪಡುತ್ತದೆ. ಮೂಗಿನ ಹೊಳ್ಳೆಯೊಳಗೆ ಹಾದು ಹೋಗುವ ಗಾಳಿಯು ಹೊಳ್ಳೆಯ ಒಳದಾರಿಯಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಸೋಸಲ್ಪಡುತ್ತದೆ. ಹೊಳ್ಳೆಯ ಒಳ ದಾರಿಯು ಲೋಳೆಯಿಂದ ಕೂಡಾ ಆವರಿಸಿದೆ. ಅದೂ ಕೂಡಾ ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.



ಇಲ್ಲಿಂದ ಗಾಳಿಯು ಗಂಟಲಿನ ಮೂಲಕ ಶ್ವಾಸಕೋಶದೊಳಗೆ ಚಲಿಸುತ್ತದೆ. ಗಂಟಲಿನಲ್ಲಿ ಮೃದ್ವಸ್ಥಿಯ ಉಂಗುರಗಳಂಥ ರಚನೆಗಳಿವೆ. ಇವುಗಳು ಗಾಳಿ ಹಾದು ಹೋಗುವ ರಚನೆ ಕುಸಿಯದಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿರುವಂತೆ ಮಾನವನ ಶ್ವಾಸಕಾಂಗವ್ಯೂಹ ಶ್ವಾಸನಾಳವು ಶ್ವಾಸಕೋಶದೊಳಗೆ ಅತಿಸಣ್ಣ ನಳಿಕೆಗಳಾಗಿ ವಿಭಜನೆ ಹೊಂದಿ ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಬದಲಾಗುತ್ತವೆ. ಅವುಗಳನ್ನು ಗಾಳಿಗೂಡುಗಳು ಎನ್ನುವರು. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಅಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ನಾವು ಗಾಳಿಯನ್ನು ಒಳತೆಗೆದುಕೊಂಡಾಗ ನಮ್ಮ ಪಕ್ಕೆಲುಬುಗಳು ಮೇಲಕ್ಕೆ ಏರುತ್ತವೆ ಮತ್ತು ವಪೆಯು ಚಪ್ಪಟೆಗೊಳ್ಳುತ್ತದೆ. ಇದರ ಪರಿಣಾಮವಾಗಿ ಎದೆಗೂಡು ದೊಡ್ಡದಾಗುತ್ತದೆ. ಇದರಿಂದಾಗಿ ಗಾಳಿಯು ಶ್ವಾಸಕೋಶದೊಳಗೆ ಹೀರಲ್ಪಡುತ್ತದೆ ಮತ್ತು ಹಿಗ್ಗಿದ ಗಾಳಿಗೂಡುಗಳನ್ನು ತುಂಬುತ್ತದೆ. ರಕ್ತವು ದೇಹದ ಇತರ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಗಾಳಿಗೂಡುಗಳಲ್ಲಿ ಬಿಡುಗಡೆಮಾಡಲು ತರುತ್ತದೆ ಮತ್ತು ಆಲ್ವಿಯೋಲಾರ್ ಗಾಳಿಯಲ್ಲಿರುವ ಆಕ್ಸಿಜನ್‌ಅನ್ನು ಆಲ್ವಿಯೋಲಾರ್ ರಕ್ತನಾಳಗಳಲ್ಲಿರುವ ರಕ್ತವು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ. ಉಸಿರಾಟ ಚಕ್ರದ ಸಮಯದಲ್ಲಿ ಗಾಳಿಯನ್ನು ಒಳತೆಗೆದುಕೊಂಡು ಹೊರಬಿಡುವಾಗ ಶ್ವಾಸಕೋಶಗಳು ಯಾವಾಗಲೂ ಸ್ವಲ್ಪ ಪ್ರಮಾಣದ ಗಾಳಿಯನ್ನು ಉಳಿಸಿಕೊಂಡಿರುತ್ತವೆ. ಆದ್ದರಿಂದ, ಆಕ್ಸಿಜನ್‌ಅನ್ನು ಹೀರಿಕೊಳ್ಳಲು ಮತ್ತು ಕಾರ್ಬನ್ ಡೈಆಕ್ಸೈಡ್‌ಅನ್ನು ಬಿಡುಗಡೆ ಮಾಡಲು ಸಾಕಷ್ಟು ಸಮಯ ಇರುತ್ತದೆ.

ಪ್ರಾಣಿಗಳ ದೇಹದ ಗಾತ್ರವು ದೊಡ್ಡದಾಗಿದ್ದಾಗ ವಿಸರಣಾ ಒತ್ತಡವೊಂದೇ ದೇಹದ ಎಲ್ಲಾ ಭಾಗಗಳಿಗೆ ಆಕ್ಸಿಜನ್ ಪೂರೈಸುವ ಜವಾಬ್ದಾರಿಯನ್ನು ನಿರ್ವಹಿಸಲಾರದು. ಬದಲಾಗಿ ಉಸಿರಾಟದ ವರ್ಣಕಗಳು ಶ್ವಾಸಕೋಶದಲ್ಲಿನ ಗಾಳಿಯಿಂದ ಆಕ್ಸಿಜನ್‌ಅನ್ನು ಪಡೆಯುತ್ತವೆ ಮತ್ತು ಬಿಡುಗಡೆ ಮಾಡುವ ಮೊದಲು ಆಕ್ಸಿಜನ್ ಕೊರತೆಯಿರುವ ಅಂಗಾಂಶಗಳಿಗೆ ಕೊಂಡೊಯ್ಯುತ್ತವೆ. ಮನುಷ್ಯರಲ್ಲಿ ಹಿಮೋಗ್ಲೋಬಿನ್ ಉಸಿರಾಟದ ವರ್ಣಕವಾಗಿದ್ದು ಅದು ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆಯನ್ನು ಹೊಂದಿದೆ. ಈ ವರ್ಣಕವು ಕೆಂಪು ರಕ್ತಕಣಗಳಲ್ಲಿರುತ್ತದೆ. ಆಕ್ಸಿಜನ್‌ಗಿಂತ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ನೀರಿನಲ್ಲಿ ಕರಗುತ್ತದೆ ಮತ್ತು ಬಹುತೇಕ ಇದರಿಂದಾಗಿ ನಮ್ಮ ರಕ್ತದಲ್ಲಿ ವಿಲೀನಗೊಂಡ ರೂಪದಲ್ಲಿ ಸಾಗಿಸಲ್ಪಡುತ್ತದೆ.

ಎಸ್ಸೆಸ್ಸೆಲ್ಸಿ ಗಣಿತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CHEMISTRY

ELECTROCHEMISTRY

34. Write a note on Standard Hydrogen Electrode.

Ans:- In a standard hydrogen electrode, a platinum wire coated with finely divided platinum called platinum black is sealed in a glass tube. It carries a platinum foil at one end as in the fig. The wire is dipped in an aqueous solution containing 1 molar H^+ ion connection (normally 1 M HCl is used). Pure hydrogen gas under a pressure of 1 bar is constantly bubbled through the solution. The temperature of the solution is maintained at 298 K.



Standard hydrogen electrode

It can act both as cathode and anode. When it is to act as anode (oxidation is to take place), molecules of hydrogen gas change to H^+ ions as follows:

$$H_2(g) \rightarrow 2H^+(aq) + 2e^-$$

The ions formed go into the solution. In case, it is to act as cathode (reduction is to take place) then H^+ ions from the solution accept electrons and are reduced to $H_2(g)$ as follows:

$$2H^+(aq) + 2e^- \rightarrow H_2(g)$$

It is also known as reversible electrode as it can act both as cathode and anode. The coating of platinum black over platinum foil absorbs hydrogen and also helps to establish an equilibrium between the molecules of H_2 and the ions formed in solution. A standard hydrogen electrode is represented as Pt, $H_2(g)H^+$ (1M).

As pointed earlier, its standard oxidation as well reduction potentials are taken as zero.

Limitations of SHE

The standard hydrogen electrode or normal hydrogen electrode suffers from following limitations:

(i) It is not so easy to maintain a pressure of 1 atmosphere for hydrogen gas throughout.

(ii) It is quite difficult to the kept the $[H^+]$ as 1 M.

(iii) Platinum which is a part of the electrode, gets easily poisoned even by small traces of impurities present.

Calomel and silver electrodes can also be used as reference electrodes.

Measurement of Standard Electrode Potential (E^o).

A standard hydrogen electrode acts as the reference electrode and it helps in measuring the standard electrode potential of an electrode.

An electrochemical cell is set up in which the metal electrode under consideration is kept in one half cell and the standard hydrogen electrode acts as the other half cell. The potential difference developed as a result of the redox reaction is measured with the help of a high resistance voltmeter (or better by a potentiometer).

Since the electrode potential of the hydrogen electrode under standard conditions is taken as zero, the reading of the voltmeter will therefore, give the standard electrode potential of the electrode under consideration.

The deflection of the voltmeter in the cell circuit represents the flow of current. The flow of electrons is towards opposite side. If it is towards the metal electrode, this means that the flow of electrons is towards the standard hydrogen electrode.

Therefore, metal electrode will act as anode and standard hydrogen electrode as cathode. In case, the deflection is towards the hydrogen electrode, this means that the flow of electrons is from hydrogen electrode towards the metal electrode. In such a case, hydrogen electrode will act as anode and the metal electrode as the cathode.

In general, $E^o_{cell} = E^o_{cathode} - E^o_{anode}$

Here, E^o value represents the standard reduction potential of the electrode.

35. When is an electrode said to be under the standard conditions?

Ans:- An electrode is said to be under standard conditions if:

(a) Concentration of electrolyte solution is 1 molar (1 M)

(b) Pressure of gas/gases involved is one atmosphere

(c) Temperature is constant (generally 298K)

36. Mention some of the applications of electrolysis.

Ans:- Some of the applications of electrolysis are –

(a) Determination of equivalent masses of the elements. That is, the masses of metals collected at the respective electrodes are directly proportional to their equivalent masses.

(b) Used in electrometallurgy - that is in the isolation of reactive metals like sodium, potassium, magnesium, calcium, aluminium etc., by the electrolysis of their fused salts.

(c) In electrorefining of metals - The metals like copper, silver, gold, aluminium, tin etc. are refined or purified by the process of electrorefining.

(d) In electroplating – It is the process of coating a layer of superior metal over the surface of interior metal.

37. What are the main aims of electroplating?

Ans:- The main aims of electroplating are –

a) To check corrosion or rusting of the inferior metal.

b) To impart lustre or brightness to the inferior metal.

38. What is Conductance of an electrolyte?

Ans:- Conductance of an electrolyte is an ease with which the current flows through the electrolyte.

It is the reciprocal of the resistance of electrolyte and is denoted by C.

$$\text{Conductance}\ (C) = \frac{1}{R}$$

It is expressed in ohm^{-1} or mho or siemen (S).

39. What is specific resistance of the material?

Ans:- The specific resistance of the material is the resistance of a material whose length is one metre and area of cross – section is one square metre.

40. What is specific conductance?

Ans:- The Specific conductance (k), is defined as the conductance of the material whose length is one metre and the area of cross section in one square metre.

$$C = k\left(\frac{a}{l}\right)\ (or)\ k = C.\left(\frac{l}{a}\right)$$

Where, 'C' is the conductance, 'l' is the length and 'a' is the area of cross section.

Unit of specific conductance is $siemen\,(metre)^{-1}$

41. What is molar conductance? *(Contd.........)*

ಉಪಾಹಾರ ಸಭೆಯ ಕುರಿತು ಮಾತನಾಡಿದ ಸಿದ್ದರಾಮಯ್ಯ ● ಲೋಕಸಭೆ ಚುನಾವಣೆ ಬಗ್ಗೆಯೂ ನಿರ್ದೇಶನ

‘ಸಿ.ಎಂ ವಿಚಾರ ನಾನೇ ಪ್ರಸ್ತಾಪ ಮಾಡಿದ್ದೆ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಮೈಸೂರು: ‘ಮುಖ್ಯಮಂತ್ರಿ ವಿಚಾರ ಕುರಿತಂತೆ ಇನ್ನು ಮುಂದೆ ಹೇಳಿಕೆ ನೀಡದಂತೆ ಶಾಸಕರು ಮತ್ತು ಸಚಿವರಿಗೆ ತಿಳಿಸಿದ್ದೇನೆ. ಶನಿವಾರ ಕರೆದಿದ್ದ ಉಪಾಹಾರ ಸಭೆಯಲ್ಲಿ ನಾನೇ ಈ ವಿಷಯ ಪ್ರಸ್ತಾಪಿಸಿದ್ದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆ ಬಗ್ಗೆಯೂ ಸಭೆಯಲ್ಲಿ ಕೆಲವು ನಿರ್ದೇಶನ ನೀಡಿದ್ದೇನೆ’ ಎಂದು ಹೇಳಿದರು.

‘ಡಿ.ಕೆ.ಶಿವಕುಮಾರ್ ಸಿ.ಎಂ ಆಗುವುದಾದರೆ ಜೆಡಿಎಸ್ ಬೆಂಬಲ ನೀಡಲಿದೆ ಎಂದು ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಗಿ ಹೇಳಿದ್ದಾರೆ, ಬೇರೇನೂ ಇಲ್ಲ. ಮೊದಲು ಅವರು ಎನ್‌ಡಿಎಯಿಂದ ಹೊರಬರಲಿ ಎಂದೂ ಶಿವಕುಮಾರ್ ಅವರೇ ಹೇಳಿದ್ದಾರೆ’ ಎಂದು ಪ್ರತಿಕ್ರಿಯಿಸಿದರು. ‘ಕುಮಾರಸ್ವಾಮಿಗೆ ವ್ಯಂಗ್ಯವಾಗಿ ಹೇಳುವುದೂ ಬರುತ್ತದೆಯಲ್ಲಾ ಎನ್ನುವುದೇ ಖುಷಿ’ ಎಂದು ಹೇಳಿ ನಕ್ಕರು.

‘ಬಿಜೆಪಿ ಮತ್ತು ಜೆಡಿಎಸ್‌ನವರು ರಾಜಕೀಯವಾಗಿ ಹತಾಶರಾಗಿದ್ದಾರೆ. ಆದ್ದರಿಂದಲೇ ಮುಖ್ಯಮಂತ್ರಿ ಕುರ್ಚಿಯ ಬಗ್ಗೆ ಇಲ್ಲಸಲ್ಲದ್ದನ್ನು ಮಾತನಾಡುತ್ತಿದ್ದಾರೆ’ ಎಂದು ಅವರು ಟೀಕಿಸಿದರು.

‘ಸಮಯ ಕೂಡಿ ಬರಬೇಕು’

ಸತೀಶ ಜಾರಕಿಹೊಳಿ

ಬಾಗಲಕೋಟೆ: ‘ಮುಖ್ಯಮಂತ್ರಿ ಆಗಲು ಕಾಯಬೇಕಾಗುತ್ತದೆ. ಸಮಯ ಕೂಡಿ ಬಂದಾಗ ಮಾತ್ರ ಸಾಧ್ಯ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಈ ಕುರಿತು ನಿರ್ಣಯ ಕೈಗೊಳ್ಳಲು ಪಕ್ಷ ಹಾಗೂ ಶಾಸಕರಿದ್ದಾರೆ. ಪಕ್ಷದ ತೀರ್ಮಾನವೇ ಮುಖ್ಯ. ‘ನನಗೆ ಯಾವುದೇ ರೀತಿ ಅಸಮಾಧಾನವಿಲ್ಲ. ಯಾರಿಗಾದರೂ ಅಸಮಾಧಾನವಿದ್ದರೆ ಮಾತುಕತೆ ಮೂಲಕ ಬಗೆಹರಿಸಲಾಗುವುದು’ ಎಂದು ಹೇಳಿದರು ‘ಮುಂದಿನ ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರುತ್ತಾರೆಯೇ’ ಎಂಬ ಪ್ರಶ್ನೆಗೆ, ‘ಅವರೇ ಈ ಬಗ್ಗೆ ಈಗಾಗಲೇ ಹೇಳಿದ್ದಾರಲ್ಲ. ಕಾದು ನೋಡೋಣ’ ಎಂದರು.

‘ದಲಿತರು ಆಗಬಾರದೇ’

ಪ್ರಸನ್ನಾನಂದ ಸ್ವಾಮೀಜಿ

ಬಾಗಲಕೋಟೆ: ‘ದಲಿತರು ಮತ ಬ್ಯಾಂಕ್ ಮಾತ್ರ ಆಗಿರಬೇಕೇ? ದಲಿತರು ಮುಖ್ಯಮಂತ್ರಿ ಆಗಬಾರದೇ’ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಪ್ರಶ್ನಿಸಿದರು.

ಬಾಗಲಕೋಟೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜಿಲ್ಲಾ ವಾಲ್ಮೀಕಿ ಜನ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಮುಖ್ಯಮಂತ್ರಿ ಸ್ಥಾನ ಕೇವಲ ಕೆಲವರ ಸ್ವತ್ತಾ? ಅದನ್ನು ಗುತ್ತಿಗೆ ಹಿಡಿದುಕೊಂಡಿದ್ದಾರಾ? ದಲಿತರು ಮುಖ್ಯಮಂತ್ರಿ ಆಗಲಿ ಎನ್ನುವ ಔದಾರ್ಯ ಇಲ್ಲದಿದ್ದರೆ ಹೇಗೆ?’ ಎಂದು ಪ್ರಶ್ನಿಸಿದರು. ಸಚಿವ ಸತೀಶ ಜಾರಕಿಹೊಳಿ ಸಮ್ಮುಖದಲ್ಲೇ ದಲಿತ ಸಿಎಂ ಪ್ರಸ್ತಾಪ ಮಾಡಿದ ಸ್ವಾಮೀಜಿ, ‘ಸತೀಶ ಜಾರಕಿಹೊಳಿ ಅವರಿಗೆ ನಾಡಿನ ದೊರೆಯಾಗುವ ಶಕ್ತಿ ಇದೆ. ನಿಮ್ಮ ಜತೆಗೆ ನಾವೆಲ್ಲರೂ ನಿಲ್ಲುತ್ತೇವೆ’ ಎಂದು ಹೇಳಿದರು.

ಸಿಎಂ, ಡಿಸಿಎಂ ಉದ್ಧಟತನದ ಹೇಳಿಕೆ ರಾಜ್ಯಕ್ಕೆ ಮಾರಕ: ವಿಜಯೇಂದ್ರ

ಬಿ.ವೈ. ವಿಜಯೇಂದ್ರ

ಬೆಂಗಳೂರು: ರಾಜ್ಯ ಸರ್ಕಾರ ಕೇಂದ್ರದ ಜತೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಬೇಕು. ಆದರೆ, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಉದ್ಧಟತನದ ಹೇಳಿಕೆಗಳು ರಾಜ್ಯಕ್ಕೆ ಮಾರಕ ಆಗುತ್ತಿವೆ ಎಂದು ಬಿಜೆಪಿ ಉಪಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ತಮ್ಮ ನಿವಾಸದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ವೃಥಾ ರಾಜಕೀಯ ಮಾಡುವುದನ್ನು ಬಿಟ್ಟು, ರಾಜ್ಯದ ಜನರ ಒಳಿತು ಮತ್ತು ಅಭಿವೃದ್ಧಿಯ ಬಗ್ಗೆ ಯೋಚಿಸಬೇಕು ಎಂದು ಅವರು ಸಲಹೆ ನೀಡಿದರು.

ಬರದ ವಿಚಾರದಲ್ಲಿ ರಾಜಕೀಯ ಮಾಡುವುದನ್ನು ಬಿಟ್ಟು, ಕೇಂದ್ರ ಸರ್ಕಾರಕ್ಕೆ ಸ್ಪಂದಿಸಿ, ಅಗತ್ಯ ಮಾಹಿತಿ ನೀಡಬೇಕು. ಪ್ರಧಾನಿಯವರ ಜತೆ ಚರ್ಚಿಸಲು ಅಧಿಕಾರಿಗಳನ್ನಾದರೂ ಕಳಿಸಿ. ಕೇಂದ್ರ ಸರ್ಕಾರ ಶೀಘ್ರವೇ ಪರಿಹಾರದ ಹಣ ಬಿಡುಗಡೆ ಮಾಡಲಿದೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಳ ಆಕಾಂಕ್ಷಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ. ಸಿದ್ದರಾಮಯ್ಯ ತಾವೇ 5 ವರ್ಷ ಮುಖ್ಯಮಂತ್ರಿ ಎನ್ನುತ್ತಿದ್ದಾರೆ. ಆದರೆ, ಇನ್ನೂ 8ರಿಂದ 10 ಮಂದಿ ಮುಖ್ಯಮಂತ್ರಿ ಆಗಲು ಸರದಿಯಲ್ಲಿ ನಿಂತಿದ್ದಾರೆ. ಡಿಸಿಎಂ ಆಗಲು 15ರಿಂದ 20 ಶಾಸಕರು ಕಾದು ಕುಳಿತ್ತಿದ್ದಾರೆ. ಈ ಪರಿಸ್ಥಿತಿ ದೇಶದ ಯಾವುದೇ ರಾಜ್ಯದಲ್ಲೂ ನೋಡಲು ಸಿಗುವುದಿಲ್ಲ ಎಂದು ಅವರು ಹೇಳಿದರು. ಜಾತಿ ಗಣತಿ ವಿಚಾರದಲ್ಲಿ ಮುಖ್ಯಮಂತ್ರಿಯವರು ಎಲ್ಲ ವರ್ಗಗಳ ಹಿತದೃಷ್ಟಿಯಿಂದ ಚಿಂತಿಸಬೇಕು. ಜಾತಿಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡಿದರೆ ಜನತೆ ಕ್ಷಮಿಸುವುದಿಲ್ಲ ಎಂದು ವಿಜಯೇಂದ್ರ ತಿಳಿಸಿದರು.

ವಿಜಯೇಂದ್ರ ಅವರ ಜನ್ಮದಿನದ ಕಾರಣ ನೂರಾರು ಅಭಿಮಾನಿಗಳು ಅವರ ಮನೆ ಮುಂದೆ ಸೇರಿ ಬಿಜೆಪಿಯ ಮುಂದಿನ ಅಧ್ಯಕ್ಷರಿಗೆ ಜಯವಾಗಲಿ ಎಂದು ಘೋಷಣೆ ಕೂಗಿದರು.

ಗಣೇಶ ಪೂಜೆಗೆ ವಿರೋಧ ಸರಿಯಲ್ಲ: ಮುತಾಲಿಕ್

ಪ್ರಜಾವಾಣಿ ವಾರ್ತೆ



ಪ್ರಮೋದ್ ಮುತಾಲಿಕ್

ಚಿಕ್ಕಮಗಳೂರು: ‘ಗಣಪತಿ ಪೂಜೆ, ಪ್ರಾರ್ಥನೆ ಮೌಢ್ಯದ ಆಚರಣೆ ಎಂಬ ಹೇಳಿಕೆ, ಸಾಣೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಶೋಭೆ ತರುವುದಿಲ್ಲ’ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿದರು.

‘ಪಂಡಿತಾರಾಧ್ಯರ ಬಗ್ಗೆ ಅಪಾರ ಗೌರವವಿದೆ. ನಾಟಕ, ಉತ್ಸವದ ಮೂಲಕ ಸಾಮಾಜಿಕವಾಗಿ ದೊಡ್ಡ ಕ್ರಾಂತಿ ಮಾಡಿದ ಮಠ ಅದು. ಅವರು ಈ ರೀತಿಯ ಸಣ್ಣ ಹೇಳಿಕೆ ನೀಡಿರುವುದು ಸರಿಯಲ್ಲ’ ಎಂದು ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಶುಭ ಕಾರ್ಯಗಳಲ್ಲಿ ಮೊದಲಿಗೆ ಗಣೇಶನ ಪೂಜೆ ಮಾಡಿದರೆ ಒಳ್ಳೆಯದು ಎಂದು ಜನ ನಂಬಿದ್ದಾರೆ. ಗಣೇಶನ ತಂದೆ ಶಿವನ ಪೂಜೆ ಮಾಡುತ್ತೀರಾ. ಗಣೇಶ ಏಕೆ ಬೇಡ, ನಿಮ್ಮ ತರ್ಕ ಏನು’ ಎಂದು ಪ್ರಶ್ನಿಸಿದರು.

‘ವಚನಗಳನ್ನು ಹೇಳಬೇಕು, ಉಳಿಸಬೇಕು ಎಂಬುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಗಣೇಶನ ಪೂಜೆ ವಿರೋಧಿಸುವುದು ಸಂವಿಧಾನ ವಿರೋಧಿಯಾಗುತ್ತದೆ. ಈ ಹೇಳಿಕೆಯನ್ನು ಶ್ರೀಗಳು ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

‘ರಾಜ್ಯದಲ್ಲಿರುವುದು ಹಿಂದೂಗಳನ್ನು ದ್ವೇಷಿಸುವ ಸರ್ಕಾರ. ಹುಲಿ ಉಗುರು ವಿಚಾರದಲ್ಲಿ ನೋಟಿಸ್ ನೀಡದೆ ಅರ್ಚಕರನ್ನು ಬಂಧಿಸಲಾಗಿದೆ. ಬಾಬಾಬುಡನಗಿರಿ ಸ್ವಾಮಿ ದರ್ಗಾದ ಶಾ ಖಾದ್ರಿ ಮನೆಯಲ್ಲಿ ಚಿರತೆ ಚರ್ಮ ಸಿಕ್ಕಿದ್ದರೂ ಬಂಧನ ಆಗಿಲ್ಲ. ಈ ರೀತಿಯ ನಾಟಕ ಸಹಿಸುವಂಥದ್ದಲ್ಲ. ಇದು ಬಹಳ ದಿನ ನಡೆಯುವುದಿಲ್ಲ’ ಎಂದು ಎಚ್ಚರಿಸಿದರು.

‘ಬಸವಣ್ಣ ವೇದಗಳ ವಿರೋಧಿ ಆಗಿರಲಿಲ್ಲ’

ಸಿರಿಗೆರೆ: ‘ವಚನ ಸಾಹಿತ್ಯ ಓದಿಕೊಂಡವರೂ ಮೂಲಭೂತವಾದಿ ಆಗುತ್ತಿರುವುದು ವಿಷಾದನೀಯ. ಲಿಂಗಾಯತ ಧರ್ಮದಲ್ಲೂ ಕೆಲವರು ಇಂತಹ ಗೊಂದಲ ಹಬ್ಬಿಸುತ್ತಿದ್ದಾರೆ’ ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ತರಳಬಾಳು ಮಠ ಏರ್ಪಡಿಸಿದ್ದ ‘ವಚನ ಸಾಹಿತ್ಯದ ಪ್ರಸ್ತುತತೆ’ ವಿಷಯ ಕುರಿತ ಗೋಷ್ಠಿಯಲ್ಲಿ ಅವರು ಭಾನುವಾರ ಆಶೀರ್ವಚನ ನೀಡಿದರು.

‘ಬಸವಣ್ಣನವರು ವೇದ, ಉಪನಿಷತ್ತುಗಳ ವಿರೋಧಿಯಾಗಿದ್ದರು’ ಎಂಬ ತಪ್ಪು ಪ್ರಜ್ಞೆ ಈಗ ಮೂಡುತ್ತಿದೆ. ಬಸವಣ್ಣನವರು ವೇದಗಳ ವಿರೋಧಿ ಆಗಿರಲಿಲ್ಲ. ಜೀವವಿರೋಧಿ ನಿಲುವು ತಾಳುವ ಪ್ರಾಣಿಬಲಿ ಮತ್ತು ಯಜ್ಞದ ವಿಚಾರಗಳಿಗೆ ಬಸವಣ್ಣನವರು ಪ್ರತಿರೋಧ ವ್ಯಕ್ತಪಡಿಸಿದ್ದರೇ ವಿನಾ, ವೇದ ಮತ್ತು ಉಪನಿಷತ್ತುಗಳನ್ನು ಸಾರಾಸಗಟಾಗಿ ತಿರಸ್ಕರಿಸಿಲ್ಲ’ ಎಂದರು

ಬೆರಳು ಚೀಪುತ್ತಾ ಇದ್ದೀರಾ: ಪ್ರಿಯಾಂಕ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆ ಚುನಾವಣೆಯ ಬಳಿಕ ಬಿಜೆಪಿ- ಜೆಡಿಎಸ್‌ನಲ್ಲಿ ಯಾರೂ ಉಳಿಯುವುದಿಲ್ಲ. ಇನ್ನೂ ಐದು ತಿಂಗಳು ಸಮಯ ಕೊಡುತ್ತೇನೆ. ಕಾಂಗ್ರೆಸ್ಸಿನ 50 ಜನ ಶಾಸಕರನ್ನು ಕರೆದುಕೊಂಡು ಹೋಗಲಿ ನೋಡೋಣ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿ ನಾಯಕರಿಗೆ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಮಾತೆತ್ತಿದರೆ ವರಿಷ್ಠರು, ವರಿಷ್ಠರು ಎಂದು ಬಿಜೆಪಿಯವರು ಹೇಳುತ್ತಾರೆ. ಹಾಗಿದ್ದರೆ ರಾಜ್ಯ ನಾಯಕರಿಗೆ ಬೆಲೆ ಇಲ್ಲವೇ? ಎಲ್ಲವನ್ನೂ ವರಿಷ್ಠರೇ ಮಾಡುತ್ತಾ ಇದ್ದರೆ ನೀವೇನು ಮಾಡುತ್ತಾ ಇದೀರಿ? ಬೆರಳು ಚೀಪುತ್ತಾ ಇದ್ದೀರಾ’ ಎಂದು ವ್ಯಂಗ್ಯವಾಡಿದರು.

‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದಾದರೆ ಜೆಡಿಎಸ್‌ನ 19 ಶಾಸಕರು ಬೆಂಬಲ ಕೊಡುತ್ತೇವೆ’ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ಕುಮಾರಸ್ವಾಮಿಯವರ ಬೆಂಬಲ ಕೇಳಿದವರ್‍ಯಾರು? ಈಗ ನಮಗೆ ಅವರ ಅವಶ್ಯಕತೆ ಏನಿದೆ? ಯಾರು ಮುಖ್ಯಮಂತ್ರಿ ಆಗುತ್ತಾರೆ, ಯಾರು ಕೆಪಿಸಿಸಿ ಅಧ್ಯಕ್ಷರಾಗುತ್ತಾರೆ ಎನ್ನುವುದು ಅವರಿಗೆ ಏಕೆ ಬೇಕು’ ಎಂದು ಹೇಳಿದರು.

‘ಬಿಜೆಪಿ ಜತೆ ಜೆಡಿಎಸ್ ಬಹುತೇಕ ವಿಲೀನ ಆಗಿದೆ. ಜೆಡಿಎಸ್ ಪೀಪಲ್ ಲೆಸ್ ಪಾರ್ಟಿ. ಬಿಜೆಪಿ ಲೀಡರ್‌ಲೆಸ್ ಪಾರ್ಟಿ. ನಮಗೆ ಜೆಡಿಎಸ್‌ನವರ ಅವಶ್ಯಕತೆ ಇಲ್ಲ. ಅವರ ಅಸ್ತಿತ್ವಕ್ಕೆ ಏನು ಬೇಕಾದರೂ ಹೇಳಿಕೊಳ್ಳಲಿ. ಜೆಡಿಎಸ್ ಬಳಿ ಯಾವುದೇ ವಿಷಯ ಇಲ್ಲ. ಅವರು ಮೊದಲು ಭ್ರಷ್ಟಾಚಾರ ವಿಚಾರ ಮಾತನಾಡಿದರು. ಅವರ ಪೆನ್ ಡ್ರೈವ್ ಅವರ ಜೇಬಿನಲ್ಲೇ ಉಳಿಯಿತು’ ಎಂದು ತಿರುಗೇಟು ನೀಡಿದರು.

‘ವಿಪಕ್ಷ ನಾಯಕನಾಗಲು ಬಿಜೆಪಿಯಲ್ಲಿ ಸಮರ್ಥರಿಲ್ಲವೇ?’

ಬೆಂಗಳೂರು: ‘ವಿರೋಧ ಪಕ್ಷದ ನಾಯಕರಾಗಲು ಬಿಜೆಪಿಯಲ್ಲಿ ಸಮರ್ಥರು ಯಾರೂ ಇಲ್ಲವೇ? ಬಸವರಾಜ ಬೊಮ್ಮಾಯಿ, ಆರ್. ಅಶೋಕ, ಅಶ್ವತ್‌ನಾರಾಯಣ, ಸುನಿಲ್ ಕುಮಾರ್, ಯತ್ನಾಳ ಅವರೆಲ್ಲ ಅಸಮರ್ಥರೇ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಕುಮಾರಸ್ವಾಮಿ ವಿರೋಧ ಪಕ್ಷದ ನಾಯಕ ಎನ್ನುತ್ತಿದ್ದಾರೆ. ಬಿಜೆಪಿಯವರಿಗೆ ಬರಗಾಲ ಬಂದಿದೆ’ ಎಂದು ವ್ಯಂಗ್ಯವಾಡಿದರು.

‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದಾದರೆ ಜೆಡಿಎಸ್‌ನ 19 ಶಾಸಕರು ಬೆಂಬಲ ಕೊಡುತ್ತೇವೆ’ ಎಂಬ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಅವರು ಬಿಜೆಪಿ ಸೇರಿಕೊಂಡಿದ್ದಾರೆ. ಅಲ್ಲಿಂದ ಬೆಂಬಲ ಕೊಡುತ್ತಾರೆಂದರೆ ಒಳ್ಳೆಯದೇ’ ಎಂದರು.

ತಿದ್ದುಪಡಿ

ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಸದ್ಯಕ್ಕಿಲ್ಲ ನೌಕರರ ವೇತನ ಪರಿಷ್ಕರಣೆ’ ಸುದ್ದಿಯಲ್ಲಿ, ‘2022ರ ನ. 19ರಂದು ರಚನೆಯಾಗಿದ್ದ ವೇತನ ಆಯೋಗಕ್ಕೆ ವರದಿ ಸಲ್ಲಿಸಲು 6 ತಿಂಗಳ ಗಡುವು ನೀಡಲಾಗಿತ್ತು. ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಿತ್ತು’ ಎಂದಿದೆ. ಆಯೋಗದ ಅವಧಿ ಇದೇ ಮೇ 15ರಂದು ವಿಸ್ತರಣೆಯಾಗಿದ್ದು, ಕಾಂಗ್ರೆಸ್ ಸರ್ಕಾರ ಮೇ 20ರಂದು ಅಧಿಕಾರಕ್ಕೆ ಬಂದಿತು.

ಶಿವಮೊಗ್ಗ ರೈಲು ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಪತ್ತೆ

ವಾರಸುದಾರರಿಲ್ಲದ ಬಾಕ್ಸ್: ಆತಂಕ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ರೈಲು ನಿಲ್ದಾಣದ ವಾಹನಗಳ ನಿಲುಗಡೆ ಸ್ಥಳದಲ್ಲಿ ಭಾನುವಾರ ವಾರಸುದಾರರಿಲ್ಲದ 2 ಕಬ್ಬಿಣದ ಪೆಟ್ಟಿಗೆಗಳು ಪತ್ತೆಯಾಗಿವೆ. ಇದು ಅನುಮಾನಕ್ಕೆ ಕಾರಣವಾಗಿದ್ದು, ಸ್ಥಳದಲ್ಲಿ ಆತಂಕ ಸೃಷ್ಟಿಸಿತ್ತು.

ಬಾಕ್ಸ್‌ಗಳನ್ನು ಗೋಣಿ ಚೀಲದಲ್ಲಿ ಸುತ್ತಲಾಗಿದ್ದು, ಚೀಲದ ಮೇಲೆ ‘ಬಾಂಗ್ಲಾದೇಶ’ ಎಂದು ಬರೆಯಲಾಗಿದೆ. ಬಾಂಬ್ ಪತ್ತೆ ದಳ ಮತ್ತು ಶ್ವಾನದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಮೊದಲು ಬಾಕ್ಸ್‌ಗಳನ್ನು ಗಮನಿಸಿದ ಆಟೊ ಚಾಲಕರು ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಇನ್‌ಸ್ಪೆಕ್ಟರ್ ಬಿ.ಎನ್. ಕುಬೇರಪ್ಪ ಅವರ ಗಮನಕ್ಕೆ ತಂದಿದ್ದಾರೆ. ಸ್ಥಳ ಪರಿಶೀಲಿಸಿದ ಆರ್‌ಪಿಎಫ್ ಸಿಬ್ಬಂದಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಾಕ್ಸ್‌ಗಳಿಗೆ ಬೀಗ ಹಾಕಿದ್ದು, ಒಳಗೆ ಏನಿದೆ ಎಂದು ತಿಳಿದುಬಂದಿಲ್ಲ. ಬೆಂಗಳೂರಿನಿಂದ ಬಾಂಬ್ ನಿಷ್ಕ್ರಿಯ ತಂಡದ ಸಿಬ್ಬಂದಿ ಬರಬೇಕಿದೆ. ರಾತ್ರಿ ವೇಳೆಗೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಸ್ಥಳದಲ್ಲಿ ಬ್ಯಾರಿಕೇಡ್ ಹಾಕಿ ಸಾರ್ವಜನಿಕರನ್ನು ನಿಯಂತ್ರಿಸಲಾಗಿದೆ. ಬಂದೋಬಸ್ತ್‌ಗೆ ಪೊಲೀಸರನ್ನು ನಿಯೋಜಿಸಲಾಗಿದೆ.

ಶಿವಮೊಗ್ಗದಲ್ಲಿ ಕಂಡುಬಂದ ಬಾಕ್ಸ್‌ಗಳನ್ನು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಭೂಮರಡ್ಡಿ ಭಾನುವಾರ ಪರಿಶೀಲಿಸಿದರು

ತಿಪಟೂರಿನಲ್ಲಿ ಇಬ್ಬರು ವಶಕ್ಕೆ

ತುಮಕೂರು: ಶಿವಮೊಗ್ಗ ರೈಲು ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಪತ್ತೆಯಾಗಿದ್ದ ಎರಡು ಬಾಕ್ಸ್‌ಗಳ ಪ್ರಕರಣಕ್ಕೆ ಸಂಬಂಧಿಸಿ ತಿಪಟೂರಿನ ಇಬ್ಬರನ್ನು ಶಿವಮೊಗ್ಗ ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ.

ತಿಪಟೂರಿನ ಗಾಂಧಿನಗರದ ನಿವಾಸಿ ನಸರುಲ್ಲಾ, ಭೋವಿ ಕಾಲೊನಿಯ ನಿವಾಸಿ ಜಬಿವುಲ್ಲಾ ಅವರನ್ನು ವಶಕ್ಕೆ ಪಡೆಯಲಾಗಿದೆ. ಇಬ್ಬರೂ ಬಾಕ್ಸ್ ಇಡಲು ಬಳಸಿದ್ದ ಕಾರಿನ ಚಾಲಕರು ಎಂದು ತಿಳಿದು ಬಂದಿದೆ.

ಶಿವಮೊಗ್ಗ ರೈಲು ನಿಲ್ದಾಣದಿಂದ ಕಾರು ತಿಪಟೂರಿಗೆ ಬಂದಿರುವ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿದರು.

‘ಶಿವಮೊಗ್ಗ ಜಿಲ್ಲಾ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದರು.

ಕುಪ್ಪಳಿ: 3 ದಿನಗಳ ವಿಚಾರ ಕಮ್ಮಟ ಡಿ.9ರಿಂದ

ಶಿವಮೊಗ್ಗ: ಕತೆಗಾರ ಡಾ.ಬೆಸಗರಹಳ್ಳಿ ರಾಮಣ್ಣ ಸ್ಮರಣಾರ್ಥ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಡಿ. 8ರಿಂದ ಮೂರು ದಿನ ‘ವಿಚಾರ ಕಮ್ಮಟ’ ನಡೆಯಲಿದೆ.

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಬೆಂಗಳೂರಿನ ಡಾ.ಬೆಸಗರಹಳ್ಳಿ ರಾಮಣ್ಣ ಟ್ರಸ್ಟ್ ಈ ಕಮ್ಮಟ ಆಯೋಜಿಸಿದ್ದು, ಭಾಷಾತಜ್ಞ ಡಾ.ಕೆ.ವಿ.ನಾರಾಯಣ ನೇತೃತ್ವ ವಹಿಸಲಿದ್ದಾರೆ. ಆಸಕ್ತಿ ಇರುವ 25 ರಿಂದ 50 ವರ್ಷದೊಳಗಿನವರು ಭಾಗವಹಿಸಬಹುದು. ಯಾವುದೇ ಶುಲ್ಕವಿಲ್ಲ. ಊಟ, ವಸತಿಯ ಉಚಿತ ವ್ಯವಸ್ಥೆ ಇರುತ್ತದೆ.

ಆಸಕ್ತರು ಅಧ್ಯಕ್ಷರು, ಡಾ. ಬೆಸಗರಹಳ್ಳಿ ರಾಮಣ್ಣ ಟ್ರಸ್ಟ್, #15, 2ನೇ ಅಡ್ಡರಸ್ತೆ, ನಿಸರ್ಗ ಬಡಾವಣೆ, ಉಲ್ಲಾಳ ಆರ್‌ಟಿಒ ಕಚೇರಿ ಹತ್ತಿರ, ಬೆಂಗಳೂರು- 560091 ಈ ವಿಳಾಸಕ್ಕೆ ಅಥವಾ ಇ-ಮೇಲ್ drbrtrust@gmail. com ಗೆ ನ. 15ರೊಳಗೆ ವಿವರಗಳನ್ನು ಕಳುಹಿಸಲು ಕೋರಲಾಗಿದೆ. ಮಾಹಿತಿಗೆ ಮೊಬೈಲ್ ಸಂಖ್ಯೆ 99803-05837 ಸಂಪರ್ಕಿಸಬಹುದು.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

1ನೇ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ : DPI-CPIOSATS(OTH-)/11/2023-SATS ದಿನಾಂಕ : 04–11–2023

ಟೆಂಡರ್ ಪ್ರಕಟಣೆ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು, ಬೆಂಗಳೂರು ರವರು **"Hiring of Service Provider for System study and preparation of Functional Requirements Specification (FRS), Effort and Timeline Estimation, for Design, development and implementation of Student Achievement Tracking System (SATS) 2.0 for Department of School Education"**, ಅಲ್ಪಾವಧಿಯ ಇ–ಟೆಂಡರ್ ಅನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು

DIPR/CP/1979/YC/2023-24

ಸಕಾಲ ಮಿಷನ್

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ)

1ನೇ ಗೇಟ್, 6ನೇ ಮಹಡಿ, ಕೊಠಡಿ ಸಂಖ್ಯೆ: 607, ಬಹುಮಹಡಿ ಕಟ್ಟಡ, ಬೆಂಗಳೂರು–560001 ದೂರವಾಣಿ: 080–2203 2857; 080–2203 2899

Email:aosakala@karnataka.gov.in, Website:www.sakala.kar.nic.in

Tender No: DPAR 5 SPM 2023 ದಿನಾಂಕ:06.11.2023

ಅಲ್ಪಾವಧಿ ಟೆಂಡರ್ ಅಧಿಸೂಚನೆ

“ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014” ಅನ್ನು ಅನುಷ್ಠಾನಗೊಳಿಸಲು ಸಕಾಲ ಮಿಷನ್‌ಗೆ ಮಾನವ ಸಂಪನ್ಮೂಲಗಳನ್ನು (05 ದತ್ತಾಂಶ ನಮೂದಕರು, 02 ವಾಹನ ಚಾಲಕರು ಹಾಗೂ 03 ಗ್ರೂಪ್ ಡಿ) ಒಂದು ವರ್ಷದ ಅವಧಿಗೆ ನೀಡಲು ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಇ–ಆಡಳಿತ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ಮುಖಾಂತರ ಅರ್ಹ ಟೆಂಡರ್‌ದಾರರಿಂದ (1)ತಾಂತ್ರಿಕ ಬಿಡ್ (2)ಆರ್ಥಿಕ ಬಿಡ್ ಎಂದು 2 ಭಾಗಗಳಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಕೆಳಕಂಡಂತೆ ನಿಗದಿಪಡಿಸಲಾಗಿದೆ:

- ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **06.11.2023 13:00 ಗಂಟೆಗೆ**
- ಪೂರ್ವ ಬಿಡ್ ಸಭೆ ದಿನಾಂಕ: **08.11.2023, 15:00 ಗಂಟೆಗೆ**
- ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ವೇಳೆ: **16.11.2023, 17:30 ಗಂಟೆಯವರೆಗೆ**
- ತಾಂತ್ರಿಕ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **17.11.2023, 17:30 ಗಂಟೆಗೆ**
- ಹಣಕಾಸಿನ ಲಕೋಟೆ ತೆರೆಯಲು ದಿನಾಂಕ ಮತ್ತು ವೇಳೆ: **20.11.2023, 17:30 ಗಂಟೆಗೆ**

ಸಹಿ/– ಆಡಳಿತಾಧಿಕಾರಿ (ಪ್ರ)
ಸಕಾಲ ಮಿಷನ್, ಸಿಆಸು ಇಲಾಖೆ(ಇ–ಆಡಳಿತ)

ವಾಸಾಸಂಇ/ವಾಪ್ರ/ಜಿಎ/1977/2023–24

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18. ದೂರವಾಣಿ: 26709689/ 26706775, ಫ್ಯಾಕ್ಸ್: 26700801, Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023–24 ದಿನಾಂಕ: 02.11.2023.

–:ಪತ್ರಿಕಾ ಪ್ರಕಟಣೆ:–

2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಂಡ 30000 ಯಾತ್ರಾರ್ಥಿಗಳಿಗೆ ತಲಾ ರೂ.5000/–ಗಳಂತೆ ಸರ್ಕಾರದ ಸಹಾಯಧನವನ್ನು ವಿತರಿಸುವ ಕುರಿತು ಅರ್ಜಿಯನ್ನು ದಿನಾಂಕ: 06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಗಳು ಕರ್ನಾಟಕದ ಖಾಯಂ ನಿವಾಸಿಗಳಾಗಿರತಕ್ಕದ್ದು.
2. 18 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.
3. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 04:00 ಗಂಟೆಯೊಳಗೆ ಸಲ್ಲಿಸಬೇಕು.
4. ಯಾತ್ರಾರ್ಥಿಯು ಯಾತ್ರೆಗೆ ತೆರಳುವ ಮುನ್ನ ಆನ್‌ಲೈನ್ ಮೂಲಕವೇ ಅರ್ಜಿಯನ್ನು https://karnatakayatras.com/ ಪೋರ್ಟಲ್‌ನಲ್ಲಿ ಅಥವಾ ಮೊಬೈಲ್ ಆಫ್ (karnataka.yatras) ಮೂಲಕವೇ ಸಲ್ಲಿಸಿ ಉಳಿದ ಪ್ರಕ್ರಿಯೆಗಳನ್ನು ಯಾತ್ರೆಗೆ ತೆರಳಿದ ನಂತರ ಪೂರ್ಣಗೊಳಿಸಬೇಕು.
5. ಕಾಶಿಯಾತ್ರೆ ಕೈಗೊಂಡಿರುವುದನ್ನು ದೃಢೀಕರಿಸುವ ಸಲುವಾಗಿ ಕಾಶಿ ವಿಶ್ವನಾಥಸ್ವಾಮಿ ದೇವಾಲಯದ 5 ಕಿ.ಮೀ. ವ್ಯಾಸ (Radius) ದೊಳಗೆ ಯಾತ್ರಾರ್ಥಿಗಳ Geotagged Selfie Photo ಅನ್ನು ಮೊಬೈಲ್ ಆಪ್ (karnataka.yatras) / ವೆಬ್‌ಸೈಟ್ (www.karnatakayatras.com) ನಲ್ಲಿ ತೆಗೆದು ಅಪ್‌ಲೋಡ್ ಮಾಡಬೇಕು.

ಸೂಚನೆ: ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1980/ಆಕಾರ್/2023–24

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18. ದೂರವಾಣಿ: 26709689/ 26706775, ಫ್ಯಾಕ್ಸ್: 26700801, Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023–24 ದಿನಾಂಕ: 02.11.2023.

–:ಪತ್ರಿಕಾ ಪ್ರಕಟಣೆ:–

2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಚಾರ್‌ಧಾಮ್ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.20,000/–ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ಅರ್ಜಿಗಳನ್ನು ದಿನಾಂಕ: 06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
2. 45ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದು.
3. ಯಾತ್ರಾರ್ಥಿಯು ಕಡ್ಡಾಯವಾಗಿ, ಬದರೀನಾಥ್, ಕೇದಾರ್‌ನಾಥ್, ಯಮುನೋತ್ರಿ ಮತ್ತು ಗಂಗೋತ್ರಿ ಕ್ಷೇತ್ರಗಳಿಗೆ ಭೇಟಿ ನೀಡಿರಬೇಕು.
4. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 4:00 ಗಂಟೆಯೊಳಗೆ.
5. ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
6. ಯಾತ್ರಾರ್ಥಿಯು ಆನ್‌ಲೈನ್ ಮೂಲಕವೇ ಮೊಬೈಲ್ ಆಪ್ (karnataka.yatras) / ವೆಬ್‌ಸೈಟ್ (www.karnatakayatras.com) ಪೋರ್ಟ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

	ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಆಧಾರ್ ಗುರುತಿನ ಚೀಟಿ
3.	ಚುನಾವಣಾ ಗುರುತಿನ ಚೀಟಿ
4.	ರೂ. 20/–ಗಳ ಛಾಪಾ ಕಾಗದದಲ್ಲಿ ಸ್ವ–ದೃಢೀಕರಣ
5.	ಯಾತ್ರೆ ಕೈಗೊಳ್ಳುವ ಮುನ್ನ ಯಾತ್ರೆಗೆ ನೊಂದಾಯಿಸಿಕೊಂಡ ಪ್ರತಿ
6.	ಯಾತ್ರೆ ಮುಗಿದ ನಂತರ ಉತ್ತರಖಾಂಡ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೀಡಲಾದ ಪ್ರಮಾಣ ಪತ್ರ (ಕಡ್ಡಾಯವಾಗಿ 4 ಧಾಮಗಳು ನಮೂದಾಗಿರತಕ್ಕದ್ದು).
7.	ಯಾತ್ರಾರ್ಥಿಯ ಆಧಾರ್ ಸಂಖ್ಯೆಯು ಕಡ್ಡಾಯವಾಗಿ ಬ್ಯಾಂಕ್‌ಗೆ ಸೀಡ್ ಆಗಿರತಕ್ಕದ್ದು.

ಸೂಚನೆ: ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1999/ಆಕಾರ್/2023–24

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18. ದೂರವಾಣಿ: 26709689/ 26706775, ಫ್ಯಾಕ್ಸ್: 26700801, Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023–24 ದಿನಾಂಕ: 02.11.2023.

–:ಪತ್ರಿಕಾ ಪ್ರಕಟಣೆ:–

2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.30,000/–ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ಅರ್ಜಿಗಳನ್ನು ದಿನಾಂಕ: 06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 4:00 ಗಂಟೆಯೊಳಗೆ.
3. ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
4. ಯಾತ್ರಾರ್ಥಿಯು ಆನ್‌ಲೈನ್ ಮೂಲಕವೇ ಮೊಬೈಲ್ ಆಪ್ (karnataka.yatras) / ವೆಬ್‌ಸೈಟ್ (www.karnatakayatras.com) ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

	ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಆಧಾರ್ ಗುರುತಿನ ಚೀಟಿ
3.	ಚುನಾವಣಾ ಗುರುತಿನ ಚೀಟಿ
4.	ರೂ. 20/–ಗಳ ಛಾಪಾ ಕಾಗದದಲ್ಲಿ ಸ್ವ–ದೃಢೀಕರಣ
5.	ಸದರಿ ಯಾತ್ರೆಯನ್ನು ಕೇಂದ್ರ ಸರ್ಕಾರದ ಮಾರ್ಗವಾಗಿ ತೆರಳಿದಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುವ ದೃಢೀಕರಣವನ್ನು ನೀಡತಕ್ಕದ್ದು
6.	ಯಾತ್ರೆಯನ್ನು ನೇಪಾಳ / ಟಿಬೆಟ್ ಮಾರ್ಗವಾಗಿ ತೆರಳಿದ್ದಲ್ಲಿ ಲಾಹ್ಸ, ಚೈನಾ ಸರ್ಕಾರದ ವತಿಯಿಂದ ನೀಡಲಾದ (C.I.P.S.C) ಪ್ರತಿಯನ್ನು ಒದಗಿಸತಕ್ಕದ್ದು
7.	ಗ್ರೂಪ್ ವೀಸಾ (Group Visa)
8.	ಪಾಸ್‌ಪೋರ್ಟ್‌ನ ಮೊದಲ ಹಾಗೂ ಕೊನೆಯ ಪ್ರತಿ, ಮತ್ತು ಸೀಲ್ ಇರುವಂತಹ ಪ್ರತಿಯ ಕಲರ್ ಜೆರಾಕ್ಸ್.
9.	ಯಾತ್ರಾರ್ಥಿಯ ಆಧಾರ್ ಸಂಖ್ಯೆಯು ಕಡ್ಡಾಯವಾಗಿ ಬ್ಯಾಂಕ್‌ಗೆ ಸೀಡ್ ಆಗಿರತಕ್ಕದ್ದು.

ಸೂಚನೆ: ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2000/ಆಕಾರ್/2023–24

ಶಾಸಕ ಸೇರಿ ನಾಲ್ವರ ಮೇಲೆ ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣ • ಪರಿಶೀಲನೆ ನಡೆಸಿದ್ದ ಭೂ ವಿಜ್ಞಾನಿ

₹25 ಲಕ್ಷ ನಷ್ಟದ ವರದಿ ನೀಡಿದ್ದ ಪ್ರತಿಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಣಸಮಾರನಹಳ್ಳಿ ಹಾಗೂ ಸೊಣ್ಣಪ್ಪನಹಳ್ಳಿ ಗ್ರಾಮದ 4 ಎಕರೆ 5 ಗುಂಟೆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆದ ಬಗ್ಗೆ ವರದಿ ಸಿದ್ಧಪಡಿಸಿದ್ದ ಹಿರಿಯ ಭೂ ವಿಜ್ಞಾನಿ ಪ್ರತಿಮಾ, ₹25.35 ಲಕ್ಷ ನಷ್ಟ ಆಗಿರುವುದಾಗಿ ಉಲ್ಲೇಖಿಸಿದ್ದರು ಎಂಬುದು ಗೊತ್ತಾಗಿದೆ.

ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 177/3, 178/1-2-3, 179 ಮತ್ತು ಸೊಣ್ಣಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 34/1-2-3 ಹಾಗೂ ಸರ್ವೆ ನಂಬರ್ 17/7-8-9 ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ್ದ ಆರೋಪದಡಿ ಶಾಸಕರೊಬ್ಬರು ಸೇರಿ ನಾಲ್ವರ ವಿರುದ್ಧ ಚಿಕ್ಕಜಾಲ ಠಾಣೆಯಲ್ಲಿ ಜುಲೈನಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದರ ತನಿಖೆ ಪ್ರಗತಿಯಲ್ಲಿದೆ.

ಅಕ್ರಮ ಗಣಿಗಾರಿಕೆ ನಡೆದಿದೆ ಎನ್ನಲಾದ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು, ವರದಿ ಸಿದ್ಧಪಡಿಸಿದ್ದರು. ಜೊತೆಗೆ, ಅಕ್ರಮ ಗಣಿಗಾರಿಕೆ ನಡೆಸಿದ್ದ ಆರೋಪದಡಿ ಶಾಸಕ ಸೇರಿ ಇಬ್ಬರ ವಿರುದ್ಧ ದೇವನಹಳ್ಳಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಸಹ ದಾಖಲಿಸಿದ್ದರು.

ಇದೇ ಪ್ರಕರಣದಲ್ಲಿ ಪ್ರತಿಮಾ ಅವರು ನೀಡಿದ್ದ ಸ್ಥಳ ಪರಿಶೀಲನೆ ವರದಿಯ ಪ್ರತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಜೊತೆಗೆ, ಪ್ರತಿಮಾ ಅವರ ವರದಿಯನ್ನು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಪಡೆದಿದ್ದ ವ್ಯಕ್ತಿಯೊಬ್ಬರು ಅದನ್ನು ಈಗ ಹಂಚಿಕೊಂಡಿದ್ದಾರೆ

‘4 ಎಕರೆ 5 ಗುಂಟೆ ಜಮೀನಿನಲ್ಲಿ ಅನುಮತಿ ಇಲ್ಲದೇ ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗಿದೆ. 4 ಪ್ರದೇಶಗಳಲ್ಲಿ 51,460 ಟನ್ ಪ್ರಮಾಣದ ಭೂ ಅಗೆತ ಮಾಡಲಾಗಿದೆ. ಸ್ಥಳದಲ್ಲಿ 5,000 ಟನ್ ಕಟ್ಟಡ ಕಲ್ಲಿನ ದಾಸ್ತಾನು ಇದೆ. 25,876 ಟನ್ ಕಟ್ಟಡ ಕಲ್ಲು ಬೇರೆಡೆ ಸಾಗಿಸಲಾಗಿದೆ. ಇದರಿಂದಾಗಿ ಸರ್ಕಾರಕ್ಕೆ ₹25.35 ಲಕ್ಷ ನಷ್ಟವಾಗಿದೆ’ ಎಂದು ಪ್ರತಿಮಾ ಅವರು ವರದಿಯಲ್ಲಿ ಉಲ್ಲೇಖಿಸಿದ್ದರು.

‘ಪರವಾನಗಿ ವಿಚಾರದಲ್ಲಿ ವೈಮನಸ್ಸು’: ‘ಕ್ರಷರ್ ಹಾಗೂ ಮರಳು ಗಣಿಗಾರಿಕೆ ಪರವಾನಗಿ ನೀಡುವ ವಿಚಾರದಲ್ಲಿ ಪ್ರತಿಮಾ ಅವರು ದಿಟ್ಟ ಕ್ರಮ ಕೈಗೊಂಡಿದ್ದರು. ಹಲವು ಪರವಾನಗಿಗಳನ್ನು ನವೀಕರಣ ಮಾಡಿರಲಿಲ್ಲ. ಜೊತೆಗೆ, ಕೆಲ ಪರವಾನಗಿಗಳನ್ನು ರದ್ದುಪಡಿಸಿದ್ದರು. ಇದೇ ಕಾರಣಕ್ಕೆ ಪ್ರತಿಮಾ ಹಾಗೂ ಕೆಲವರ ನಡುವೆ ವೈಮನಸ್ಸು ಉಂಟಾಗಿತ್ತು ಎಂಬ ಮಾಹಿತಿಯೂ ಇದೆ’ ಎಂದು ಪೊಲೀಸರು ಹೇಳಿದರು.

‘ಪ್ರತಿಮಾ ಅವರ ಮನೆಯಲ್ಲಿ

ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ ಅವರು ವಾಸವಿದ್ದ ದೊಡ್ಡಕಲ್ಲಸಂದ್ರ ಕುವೆಂಪುನಗರದಲ್ಲಿರುವ ಮನೆ – ಪ್ರಜಾವಾಣಿ ಚಿತ್ರ

‘ತಮಿಳುನಾಡಿನಿಂದ ಬರುವ ವಾಹನ ಪರಿಶೀಲಿಸಲು ಹೇಳಿದ್ದೆ’

‘ಅಕ್ರಮವಾಗಿ ಜಲ್ಲಿಕಲ್ಲು ಹಾಗೂ ಕಲ್ಲು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ದೂರುಗಳಿದ್ದವು. ಈ ಬಗ್ಗೆ ಚರ್ಚಿಸಲು ತಿಂಗಳ ಹಿಂದೆಯಷ್ಟೇ ಸಭೆ ನಡೆಸಿದ್ದೆ. ಈ ಸಭೆಯಲ್ಲಿ ಪ್ರತಿಮಾ ಅವರೂ ಹಾಜರಾಗಿದ್ದರು. ತಮಿಳುನಾಡಿನಿಂದ ಬರುವ ವಾಹನಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೆ. ಅಕ್ರಮ ಗಣಿಗಾರಿಕೆ ತಡೆಯಲು ಕಾರ್ಯಾಚರಣೆ ನಡೆಸುವಂತೆಯೂ ಹೇಳಿದ್ದೆ’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಹೇಳಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರತಿಮಾ, ಉತ್ತಮ ಅಧಿಕಾರಿ. ಕೆಲಸದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ಜೊತೆಗೆ, ಯಾವುದೇ ದೂರು ಬಂದಿರಲಿಲ್ಲ. ಯಾವ ಕಾರಣಕ್ಕೆ ಕೊಲೆ ನಡೆದಿದೆ ಎಂಬುದು ಪೊಲೀಸರ ತನಿಖೆಯಿಂದ ತಿಳಿಯಬೇಕಿದೆ’ ಎಂದರು.

‘ಇಬ್ಬರು ದುಷ್ಕರ್ಮಿಗಳಿಂದ ಕೃತ್ಯ, ಸುಪಾರಿ ಶಂಕೆ’

‘ಮನೆಯ ಹೊರಭಾಗದಲ್ಲಿದ್ದ ಕಬ್ಬಿಣದ ಗೇಟ್ ತೆರೆದಿದ್ದ ಪ್ರತಿಮಾ, ನಂತರ ಮನೆಯ ಮುಖ್ಯ ಬಾಗಿಲು ತೆರೆದು ಒಳಗೆ ಕಾಲಿಟ್ಟಿದ್ದರು. ಇದೇ ಸಂದರ್ಭದಲ್ಲಿ ಹಿಂದಿನಿಂದ ಬಂದಿದ್ದ ಇಬ್ಬರು ದುಷ್ಕರ್ಮಿಗಳು, ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮನೆಯ ಮುಖ್ಯ ಬಾಗಿಲು ಬಳಿ ಊಟದ ಬ್ಯಾಗ್ ಹಾಗೂ ಕನ್ನಡಕ ಬಿದ್ದಿತ್ತು. ಅದೇ ಬಾಗಿಲು ಬಳಿ ದುಷ್ಕರ್ಮಿಗಳು, ಪ್ರತಿಮಾ ಅವರನ್ನು ಹಿಂದಿನಿಂದ ಹಿಡಿದುಕೊಂಡು ಉಸಿರುಗಟ್ಟಿಸಿ ಚಾಕುವಿನಿಂದ ಕತ್ತು ಕೊಯ್ದಿರುವ ಶಂಕೆ ಇದೆ. ನಂತರ, ಬೆಡ್ ಮೇಲೆ ಮೃತದೇಹ ಇರಿಸಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.’

‘ಸ್ಥಳ ಪರಿಶೀಲನೆ ನಡೆಸಿದಾಗ, ಈಗಾಗಲೇ ಕೊಲೆ ಎಸಗಿರುವ ಆರೋಪಿಗಳೇ ಈ ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದೆ. ಜೊತೆಗೆ, ಸುಪಾರಿ ನೀಡಿ ಕೊಲೆ ಮಾಡಿಸಿರುವ ಶಂಕೆಯೂ ಇದೆ’ ಎಂದು ತಿಳಿಸಿವೆ.

‘ಚಾಲಕ ಪರಾರಿ: ಮೊಬೈಲ್ ಸ್ವಿಚ್ಡ್ ಆಫ್’

‘ಈ ಮೊದಲು ಪ್ರತಿಮಾ ಅವರ ಕಾರಿಗೆ ಕಿರಣ್ ಎಂಬಾತ ಚಾಲಕನಾಗಿದ್ದ. ವಾರದ ಹಿಂದೆಯಷ್ಟೇ ಆತನನ್ನು ಕೆಲಸದಿಂದ ತೆಗೆಯಲಾಗಿತ್ತು. ಆನಂತರ, ಚಾಲಕ ಚೇತನ್ ಹೊಂದಾಗಿ ಕೆಲಸಕ್ಕೆ ಸೇರಿದ್ದ. ಈ ಕೊಲೆ ಪ್ರಕರಣ ದಾಖಲಾಗುತ್ತಿದ್ದಂತೆ ಕಿರಣ್ ತಲೆಮರೆಸಿಕೊಂಡಿದ್ದಾನೆ. ಆತನ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ. ಪ್ರಕರಣದಲ್ಲಿ ಆತನ ಪಾತ್ರವಿರುವ ಶಂಕೆ ಇದ್ದು, ಆತನಿಗಾಗಿ ಶೋಧ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಎಲ್ಲ ಆಯಾಮಗಳಿಂದ ತನಿಖೆ –ಸಚಿವ

ದಾವಣಗೆರೆ: ‘ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕಿ ಪ್ರತಿಮಾ ಅವರ ಕೊಲೆ ಪ್ರಕರಣದ ಬಗ್ಗೆ ಅವರು ಸಂಶಯಗಳಿವೆ. ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತದೆ’ ಎಂದು ಗಣಿ, ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಹೇಳಿದರು.

ಎಸ್.ಎಸ್. ಮಲ್ಲಿಕಾರ್ಜುನ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಲವರು ಕೌಟುಂಬಿಕ ಕಾರಣ, ಇಲಾಖೆ ವಿಚಾರ ಎನ್ನುತ್ತಿದ್ದಾರೆ. ಮತ್ತೆ ಕೆಲವರು ಕಾರು ಚಾಲಕನನ್ನು ಸೇವೆಯಿಂದ ಬಿಡುಗಡೆಗೊಳಿಸಿರುವುದೇ ಕಾರಣ ಎನ್ನುತ್ತಿದ್ದಾರೆ. ಈ ಎಲ್ಲ ವಿಚಾರಗಳ ಬಗ್ಗೆ ತನಿಖೆ ನಡೆಯಲಿದೆ. ಅಕ್ರಮ ಗಣಿಗಾರಿಕೆ ನಿಯಂತ್ರಣದ ಕುರಿತ ಮಾತುಗಳು ಇವೆ. ತನಿಖೆ ನಂತರವೇ ಸ್ಪಷ್ಟವಾಗಲಿದೆ’ ಎಂದು ತಿಳಿಸಿದ್ದಾರೆ.

‘ಎಲ್ಲ ಅಧಿಕಾರಿಗಳಿಗೂ ಪೊಲೀಸ್ ಭದ್ರತೆಯನ್ನು ಕಲ್ಪಿಸುವುದು ಅಸಾಧ್ಯ’ ಎಂದು ಅವರು ಇದೇ ವೇಳೆ ಪ್ರತಿಕ್ರಿಯಿಸಿದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಪ್ರತಿಮಾ ಅವರು ಮನೆಯಲ್ಲಿ ಒಬ್ಬರೇ ಇರುತ್ತಿದ್ದರು, ಪತಿ ಊರಿನಲ್ಲಿದ್ದರು ಎಂದು ತಿಳಿದುಬಂದಿದೆ. ಕಾರಣ ಗೊತ್ತಾಗಿಲ್ಲ. ತನಿಖೆ ನಡೆಯುತ್ತಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಐಫೋನ್ ಸಿಕ್ಕಿದೆ. ಅದನ್ನು ವಶಕ್ಕೆ ಪಡೆದು, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪ್ರತಿಮಾ ಅವರ ಕಚೇರಿ ಸಿಬ್ಬಂದಿ ಮತ್ತು ಇತರರನ್ನು ತನಿಖೆಗೆ ಒಳಪಡಿಸಲಾಗಿದೆ’ ಎಂದು ತಿಳಿಸಿದರು.

ಭೂ ವಿಜ್ಞಾನಿ ಪ್ರತಿಮಾ ಕೊಲೆ

ಒಂದನೇ ಪುಟದಿಂದ

‘ಸುಸ್ತಾಗಿ ಮಲಗಿರಬಹುದೆಂದು ಸಹೋದರ ಸುಮ್ಮನಾಗಿದ್ದರು. ಭಾನುವಾರ ಬೆಳಿಗ್ಗೆ ಪುನಃ ಕರೆ ಮಾಡಿದ್ದರು. ಆಗಲೂ ಕರೆ ಸ್ವೀಕರಿಸಿರಲಿಲ್ಲ. ಅನುಮಾನಗೊಂಡ ಸಹೋದರ, ಮನೆಗೆ ಬಂದು ನೋಡಿದಾಗ ಬಾಗಿಲು ಅರ್ಧ ತೆರೆದಿತ್ತು. ಮಲಗುವ ಕೋಣೆಯಲ್ಲಿದ್ದ ಬೆಡ್ ಮೇಲೆ ಮೃತದೇಹ ಕಂಡಿತ್ತು. ಪ್ರತ್ಯೇಕ ಅವರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ತಿಳಿಸಿದರು.

‘ರಾತ್ರಿ 8 ಗಂಟೆ ಸುಮಾರಿಗೆ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಪ್ರತಿಮಾ ಅವರನ್ನು ಉಸಿರುಗಟ್ಟಿಸಿ ಚಾಕುವಿನಿಂದ ಕತ್ತು ಕೊಯ್ದು ಕೊಂದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಮನೆಯಲ್ಲಿ ಯಾವುದೇ ವಸ್ತು ಚೆಲ್ಲಾಪಿಲ್ಲಿ ಆಗಿಲ್ಲ. ಕಳ್ಳತನವೂ ನಡೆದಿಲ್ಲ’ ಎಂದು ಹೇಳಿದರು.

6 ಆಯಾಮದಲ್ಲಿ ತನಿಖೆ: ‘ವೈಯಕ್ತಿಕ ಹಾಗೂ ವೃತ್ತಿ ಕಾರಣಗಳಿಗೆ ಕೊಲೆ ನಡೆದಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಕೊಲೆಗೆ ಕಾರಣವಿರಬಹುದು ಎನ್ನಲಾದ 6 ಆಯಾಮಗಳನ್ನು ಪತ್ತೆ ಮಾಡಲಾಗಿದೆ. ಆರೋಪಿಗಳ ಪತ್ತೆಗಾಗಿ ಆರು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಪ್ರತಿಯೊಂದು ಆಯಾಮದಲ್ಲೂ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ತಿಳಿಸಿದರು.

ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದ ಸ್ಥಳ: ‘ಪ್ರತಿಮಾ ಅವರ ಮನೆ ಹಾಗೂ ಸುತ್ತಮುತ್ತ ಯಾವುದೇ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳಿಲ್ಲ. ಕೃತ್ಯ ನಡೆಯುತ್ತಿದ್ದಂತೆ ಕ್ಯಾಮೆರಾಗಳಿಗಾಗಿ ಹುಡುಕಾಟ ನಡೆಸಲಾಯಿತು. ಮನೆಯಿಂದ 1 ಕಿ.ಮೀ ದೂರದಲ್ಲಿರುವ ಬೇರೆ ಸ್ಥಳಗಳಲ್ಲಿ ಕ್ಯಾಮೆರಾಗಳಿವೆ. ಎಲ್ಲ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಕಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಪ್ರತಿಮಾ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ.

ಆರ್‌ಎಫ್‌ಒ ಬಡ್ತಿ: ಡಿಪಿಎಆರ್ ಅಭಿಪ್ರಾಯಕ್ಕೆ ಡಿಎಫ್‌ಒಗಳ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ (ಡಿಎಫ್‌ಒ) ಹುದ್ದೆಯಿಂದ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ (ಆರ್‌ಎಫ್‌ಒ) ಹುದ್ದೆಗೆ ಪದೋನ್ನತಿ ನೀಡುವ ಮೊದಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ (ಡಿಪಿಎಆರ್) ಸ್ಪಷ್ಟ ಅಭಿಪ್ರಾಯ ಪಡೆಯಬೇಕು ಎಂದು ಸಾಮಾನ್ಯ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಡಿಎಫ್‌ಒಗಳು ಆಗ್ರಹಿಸಿದ್ದಾರೆ.

‘ಇಲಾಖೆಯಲ್ಲಿ ಒಟ್ಟು 16 ಆರ್‌ಎಫ್‌ಒ ಹುದ್ದೆಗಳಿವೆ. ಈ ಪೈಕಿ ಒಂದು ಹುದ್ದೆ ಮಾತ್ರ ಭರ್ತಿಯಾಗಿದೆ. ಉಳಿದ 15 ಹುದ್ದೆಗಳು ಖಾಲಿ ಇವೆ. ಅದರಲ್ಲಿ 13 ಉಳಿದ ಮೂಲ ವೃಂದದ ಹುದ್ದೆಗಳು. ಎರಡು ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು. ಇದೀಗ 13 ಹುದ್ದೆಗಳನ್ನು ತುಂಬಲು ಇಲಾಖೆ ಮುಂದಾಗಿದೆ.

ಆರ್‌ಎಫ್‌ಒ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಸೆ. 30ರಂದು ಪತ್ರ ಬರೆದಿರುವ ಸಮಾಜ ಕಲ್ಯಾಣ ಇಲಾಖೆ, ಈ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ (ಎಸ್‌ಸಿ) 6 ಹಾಗೂ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) 2 ಬ್ಯಾಕ್‌ಲಾಗ್ ಹುದ್ದೆಗಳಿದ್ದು, ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ ಅನುಪಾಲನಾ ವರದಿ ಸಲ್ಲಿಸುವಂತೆ ನಿರ್ದೇಶಿಸಿದೆ.

ಈ ಮಧ್ಯೆ, ಅ. 11ರಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಕಮಲ್ ಪಂತ್, ಸಮಾಜ ಕಲ್ಯಾಣ ಇಲಾಖೆ ನೀಡಿರುವ ವರದಿ, ಸಾಮಾನ್ಯ ವರ್ಗದ ಡಿಎಫ್‌ಒಗಳ ಆಕ್ಷೇಪಣೆ ಮತ್ತು ಎಸ್‌ಸಿ ಮತ್ತು ಎಸ್‌ಟಿ ಡಿಎಫ್‌ಒಗಳ ಆಕ್ಷೇಪಣೆಯನ್ನು ಪರಿಶೀಲಿಸಿ ಆರ್‌ಎಫ್‌ಒ ಹುದ್ದೆಗಳನ್ನು ಭರ್ತಿ ಮಾಡಲು ಡಿಪಿಎಆರ್‌ನಿಂದ ಸ್ಪಷ್ಟ ಅಭಿಪ್ರಾಯ ಪಡೆದು ಇಲಾಖೆಗೆ ನೀಡುವಂತೆ ತಿಳಿಸಿದ್ದಾರೆ.

‘ಡಿಜಿಪಿ ಅವರಷ್ಟೆ ಅಲ್ಲದೆ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಕೂಡಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದು, ಆರ್‌ಎಫ್‌ಒ ಹುದ್ದೆಗೆ ಬಡ್ತಿ ನೀಡುವ ಸಂದರ್ಭದಲ್ಲಿ ಡಿಪಿಎಆರ್‌ನಿಂದ ಲಿಖಿತ ಅಭಿಪ್ರಾಯ ಪಡೆದು ಕಾನೂನಾತ್ಮಕವಾಗಿ ಪರಿಶೀಲಿಸುವಂತೆ ಸೂಚಿಸಿದ್ದಾರೆ. ಆದರೂ ಡಿಪಿಎಆರ್‌ನಿಂದ ಅಭಿಪ್ರಾಯ ಪಡೆಯದೆ, ಸಮಾಜ ಕಲ್ಯಾಣ ಇಲಾಖೆ ನೀಡಿದ ವರದಿಯನ್ನಷ್ಟೆ ಪರಿಗಣಿಸಿ ಆರ್‌ಎಫ್‌ಒ ಹುದ್ದೆಗೆ ಪದೋನ್ನತಿ ನೀಡಲು ಇಲಾಖೆ ಮುಂದಾಗಿದೆ. ಇದರಿಂದ ನಮಗೆ ಬಡ್ತಿಯಲ್ಲಿ ಅನ್ಯಾಯವಾಗಲಿದೆ’ ಎಂದು ಸಾಮಾನ್ಯ ಮತ್ತು ಹಿಂದುಳಿದ ವರ್ಗದ ಡಿಎಫ್‌ಒಗಳು ಅಳಲು ತೋಡಿಕೊಂಡಿದ್ದಾರೆ.

ಬಸ್ ಪ್ರಯಾಣ ದರ ಪರಿಷ್ಕರಣೆ ಪ್ರತ್ಯೇಕ ಆಯೋಗಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್‌ಗಳ ಖರೀದಿ, ಬಿಡಿ ಭಾಗಗಳು ಹಾಗೂ ದುರಸ್ತಿ ವೆಚ್ಚ ಮತ್ತು ಇಂಧನ ದರ ಏರಿಕೆ ಆಧಾರದಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಪರಿಷ್ಕರಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮಾದರಿಯಲ್ಲಿ ಪ್ರತ್ಯೇಕ ಆಯೋಗವೊಂದನ್ನು ರಚಿಸುವ ಕುರಿತು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಈ ಹಿಂದೆ ಇದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾರಿಗೆ ಇಲಾಖೆಯ ಅಧೀನದಲ್ಲಿರುವ ನಾಲ್ಕು ರಸ್ತೆ ಸಾರಿಗೆ ನಿಗಮಗಳನ್ನು ಸಶಕ್ತಗೊಳಿಸಿ ಪಾರು ಮಾಡುವ ಕುರಿತು ಅಧ್ಯಯನ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸ ಮೂರ್ತಿ ನೇತೃತ್ವದ ಸಮಿತಿ ರಚಿಸಲಾಗಿತ್ತು. ಬಸ್ ಪ್ರಯಾಣ ದರ ಪರಿಷ್ಕರಣೆಗೆ ಕೆಇಆರ್‌ಸಿ ಮಾದರಿಯಲ್ಲಿ ಆಯೋಗವೊಂದನ್ನು ನೇಮಿಸುವುದು ಸೂಕ್ತ ಎಂದು ಸಮಿತಿ ಶಿಫಾರಸು ಮಾಡಿತ್ತು.

‘ವಿವಿಧ ಕಾರಣಗಳಿಂದ ಸರ್ಕಾರವು ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಹಿಂದೇಟು ಹಾಕುತ್ತದೆ. ಇದು ಸಾರಿಗೆ ನಿಗಮಗಳ ನಷ್ಟದ ಸುಳಿಗೆ ಸಿಲುಕಲು ಕಾರಣವಾಗುತ್ತದೆ. ಹಲವು ವರ್ಷಗಳವರೆಗೂ ಪ್ರಯಾಣ ದರ ಪರಿಷ್ಕರಣೆ ಆಗದೇ ಇರುವುದರಿಂದ ನಿಗಮಗಳು ನಷ್ಟದಲ್ಲಿವೆ. ಸ್ವತಂತ್ರ ಆಯೋಗ ನೇಮಿಸಿದರೆ ಹಸ್ತಕ್ಷೇಪ ಇಲ್ಲದ ದರ ಪರಿಷ್ಕರಣೆ ಸಾಧ್ಯವಾಗುತ್ತದೆ ಎಂಬುದನ್ನು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವರಿಕೆ ಮಾಡಲು ಹಣಕಾಸು ಇಲಾಖೆ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆ. ವಿಷಯ ಇನ್ನೂ ಚರ್ಚೆಯಲ್ಲಿದೆ’ ಎಂದು ಮೂಲಗಳು ತಿಳಿಸಿವೆ.

ಮಾರುಕಟ್ಟೆಯಲ್ಲಿ ಡೀಸೆಲ್ ದರ ಏರಿಕೆ, ಹೊಸ ಬಸ್ ಖರೀದಿ, ದುರಸ್ತಿ ವೆಚ್ಚವನ್ನು ಆಧರಿಸಿ ಪ್ರತಿ ವರ್ಷವೂ ಸಾರಿಗೆ ನಿಗಮಗಳ ವರಮಾನದ ಬೇಡಿಕೆಯನ್ನು ಆಯೋಗದ ಮುಂದೆ ಮಂಡಿಸಿ, ಅನುಮೋದನೆ ಪಡೆಯಬೇಕು. ಕೊರತೆ ಉದ್ಭವಿಸುವ ಸಂದರ್ಭದಲ್ಲಿ ಆಯೋಗದ ಮೂಲಕವೇ ಪ್ರಯಾಣ ದರ ಪರಿಷ್ಕರಣೆ ಆದೇಶ ಪಡೆಯಬೇಕು. ದರ ಪರಿಷ್ಕರಣೆ ತೀರ್ಮಾನವನ್ನು ಹಿಂಪಡೆಯುವುದಕ್ಕೆ ಸರ್ಕಾರಕ್ಕೆ ಅವಕಾಶ ಇರದಂತೆ ರಕ್ಷಣೆ ಒದಗಿಸಬೇಕು ಎಂಬುದು ಚರ್ಚೆಯಲ್ಲಿದೆ.

‘ಚರ್ಚೆಯ ಹಂತದಲ್ಲೇ ಇದೆ’

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ‘ಬಸ್ ಪ್ರಯಾಣ ದರ ಪರಿಷ್ಕರಣೆಗೆ ಪ್ರತ್ಯೇಕ ಆಯೋಗ ರಚಿಸಬೇಕೆಂಬ ವಿಷಯ ಇನ್ನೂ ಚರ್ಚೆಯ ಹಂತದಲ್ಲಿದೆ. ಸಾರಿಗೆ ಇಲಾಖೆ ಒಪ್ಪಿಗೆ ನೀಡಿದ ಬಳಿಕವಷ್ಟೇ ಮುಂದಿನ ಪ್ರಕ್ರಿಯೆ ಆರಂಭವಾಗಬೇಕು. ಸದ್ಯ ನಾವು ಯಾವುದೇ ತೀರ್ಮಾನ ಕೈಗೊಂಡಿಲ್ಲ’ ಎಂದರು.

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಆಯೋಜಿಸಿದ್ದ ಪಥಸಂಚಲನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರು ಪಥಸಂಚಲನದಲ್ಲಿ ಭಾಗವಹಿಸಿದರು —ಪ್ರಜಾವಾಣಿ ಚಿತ್ರ.

ಮಹುವಾ ಪ್ರಕರಣ: ಲೋಕಸಭೆ ನೀತಿ ಸಮಿತಿಯ ಸಭೆ ನಾಳೆ

ನವದೆಹಲಿ (ಪಿಟಿಐ): ಬಿಜೆಪಿಯ ನಿಶಿಕಾಂತ್ ದುಬೆ ಅವರು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಮಾಡಿರುವ ‘ಪ್ರಶ್ನೆಗಾಗಿ ಲಂಚ ಪಡೆದ’ ಆರೋಪಗಳಿಗೆ ಸಂಬಂಧಿಸಿ ತನ್ನ ಕರಡು ವರದಿ ಅಂಗೀಕರಿಸಲು ಮತ್ತು ಮೊಯಿತ್ರಾ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲು ಲೋಕಸಭೆಯ ನೀತಿ ಸಮಿತಿಯು ಇದೇ 7ರಂದು ಸಭೆ ಸೇರಲಿದೆ.

ಬಿಜೆಪಿ ಸಂಸದ ವಿನೋದ್ ಕುಮಾರ್ ಸೋನ್‌ಕರ್ ನೇತೃತ್ವದ ಸಮಿತಿಯು ಮಹುವಾ ಅವರ ವಿಚಾರಣೆ ಪೂರ್ಣಗೊಳಿಸಿದೆ. ಸಮಿತಿಯ ಕೊನೆ ಸಭೆ ನವೆಂಬರ್ 2ರಂದು ನಡೆದಿದ್ದು, ಸಮಿತಿಯ ಸದಸ್ಯರು ನೀಡುವ ಶಿಫಾರಸುಗಳನ್ನು ಮತ್ತು ಕರಡು ವರದಿಯನ್ನು ಈ ಸಭೆಯಲ್ಲಿ ಅಂಗೀಕರಿಸಲಾಗುತ್ತದೆ.

15 ಸದಸ್ಯರ ಸಮಿತಿಯಲ್ಲಿ ಬಿಜೆಪಿ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಮೊಯಿತ್ರಾ ವಿರುದ್ಧದ ಆರೋಪಗಳನ್ನು ಗಂಭೀರವಾಗಿ ಪರಿಗಣಿಸುವ ಸಾಧ್ಯತೆಯಿದೆ. ಸಮಿತಿ ಅಧ್ಯಕ್ಷರು ಅನುಚಿತ ಮತ್ತು ವೈಯಕ್ತಿಕ ಪ್ರಶ್ನೆಗಳನ್ನು ಕೇಳಿದರು ಎಂದು ಆರೋಪಿಸಿ ಮೊಯಿತ್ರಾ ಮತ್ತು ವಿರೋಧ ಪಕ್ಷಗಳ ಸದಸ್ಯರು ಕಳೆದ ಸಭೆಯಿಂದ ಹೊರನಡೆದಿದ್ದರು.

ಮಹುವಾ ಅವರ ಪ್ರಯಾಣ, ಹೋಟೆಲ್ ವಾಸ್ತವ್ಯ ಮತ್ತು ದೂರವಾಣಿ ಕರೆಗಳ ಬಗ್ಗೆ ಸೋನ್‌ಕರ್ ಅವರು ವೈಯಕ್ತಿಕ ಮತ್ತು ಅಸಭ್ಯ ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ಆರೋಪಿಸಿ ಸಮಿತಿಯಲ್ಲಿದ್ದ ವಿರೋಧ ಪಕ್ಷಗಳ ಎಲ್ಲಾ ಐವರು ಸದಸ್ಯರು ಸಭೆಯಿಂದ ಹೊರನಡೆದಿದ್ದರು.

ವಿರೋಧ ಪಕ್ಷಗಳ ಸದಸ್ಯರು ಮತ್ತು ಮಹುವಾ ಅವರು ಮಾಡಿದ್ದ ಈ ಆರೋಪವನ್ನು ಸಮಿತಿ ಅಧ್ಯಕ್ಷ ಸೋನ್‌ಕರ್ ತಳ್ಳಿಹಾಕಿದ್ದರು. ಮಹುವಾ ಅವರು ಉದ್ಯಮಿ ದರ್ಶನ್ ಹೀರಾನಂದಾನಿ ಅವರ ಆಣತಿಯಂತೆ ತಮ್ಮ ಸಂಸತ್ ಖಾತೆಯ ಮೂಲಕ ಪ್ರಶ್ನೆಗಳನ್ನು ಕೇಳಿದ್ದಾರೆ, ತಮ್ಮ ಖಾತೆಯ ಲಾಗಿನ್ ವಿವರಗಳನ್ನು ಹೀರಾನಂದಾನಿ ಜೊತೆ ಹಂಚಿಕೊಂಡಿದ್ದಾರೆ ಎಂಬುದು ಆರೋಪ.

ಪರ್ಯಾಯ ಕಾಯ್ದೆ: ಕರಡು ಮಸೂದೆಗಳಿಗೆ ಇಂದು ಸಮ್ಮತಿ?

ನವದೆಹಲಿ (ಪಿಟಿಐ): ಪ್ರಸ್ತುತ ಚಾಲ್ತಿಯಲ್ಲಿರುವ ಕ್ರಿಮಿನಲ್ ಕಾಯ್ದೆಗಳಿಗೆ ಪರ್ಯಾಯವಾಗಿ ಜಾರಿಗೆ ತರಲು ಉದ್ದೇಶಿಸಿರುವ ಕಾಯ್ದೆಗಳ ಕರಡು ಮಸೂದೆಗಳಿಗೆ ಸಂಸತ್ತಿನ ಸಮಿತಿಯು ಸೋಮವಾರ (ನ.6) ಅನುಮೋದನೆ ನೀಡುವ ಸಾಧ್ಯತೆಯಿದೆ.

ಈ ಮಸೂದೆಗಳ ವಿಸ್ತೃತ ಪರಿಶೀಲನೆಗಾಗಿ ಕಾಲಾವಕಾಶ ನೀಡಬೇಕು ಎಂದು ವಿರೋಧಪಕ್ಷಗಳ ಕೆಲ ಸದಸ್ಯರು ಸಮಿತಿ ಅಧ್ಯಕ್ಷರಿಗೆ ಮನವಿ ಮಾಡಿದ್ದಾರೆ. ಇದೇ ಕಾರಣದಿಂದ ಅ.27ರಂದು ನಡೆದಿದ್ದ ಸಭೆಯಲ್ಲಿ ಸಮಿತಿಯು ಅನುಮೋದನೆಯನ್ನು ಮುಂದೂಡಿತ್ತು.

ಸಮಿತಿಯ ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್‌ಲಾಲ್ ಅವರಿಗೆ ಪ್ರತಿಪಕ್ಷಗಳ ಕೆಲ ಸದಸ್ಯರು, ‘ಚುನಾವಣೆಗಳು ಅಲ್ಪಾವಧಿ ಲಾಭಕ್ಕಾಗಿ ಈ ಮಸೂದೆಗಳನ್ನು ಹೇರುವುದನ್ನು ತ್ವರಿತಪಡಿಸಬೇಕು. ಅವಧಿಯನ್ನು ಮತ್ತೆ 3 ತಿಂಗಳು ವಿಸ್ತರಿಸಲು ಕೋರಬೇಕು’ ಎಂದು ಒತ್ತಾಯಿಸಿದ್ದರು. ‘ನಿರ್ಲಕ್ಷ್ಯತನ ನ್ಯಾಯ ಕಲ್ಪಿಸುವ ಸಮಗ್ರ ಕಾಯ್ದೆಗಳನ್ನು ರೂಪಿಸಬೇಕಿದೆ. ಹೀಗಾಗಿ, ನವೆಂಬರ್‌ನಲ್ಲಿ ಅಥವಾ ಮುಂದಿನ ಕೆಲ ದಿನಗಳ ಅಂತಿಮ ವರದಿಯನ್ನು ಅಂಗೀಕರಿಸಬಾರದು. ತರಾತುರಿಯಲ್ಲಿ ಅಂಗೀಕರಿಸಿದರೆ, ನಾವು ಈ ಮೂಲಕ ಶಾಸಕಾಂಗದ ಪರಿಶೀಲನಾ ಪ್ರಕ್ರಿಯೆಯನ್ನೇ ಅಣಕು ಮಾಡಿದಂತಾಗುತ್ತದೆ’ ಎಂದು ವಿಪಕ್ಷದ ಸಂಸದರೊಬ್ಬರು ಸಮಿತಿ ಅಧ್ಯಕ್ಷರಿಗೆ ತಿಳಿಸಿದ್ದರು. ಮೂಲಗಳ ಪ್ರಕಾರ, ಸಮಿತಿಯು ವಿಸ್ತೃತ ಚರ್ಚೆ ನಂತರ ತನ್ನ ವರದಿಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸಲ್ಲಿಸಲು ತೀರ್ಮಾನಿಸಿದೆ. ಮೂರು ತಿಂಗಳ ಗಡುವಿನಲ್ಲಿ ಅನುಮೋದನೆ ನೀಡುವ ಪ್ರಕ್ರಿಯೆ ಪೂರ್ಣಗೊಳಿಸಲಿದೆ.

ಐದು ವರ್ಷ ಕಾಂಗ್ರೆಸ್ ಅಧಿಕಾರದಲ್ಲಿ ಇರಲು ಸಾಧ್ಯವೇ ಇಲ್ಲ: ಕೆ.ಎಸ್‌. ಈಶ್ವರಪ್ಪ

‘ಲೂಟಿ ಹಣದಲ್ಲಿ ಸಿ.ಎಂಗೆ ಸಿಂಹಪಾಲು’

ಪ್ರಜಾವಾಣಿ ವಾರ್ತೆ

ಹಾವೇರಿ: ‘ರಾಜ್ಯದಲ್ಲಿ ಅಭಿವೃದ್ಧಿ ನಿಂತು ಹೋಗಿದೆ. ಶಾಸಕರಿಗೆ ಅನುದಾನ ನೀಡುತ್ತಿಲ್ಲ. ಸಚಿವರು ಇರುವಷ್ಟು ದಿನ ಲೂಟಿ ಹೊಡೆಯೋಣ ಅಂತ ತೀರ್ಮಾನಿಸಿದ್ದಾರೆ. ಸಿ.ಎಂ ಹಾಗೂ ಅವರ ಮಗನನ್ನು ‘ಇದರಲ್ಲಿ ಸಿಂಹಪಾಲಿದೆ’ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಆರೋಪ ಮಾಡಿದರು.

ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಕಾಂಗ್ರೆಸ್‌ನಲ್ಲಿ ಒಳಜಗಳ ತಾರಕಕ್ಕೇರಿದೆ. ಸರ್ಕಾರ ಐದು ವರ್ಷ ಇರಲು ಸಾಧ್ಯವೇ ಇಲ್ಲ. ಎಷ್ಟು ದಿನ ಇರುತ್ತೆ ಎಂಬುದು ಗೊತ್ತಿಲ್ಲ’ ಎಂದು ಹೇಳಿದರು.

‘ಡಿ.ಕೆ.ಶಿವಕುಮಾರ್ ವಿರುದ್ಧ ಗುತ್ತಿಗೆದಾರರ ಸಂಘದ ಕೆಂಪಣ್ಣ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಹಿಂದೆ ನನ್ನ ಮೇಲೆ ಆರೋಪ ಬಂದಾಗ ನ್ಯಾಯಾಂಗ ತನಿಖೆ ನಡೆಸುವಂತೆ ಒತ್ತಾಯಿಸಿದ್ದ ಈಗಲೂ ಸೂಕ್ತ ತನಿಖೆ ನಡೆಸಬೇಕು. ಇಂಥವರು ಹಣ ಕೊಡುತ್ತಿದ್ದಾರೆ ಅಂತ ಹೇಳಿದ ಮೇಲೂ ತನಿಖೆ ನಡೆಸದೆ ಇದ್ದರೆ ಭ್ರಷ್ಟಾಚಾರಕ್ಕೆ ಲೈಸೆನ್ಸ್ ಕೊಟ್ಟಂತಾಗುತ್ತದೆ’ ಎಂದರು.

‘ರಾಜ್ಯದಲ್ಲಿ ತೀವ್ರ ಬರಗಾಲ ಆವರಿಸಿದೆ. ಸರ್ಕಾರ ರೈತರಿಗೆ ಪರಿಹಾರ ನೀಡುತ್ತಿಲ್ಲ. ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡುವುದನ್ನು ಬಿಟ್ಟು ರಾಜ್ಯ ಸರ್ಕಾರ ತನ್ನ ಪಾಲಿನ ಪರಿಹಾರವನ್ನು ರೈತರಿಗೆ ತಕ್ಷಣ ನೀಡಬೇಕು’ ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನಲ್ಲಿ ಎಷ್ಟು ಗುಂಪಿದೆ? ‘ಸಿದ್ದರಾಮಯ್ಯ ತಾವೇ ಮುಂದಿನ 5 ವರ್ಷ ಸಿಎಂ ಅಂದರು. ‘ಹೈಕಮಾಂಡ್ ನಿರ್ಧಾರ ಮಾಡುತ್ತದೆ’ ಎಂದು ಡಿಕೆಶಿ ಹೇಳುತ್ತಾರೆ. ಸಿದ್ದರಾಮಯ್ಯ ಪರ ಇದ್ದ ಕೆ.ಎನ್‌ ರಾಜಣ್ಣ, ಪರಮೇಶ್ವರ ಸಿಎಂ ಆಗುತ್ತಾರೆ ಅಂದರು. ಪ್ರಿಯಾಂಕ್ ಖರ್ಗೆ ಹೈಕಮಾಂಡ್ ತೀರ್ಮಾನ ಮಾಡಿದರೆ ನಾನೇ ಸಿಎಂ ಅಂದರು. ಕಾಂಗ್ರೆಸ್‌ನಲ್ಲಿ ಎಷ್ಟು ಗುಂಪುಗಳಿವೆ ಎಂಬುದೇ ಗೊತ್ತಿಲ್ಲ?’ ಎಂದು ವ್ಯಂಗ್ಯವಾಡಿದರು.

ಸುದ್ದಿ 2 ನಿಮಿಷ

ದೆಹಲಿ: ಪ್ರಾಥಮಿಕ ಶಾಲೆಗಳಿಗೆ ರಜೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ವಾಯುಮಾಲಿನ್ಯವು ತೀವ್ರತರವಾಗಿ ಹೆಚ್ಚುತ್ತಿರುವುದರಿಂದ ಪ್ರಾಥಮಿಕ ಶಾಲೆಗಳಿಗೆ ಇದೇ 10ರವರೆಗೆ ರಜೆ ಘೋಷಿಸಲಾಗಿದೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ದೆಹಲಿ ಶಿಕ್ಷಣ ಸಚಿವೆ ಆತಿಶಿ ಅವರು, ‘6ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಪಾಠ ಮಾಡುವ ಅವಕಾಶ ನೀಡಲಾಗುತ್ತದೆ’ ಎಂದಿದ್ದಾರೆ.

‘ಸತತ ಆರನೇ ದಿನವಾದ ಭಾನುವಾರ ದೆಹಲಿಯಲ್ಲಿ ಹೊಂಜು ಕಾಣಿಸಿಕೊಂಡಿದ್ದು, ಪ್ರತಿಕೂಲ ಗಾಳಿಯಿಂದಾಗಿ ಮಾಲಿನ್ಯದ ಮಟ್ಟ ಮತ್ತಷ್ಟು ವಿಷಮ ಸ್ಥಿತಿಗೆ ಮುಟ್ಟಿದೆ’ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಹೇಳಿದೆ. ದೆಹಲಿ–ಎನ್‌ಸಿಆರ್ ಪ್ರದೇಶಗಳಲ್ಲಿ ಸಾರ್ವಜನಿಕ ಯೋಜನೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ಎಲ್ಲ ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಗಿತಕ್ಕೆ ಕೇಂದ್ರ ಸರ್ಕಾರ ಆದೇಶಿಸಿದೆ.

‘ಕೈ’ ಹಿಡಿದ ಬಿಎಸ್‌ವೈ ಸಂಬಂಧಿ ಚಿಕ್ಕನಗೌಡರ

ಬೆಂಗಳೂರು: ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಸಂಬಂಧಿ, ಕುಂದಗೋಳ ಕ್ಷೇತ್ರದ ಮಾಜಿ ಬಿಜೆಪಿ ಶಾಸಕ ಎಸ್.ಐ. ಚಿಕ್ಕನಗೌಡರ ಅವರು ತಮ್ಮ ಬೆಂಬಲಿಗರ ಜೊತೆ ಭಾನುವಾರ ಕಾಂಗ್ರೆಸ್ ಸೇರಿದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಜಗದೀಶ ಶೆಟ್ಟರ್ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಸದಾಶಿವನಗರದಲ್ಲಿರುವ ಶಿವಕುಮಾರ್ ಅವರ ನಿವಾಸದಲ್ಲಿ ಅವರ ‘ಕೈ’ ಹಿಡಿದರು. ಅವರ ಜೊತೆ, ಶಿಗ್ಗಾವಿ ಬಿಜೆಪಿಯ ಕೆಲವು ಮುಖಂಡರೂ ಕಾಂಗ್ರೆಸ್ ಸೇರಿದರು.

ಚಿಕ್ಕನಗೌಡರ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡಿದ್ದರು. ಬಿಜೆಪಿಯಿಂದ ಟಿಕೆಟ್ ಸಿಗದೆ ಕಾಂಗ್ರೆಸ್ ಸೇರಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ ಜಗದೀಶ ಶೆಟ್ಟರ್ ಅವರ ಚಿಕ್ಕನಗೌಡರ ಅವರನ್ನು ಕಾಂಗ್ರೆಸ್‌ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಬೆಳಿಗ್ಗೆ ಭೇಟಿ ಮಾಡಿದ್ದ ಚಿಕ್ಕನಗೌಡರ, ಕಾಂಗ್ರೆಸ್ ಸೇರಲು ನಿರ್ಧರಿಸಿರುವುದಾಗಿ ತಿಳಿಸಿದ್ದರು.

ಕಾಂಗ್ರೆಸ್ ವರಿಷ್ಠರ ಸೂಚನೆಯಂತೆ ಬಿಜೆಪಿ, ಜೆಡಿಎಸ್‌ನ ಹಲವು ಮುಖಂಡರನ್ನು ಜಗದೀಶ ಶೆಟ್ಟರ್ ಅವರು ಸಂಪರ್ಕಿಸಿ ಕಾಂಗ್ರೆಸ್‌ಗೆ ಆಹ್ವಾನಿಸಿದ್ದಾರೆ. ಕೆಲವರ ಜೊತೆ ಈಗಾಗಲೇ ಒಂದು ಹಂತದ ಮಾತುಕತೆ ಮುಗಿದಿದೆ. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಇನ್ನಷ್ಟು ಮಂದಿ ‘ಆಪರೇಷನ್ ಹಸ್ತ’ಕ್ಕೆ ಒಳಗಾಗಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಎಎಸ್‌ಪಿ ಉದೇಶ ಹಾಗೂ ಇತರ ಅಧಿಕಾರಿಗಳು ಭೇಟಿ ನೀಡಿದ್ದರು

ಅರಣ್ಯ ಸಿಬ್ಬಂದಿ ಗುಂಡೇಟು; ಬೇಟೆಗಾರ ಸಾವು

ಒಂದನೇ ಪುಟದಿಂದ

‘ಕಡವೆಗೆ ಗುಂಡಿಟ್ಟ ಸದ್ದು ನಮ್ಮ ಸಿಬ್ಬಂದಿಗೆ ಕೇಳಿದೆ. ತಕ್ಷಣ ವಲಯ ಅರಣ್ಯಾಧಿಕಾರಿ ಗಮನಕ್ಕೆ ತಂದಿದ್ದಾರೆ. ಹಿಂದೆಯೇ ಕಾರ್ಯಾಚರಣೆ ಆರಂಭವಾಗಿದೆ. ಬೇಟೆಗಾರರು ಮತ್ತೊಂದು ತಂಡಕ್ಕೆ ಕಡವೆಯ ಮಾಂಸ ಒಯ್ಯುತ್ತಿದ್ದರು. 7–8 ಜನರಿದ್ದರು ಎಂದು ಸಿಬ್ಬಂದಿ ತಿಳಿಸಿದ್ದಾರೆ’ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೇಟೆಗಾರರು ಸಿಬ್ಬಂದಿಯ ಮೇಲೆ ಗುಂಡು ಹಾರಿಸಿದರು. ಆತ್ಮರಕ್ಷಣೆಗಾಗಿ ಸಿಬ್ಬಂದಿ ಪ್ರತಿದಾಳಿ ನಡೆಸಿದಾಗ ಅದು ಒಬ್ಬನಿಗೆ ತಗುಲಿದೆ. ನಮ್ಮ ಸಿಬ್ಬಂದಿಗೆ ಏನೂ ಆಗಿಲ್ಲ. ಉಳಿದ ಬೇಟೆಗಾರರು ಪರಾರಿಯಾಗಿದ್ದು, ಅವರ ಪತ್ತೆಗೆ ಕ್ರಮ ವಹಿಸಲಾಗಿದೆ. ಅವರು ಬೇಟೆಯಾಡಿದ್ದ ಕಡವೆಯ ಮಾಂಸ ಹಾಗೂ ಬಂದೂಕು ವಶಕ್ಕೆ ಪಡೆದಿದ್ದೇವೆ’ ಎಂದು ತಿಳಿಸಿದರು.

ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಎಎಸ್‌ಪಿ ಉದೇಶ ಟಿ.ಜೆ. ಭೇಟಿ ನೀಡಿ ಪರಿಶೀಲಿಸಿದರು.

ಮಹದೇವ್ ಆ್ಯಪ್: ಬ್ಲಾಕ್ ಮಾಡಲು ಆದೇಶ

ನವದೆಹಲಿ (ಪಿಟಿಐ): ಬೆಟ್ಟಿಂಗ್ ನಡೆಸಲು ಅವಕಾಶ ಕಲ್ಪಿಸುವ 22 ಅಕ್ರಮ ವೇದಿಕೆಗಳನ್ನು ಬ್ಲಾಕ್ ಮಾಡುವಂತೆ ಕೇಂದ್ರ ಸರ್ಕಾರವು ಭಾನುವಾರ ಆದೇಶಿಸಿದೆ. ಇದರಲ್ಲಿ ಮಹದೇವ್ ಆ್ಯಪ್ ಕೂಡ ಸೇರಿದೆ. ಜಾರಿ ನಿರ್ದೇಶನಾಲಯದ (ಇ.ಡಿ.) ಮನವಿ ಆಧರಿಸಿ ಈ ಆದೇಶ ಹೊರಡಿಸಲಾಗಿದೆ.

ಈ ವೇದಿಕೆಗಳನ್ನು ಬ್ಲಾಕ್ ಮಾಡುವಂತೆ ಛತ್ತೀಸಗಢ ಸರ್ಕಾರವು ಯಾವುದೇ ಮನವಿ ಸಲ್ಲಿಸಿಲ್ಲ ಎಂದು ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಹೇಳಿದ್ದಾರೆ.

‘ಬೆಟ್ಟಿಂಗ್‌ಗೆ ಬಳಸುತ್ತಿದ್ದ ಅಕ್ರಮ ಆ್ಯಪ್ ಜಾಲದ ವಿರುದ್ಧ ಇ.ಡಿ. ನಡೆಸಿದ ತನಿಖೆ ಹಾಗೂ ನಂತರ ಛತ್ತೀಸಗಢದಲ್ಲಿ ಮಹದೇವ್ ಬುಕ್ ಮೇಲೆ ನಡೆಸಿದ ದಾಳಿಯ ನಂತರದಲ್ಲಿ ಈ ಆದೇಶ ಹೊರಡಿಸಲಾಗಿದೆ.

‘ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ವೆಬ್‌ಸೈಟ್ ಅಥವಾ ಆ್ಯಪ್ ಸ್ಥಗಿತಕ್ಕೆ ಆದೇಶಿಸುವ ಅಧಿಕಾರವು ಛತ್ತೀಸಗಢ ಸರ್ಕಾರಕ್ಕೆ ಇದೆ. ಆದರೆ ಅವರು ಆ ಕೆಲಸ ಮಾಡಿಲ್ಲ. ಸ್ಥಗಿತಗೊಳಿಸುವಂತೆ ಮನವಿಯನ್ನು ಮಾಡಿಲ್ಲ. ಮೊದಲ ಬಾರಿಗೆ ಮನವಿ ಬಂದಿರುವುದು ಇ.ಡಿ.ಯಿಂದ. ಇದೇ ಮಾದರಿಯಲ್ಲಿ ಮನವಿ ಸಲ್ಲಿಸಲು ಇ.ಡಿ.ಗೆ ಯಾವ ಅಡೆತಡೆಯೂ ಇರಲಿಲ್ಲ’ ಎಂದು ಚಂದ್ರಶೇಖರ್ ಹೇಳಿದ್ದಾರೆ.

ಗಡಿಯಲ್ಲಿ ಬೇಲಿ ರಕ್ಷಣೆಗೆ ಜೇನು ಪೆಟ್ಟಿಗೆ ಮೊರೆ ಹೋದ ಬಿಎಸ್‌ಎಫ್

ನವದೆಹಲಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಭಾರತ–ಬಾಂಗ್ಲಾ ದೇಶ ಗಡಿಯಲ್ಲಿ ಕಳ್ಳಸಾಗಣೆದಾರರು ಬೇಲಿ ತುಂಡರಿಸುವುದನ್ನು ತಡೆಯಲು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಜೇನು ಪೆಟ್ಟಿಗೆ ಅಳವಡಿಸುವ ವಿನೂತನ ಪ್ರಯೋಗಕ್ಕೆ ಮೊರೆ ಹೋಗಿದೆ.

‘ಜಾನುವಾರು, ಚಿನ್ನ ಮತ್ತು ಮಾದಕವಸ್ತುಗಳ ಕಳ್ಳಸಾಗಣೆದಾರರು ಬೇಲಿಯನ್ನು ತುಂಡರಿಸುತ್ತಾರೆ’ ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ. ಬಿಎಸ್‌ಎಫ್‌ನ 32ನೇ ಬೆಟಾಲಿಯನ್ ವತಿಯಿಂದ ನಾದಿಯಾ ಜಿಲ್ಲೆಯ ಗಡಿ ಪ್ರದೇಶದಲ್ಲಿ ಜೇನು ಪೆಟ್ಟಿಗೆಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ‘ಇದು ಸ್ಥಳೀಯರ ಜೀವನೋಪಾಯಕ್ಕೂ ಸಹಾಯಕವಾಗಲಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬಿಎಸ್‌ಎಫ್‌ನ ಈ ಯೋಜನೆಗೆ ಆಯುಷ್ ಸಚಿವಾಲಯವು ಸಹಕಾರ ನೀಡಿದ್ದು, ಲೋಹದ ಸ್ಮಾರ್ಟ್ ಬೇಲಿಗೆ ಜೇನು ಪೆಟ್ಟಿಗೆಗಳನ್ನು ಅಳವಡಿಸುವ ಸಲುವಾಗಿ ಅಗತ್ಯ ಸಲಕರಣೆಗಳನ್ನು ಮತ್ತು ಜೇನುಪೆಟ್ಟಿಗೆಗಳನ್ನು ಒದಗಿಸಿದೆ.

ಕರ್ನಾಟಕದಲ್ಲಿ ಅಭಿವೃದ್ಧಿ ಕೆಲಸ ಸ್ಥಗಿತ: ಸಿದ್ದರಾಮಯ್ಯ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

ಅಧಿಕಾರದ ಖಾತರಿ ಮುಖ್ಯಮಂತ್ರಿಗೇ ಇಲ್ಲ

ಖಂಡವಾ/ಸಿವನಿ (ಪಿಟಿಐ): ಕಾಂಗ್ರೆಸ್ ಪಕ್ಷವು ಕರ್ನಾಟಕಕ್ಕೆ ಧಕ್ಕೆ ಉಂಟುಮಾಡಿದೆ, ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಆರೋಪಿಸಿದ್ದಾರೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಎಷ್ಟು ದಿನ ಮುಂದುವರಿಯುತ್ತಾರೆ ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ.

ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಎರಡು ಗುಂಪುಗಳ ನಡುವೆ ಒಳಜಗಳ ಇದೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ಅವರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಪಕ್ಷವು ಎಲ್ಲಿಯೇ ಸರ್ಕಾರ ರಚಿಸಿದರೂ ಭ್ರಷ್ಟಾಚಾರದಲ್ಲಿ ತೊಡಗುತ್ತದೆ, ರಾಜ್ಯವನ್ನು ಹಾಳುಮಾಡುತ್ತದೆ. ಅವರು ಒಳಜಗಳದಲ್ಲಿ ತೊಡಗಿರುತ್ತಾರೆ. ಜನರಿಗೆ ನೀಡಲು ಅವರಲ್ಲಿ ಸಮಯವೇ ಇರುವುದಿಲ್ಲ' ಎಂದು ಮೋದಿ ಅವರು ಮಧ್ಯಪ್ರದೇಶದ ಖಂಡವಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

'ಕರ್ನಾಟಕದಲ್ಲಿ ಆರು ತಿಂಗಳ ಹಿಂದಷ್ಟೇ ರಚನೆಯಾಗಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ನೋಡಿ... ರಾಜ್ಯದ ಮುಖ್ಯಸ್ಥ ಸ್ಥಾನದಲ್ಲಿ ಎಷ್ಟು ದಿನ ಇರುತ್ತೇನೆ ಎಂಬುದು ಮುಖ್ಯಮಂತ್ರಿಗೆ ಗೊತ್ತಿಲ್ಲ. ಕರ್ನಾಟಕವನ್ನು ಅವರು ಹಾಳುಮಾಡಿದ್ದಾರೆ, ಅಭಿವೃದ್ಧಿ ಕೆಲಸಗಳು ನಿಂತುಹೋಗಿವೆ' ಎಂದು ಮೋದಿ ದೂರಿದರು.

ಇದು ಕಾಂಗ್ರೆಸ್ ಸಂಸ್ಕೃತಿ. ದೆಹಲಿಯಲ್ಲಿ ಕುಳಿತಿರುವ ಪಕ್ಷದ ನ್ಯಾಯಾಧೀಶ, ನ್ಯಾಯನಿರ್ಣಯ ಮಾಡುತ್ತಾರೆ ಎಂದು ಲೇವಡಿ ಮಾಡಿದರು. 'ತಪ್ಪಾಗಿ ಕಾಂಗ್ರೆಸ್ ಸರ್ಕಾರವು ರಚನೆಯಾದಲ್ಲೆಲ್ಲ, ಆ ರಾಜ್ಯವನ್ನು ಲೂಟಿ ಮಾಡಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವೆ ಸ್ಪರ್ಧೆ ಶುರುವಾಗುತ್ತದೆ. ಇಂತಹ ಸುದ್ದಿಗಳು ಕರ್ನಾಟಕದಿಂದ ಬರುತ್ತಲೇ ಇವೆ' ಎಂದು ವಾಗ್ದಾಳಿ ನಡೆಸಿದರು.

'ರಾಜಸ್ಥಾನದಲ್ಲಿ ಸ್ಪಷ್ಟ ಬಹುಮತವನ್ನು ಪಡೆದ ನಂತರದಲ್ಲಿ ಎರಡು ಗುಂಪುಗಳು ಕಳೆದ ನಾಲ್ಕೂವರೆ ವರ್ಷಗಳಿಂದ ದಿನದ ಇಪ್ಪತ್ತನಾಲ್ಕು ಗಂಟೆಗಳೂ ಕಿತ್ತಾಡುತ್ತಿವೆ' ಎಂದು ಮೋದಿ ದೂರಿದರು. ರಾಜಸ್ಥಾನದಲ್ಲಿ ಕನ್ಹಯ್ಯಾಲಾಲ್ ಎಂಬುವವರ ಹತ್ಯೆ ನಡೆದಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಸಿವನಿಯಲ್ಲಿ ಚುನಾವಣಾ ಸಭೆಯೊಂದರಲ್ಲಿ ಪಾಲ್ಗೊಂಡರು —ಪಿಟಿಐ ಚಿತ್ರ

ಕಾಂಗ್ರೆಸ್ ಪಕ್ಷವು ಮಧ್ಯಪ್ರದೇಶದಲ್ಲಿ ಚುನಾವಣೆ ಎದುರಿಸುತ್ತಿಲ್ಲ. ಅದರ ಬದಲಿಗೆ, ಇಲ್ಲಿ ಆ ಪಕ್ಷದ ಇಬ್ಬರು ದೊಡ್ಡ ನಾಯಕರು ಪರಸ್ಪರರ ವಿರುದ್ಧ ಸೆಣಸಾಡುತ್ತಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ

'ಮಾಫಿಯಾ ಆಡಳಿತ, ಭ್ರಷ್ಟಾಚಾರ ಮತ್ತು ಲೂಟಿಯನ್ನು ಕಾಂಗ್ರೆಸ್ ಉತ್ತೇಜಿಸುತ್ತದೆ. ರಾಜಸ್ಥಾನದಲ್ಲಿ ವ್ಯಕ್ತಿಯೊಬ್ಬರ ಕತ್ತು ಸೀಳಿದ ನಂತರ ನಡೆದ ಸಂಭ್ರಮಾಚರಣೆಯು ಊಹೆಗೂ ನಿಲುಕದ್ದಾಗಿತ್ತು. ಇದು ಕಾಂಗ್ರೆಸ್ ಆಡಳಿತದಲ್ಲಿ ನಡೆಯಿತು' ಎಂದು ಅವರು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಜನರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸುವ ಕೆಲಸವನ್ನು ಬಿಜೆಪಿ ಮತ್ತು ಜೆಡಿಎಸ್ ಮಾಡುತ್ತಿವೆ. ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆ ನಂತರ, ಒಟ್ಟಾಗಿ ಸೇರಿ ಸರ್ಕಾರ ರಚಿಸುವ ಕನಸು ನನಸಾಗದ ಕಾರಣಕ್ಕೆ ಎರಡು ಪಕ್ಷಗಳು ಹೀಗೆ ಮಾಡುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಚೆಗೆ ಆರೋಪಿಸಿದ್ದರು.

ಹಿಡಿತ ಸಾಧಿಸಲು ಬಡಿದಾಟ: ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ಸಿನ ಇಬ್ಬರು ನಾಯಕರು ತಮ್ಮ ಗಂಡು ಮಕ್ಕಳಿಗೆ ನೆಲೆ ಕಾಣಿಸಲು, ಪಕ್ಷದ ಸಂಘಟನೆಯ ಮೇಲೆ ಹಿಡಿತ ಸಾಧಿಸಲು ಬಡಿದಾಡುತ್ತಿದ್ದಾರೆ ಎಂದು ಮೋದಿ ಅವರು ಭಾನುವಾರ ಸಿವನಿಯಲ್ಲಿ ಆರೋಪಿಸಿದರು.

ಶಿವಪುರಿಯ ಮುಖಂಡರೊಬ್ಬರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಣೆ ವಿಚಾರವಾಗಿ ದಿಗ್ವಿಜಯ್ ಸಿಂಗ್ ಅವರ 'ಬಟ್ಟೆ ಹರಿಯಿರಿ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಅವರು ಪಕ್ಷದ ಕಾರ್ಯಕರ್ತರಿಗೆ ಈಚೆಗೆ ಹೇಳಿದ್ದ ವಿಡಿಯೊ ಒಂದು, ಪಕ್ಷದಲ್ಲಿ ಒಗ್ಗಟ್ಟಿಲ್ಲ ಎಂಬ ಮಾತುಗಳಿಗೆ ಕಾರಣವಾಗಿತ್ತು.

ಆದರೆ ಮಧ್ಯಪ್ರದೇಶದ ಇಬ್ಬರೂ ಮಾಜಿ ಮುಖ್ಯಮಂತ್ರಿಗಳು (ಸಿಂಗ್ ಮತ್ತು ನಾಥ್) ಪಕ್ಷದ ವೇದಿಕೆಗಳಲ್ಲಿ ಒಗ್ಗಟ್ಟು ಪ್ರದರ್ಶಿಸಿ, 'ಬಟ್ಟೆ ಹರಿಯಿರಿ' ಎಂದು ಹೇಳಿದ ಪ್ರಸಂಗವು ಮಹತ್ವದ್ದಲ್ಲ ಎಂಬ ಸಂದೇಶ ನೀಡುವ ಯತ್ನ ನಡೆಸಿದ್ದರು.

ಮಧ್ಯಪ್ರದೇಶದ ಸಿವನಿಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಸ್ವಾತಂತ್ರ್ಯ ಬಂದ ನಂತರದಲ್ಲಿ ದೇಶದಲ್ಲಿ ಐದಾರು ದಶಕ ಆಡಳಿತ ನಡೆಸಿದ್ದರೂ ಕಾಂಗ್ರೆಸ್ ಪಕ್ಷವು ಆದಿವಾಸಿಗಳ ಅಭಿವೃದ್ಧಿಗೆ ಏನೂ ಮಾಡಲಿಲ್ಲ ಎಂದು ದೂರಿದರು.

'ಕಾಂಗ್ರೆಸ್ಸಿನ ಆಡಳಿತ ಅವಧಿಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಹಗರಣಗಳು ನಡೆದವು. ಆದರೆ ಬಿಜೆಪಿಯ ಆಡಳಿತ ಅವಧಿಯಲ್ಲಿ ಅಂಥದ್ದು ಆಗುವುದಿಲ್ಲ. ಹಗರಣಗಳು ನಡೆಯದೆ ಇರುವ ಕಾರಣಕ್ಕೆ ಉಳಿಯುವ ಹಣವನ್ನು ಬಡವರಿಗೆ ಉಚಿತವಾಗಿ ಆಹಾರಧಾನ್ಯ ನೀಡಲು ಬಳಸಲಾಗುತ್ತದೆ' ಎಂದರು.

ಮೋದಿ ಮಾತು

- ನಮ್ಮ ಸರ್ಕಾರದ ನೀತಿಗಳ ಕಾರಣದಿಂದಾಗಿ ಮೊಬೈಲ್ ಸೇವಾ ಶುಲ್ಕ, ಮೊಬೈಲ್ ಫೋನ್ ಬೆಲೆ ಕಡಿಮೆ ಇದೆ. ಇದರಿಂದಾಗಿ ಜನರಿಗೆ ಹಣ ಉಳಿಯುತ್ತಿದೆ. ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಿದ್ದರೆ ಡೇಟಾ ಸೇವೆ ಸೇರಿದಂತೆ ಮೊಬೈಲ್ ಸೇವೆಗಳಿಗೆ ನೀಡುವ ಶುಲ್ಕವು ತಿಂಗಳಿಗೆ ₹4,000ರಿಂದ ₹5,000 ಆಗಿರುತ್ತಿತ್ತು.
- ನಮ್ಮ ಸರ್ಕಾರ ಆರಂಭಿಸಿದ ಜನೌಷಧಿ ಕೇಂದ್ರಗಳು ಶೇಕಡ 80ರಷ್ಟು ರಿಯಾಯಿತಿ ದರದಲ್ಲಿ ಔಷಧಿಗಳನ್ನು ಒದಗಿಸುತ್ತಿವೆ. ದೇಶದ ಬಡಜನರ ₹25 ಸಾವಿರ ಕೋಟಿ ಹಣವನ್ನು ಉಳಿಸಿವೆ.
- ದೇಶದ ರೈತರಿಗೆ ₹300ಕ್ಕೆ ಒಂದು ಚೀಲ ಯೂರಿಯಾ ಸಿಗುತ್ತಿದೆ. ಅಮೆರಿಕದ ಬೆಳೆಗಾರರು ಕೊಡುವ ಹಣಕ್ಕಿಂತ ಹತ್ತು ಪಟ್ಟು ಕಡಿಮೆ ಇದು.

ನುಡಿ–ಕಿಡಿ

ಬುಡಕಟ್ಟು ಸಮುದಾಯವು ಪುರುಷೋತ್ತಮ ರಾಮನನ್ನು 'ಜೋಪಾನ' ಮಾಡಿತು. ನಾವು ಆ ಸಮುದಾಯದ ಆರಾಧಕರು. ಹಾಗಾಗಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವು ಬುಡಕಟ್ಟು ಸಮುದಾಯದ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ ರಚಿಸಿತ್ತು. ಆದರೆ, ಅವರ ಅಭ್ಯುದಯವನ್ನು ಕಾಂಗ್ರೆಸ್ ಕಡೆಗಣಿಸಿತು. **ನರೇಂದ್ರ ಮೋದಿ,** ಪ್ರಧಾನಿ

ಮಿಜೋರಾಂನಲ್ಲಿ ಶಾಂತಿ, ಸ್ಥಿರತೆ ಸ್ಥಾಪಿಸಲು ಕಾಂಗ್ರೆಸ್ ಶ್ರಮವಹಿಸಿದೆ. ಮಿಜೋ ಸಂಸ್ಕೃತಿ, ಮೌಲ್ಯಗಳು ಮತ್ತು ಜೀವನ ಪದ್ಧತಿಯನ್ನು ನಾಶಪಡಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಟೊಂಕ ಕಟ್ಟಿ ನಿಂತಿವೆ. ರಾಜ್ಯದ ಭೂಮಿ ಮತ್ತು ಅರಣ್ಯವನ್ನು ವಶಕ್ಕೆ ತೆಗೆದುಕೊಂಡು ತಮ್ಮ ಆಪ್ತ ಸ್ನೇಹಿತರಿಗೆ ಉಡುಗೊರೆಯಾಗಿ ನೀಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಯಸಿದೆ
ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಚುನಾವಣಾ ಕಣದಲ್ಲಿ

- **ಮೋದಿ ವಿಡಿಯೊ ಸಂದೇಶ:** ರಾಜ್ಯವನ್ನು ಮಾರ್ವೆಲ್ಲಸ್ ಮಿಜೋರಾಂ (ಅದ್ಭುತ ಮಿಜೋರಾಂ) ಆಗಿ ಪರಿವರ್ತಿಸಲು ಬಿಜೆಪಿ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ. ಮಿಜೋರಾಂ ಜನ ತಮ್ಮ ಕುಟುಂಬದ ಸದಸ್ಯರಿದ್ದಂತೆ ಎಂದಿರುವ ಅವರು, ರೈಲ್ವೆ, ಆರೋಗ್ಯ, ಕ್ರೀಡೆ ಹಾಗೂ ಇತರ ಕ್ಷೇತ್ರಗಳಲ್ಲಿ ರಾಜ್ಯದ ಅಭಿವೃದ್ಧಿಗೆ ಕೇಂದ್ರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದಿದ್ದಾರೆ.
- **ಜೈನಮುನಿ ಭೇಟಿ:** ಛತ್ತೀಸಗಢದ ಡೊಂಗರ್‌ಗಢಕ್ಕೆ ಭಾನುವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಜೈನಮುನಿ ಆಚಾರ್ಯ ವಿದ್ಯಾಸಾಗರ ಮಹಾರಾಜ್ ಅವರನ್ನು ಭೇಟಿ ಮಾಡಿದರು. ಬಳಿಕ, ಮಾತೆ ಬಾಮ್ಲೇಶ್ವರಿ ದೇವಸ್ಥಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ರಾಜ್ಯ ಬಿಜೆಪಿ ಅಧ್ಯಕ್ಷ ರಮಣ್ ಸಿಂಗ್ ಅವರು ಮೋದಿ ಜೊತೆ ಇದ್ದರು.
- **5ನೇ ಪಟ್ಟಿ ಬಿಡುಗಡೆ:** ರಾಜಸ್ಥಾನ ಬಿಜೆಪಿ ತನ್ನ ಅಭ್ಯರ್ಥಿಗಳ ಐದನೇ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. ಅಭ್ಯರ್ಥಿಗಳಲ್ಲಿ ಕೆಲವರು ಇದೇ ಮೊದಲ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಮಾವ್ಲಿ ಕ್ಷೇತ್ರದ ಹಾಲಿ ಶಾಸಕ ಧರ್ಮನಾರಾಯಣ್ ಜೋಶಿ ಅವರಿಗೆ ಈ ಬಾರಿ ಟಿಕೆಟ್ ನೀಡಿಲ್ಲ. ಬದಲಾಗಿ ಕೆ.ಜಿ. ಪಾಲಿವಾನ್ ಅವರನ್ನು ಕಣಕ್ಕಿಳಿಸಲಾಗಿದೆ. ಸಿವಿಲ್ ಲೈನ್ಸ್, ಆದರ್ಶ ನಗರ ಕ್ಷೇತ್ರಗಳಲ್ಲೂ ಹೊಸಬರಿಗೆ ಅವಕಾಶ ನೀಡಲಾಗಿದೆ.
- **'ಆರ್ಥಿಕ ಅಸಮಾನತೆ ಹೆಚ್ಚಳ':** ಉಚಿತ ಆಹಾರ ಧಾನ್ಯ ವಿತರಣೆ ಯೋಜನೆಯನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿರುವುದು ದೇಶದಲ್ಲಿ ಆರ್ಥಿಕ ಸಂಕಷ್ಟ ದೊಡ್ಡ ಪ್ರಮಾಣದಲ್ಲಿ ಮುಂದುವರೆದಿರುವುದನ್ನು ಸೂಚಿಸುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಹೇಳಿದ್ದಾರೆ. ಅಗತ್ಯವಸ್ತುಗಳ ಬೆಲೆ ಗಗನಕ್ಕೇರಿದೆ. ದೇಶದ ಬಹುತೇಕರ ಆದಾಯವು ಅವುಗಳನ್ನು ಕೊಳ್ಳುವಷ್ಟು ಹೆಚ್ಚಾಗಿಲ್ಲ. ದೇಶದಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ ಎಂಬುದನ್ನು ಇದು ತೋರುತ್ತದೆ ಎಂದಿದ್ದಾರೆ.

ರಾಮ ಮಂದಿರ ರಾಮರಾಜ್ಯಕ್ಕೆ ನಾಂದಿ: ಯೋಗಿ

ಸುಕ್ಮಾ (ಛತ್ತೀಸಗಢ) (ಪಿಟಿಐ): 'ಅಯೋಧ್ಯೆಯ ರಾಮ ಮಂದಿರ ನಿರ್ಮಾಣದಿಂದ ದೇಶದಲ್ಲಿ ರಾಮರಾಜ್ಯ ಆರಂಭವಾಗಲಿದೆ. ಇಲ್ಲಿ ಜಾತಿ ಮತ್ತು ಧರ್ಮದ ಆಧಾರದ ಮೇಲೆ ತಾರತಮ್ಯ ಇರುವುದಿಲ್ಲ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪ್ರತಿಪಾದಿಸಿದರು.

ಛತ್ತೀಸಗಢದ ಕೋಂಟಾದಲ್ಲಿ ಹಮ್ಮಿಕೊಳ್ಳಲಾಗಿದ್ದ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದಲ್ಲಿ ಒಂಬತ್ತೂವರೆ ವರ್ಷಗಳ ಆಡಳಿತ ಅವಧಿಯಲ್ಲಿ ಬಡವರಿಗೆ ವಸತಿ, ಆರೋಗ್ಯ ವಿಮೆಯಂತಹ ವಿವಿಧ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ, ರಾಮರಾಜ್ಯಕ್ಕೆ ಅಡಿಪಾಯ ಹಾಕಿದ್ದಾರೆ' ಎಂದರು.

ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಆದಿತ್ಯನಾಥ್, 'ಲವ್ ಜಿಹಾದ್ ಮತ್ತು ಮತಾಂತರಕ್ಕೆ ಇಲ್ಲಿನ ಸರ್ಕಾರವೇ ಕುಮ್ಮಕ್ಕು ನೀಡಿದೆ' ಎಂದರು.

ರೈತರ ಸಾಲ ಮನ್ನಾ, ಜಾತಿಗಣತಿ: 'ಕೈ' ಭರವಸೆ

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದೆ. ಜಾತಿಗಣತಿ ನಡೆಸುವ, ರೈತರ ಸಾಲ ಮನ್ನಾ ಮಾಡುವ, ಕ್ವಿಂಟಲ್ ಭತ್ತವನ್ನು ₹3,200ಕ್ಕೆ ಖರೀದಿಸುವ ಮತ್ತು ಅಡುಗೆ ಅನಿಲ ಸಿಲಿಂಡರ್‌ಗೆ ಸಬ್ಸಿಡಿ ನೀಡುವ ಭರವಸೆ ಇತ್ತಿದೆ.

ಮೊದಲ ಹಂತದ ಮತದಾನ ನಡೆಯುವ ಎರಡು ದಿನಗಳ ಮೊದಲು ರಾಯಪುರ, ರಾಜನಂದಗಾಂವ್, ಜಗದಾಲಪುರ, ಬಿಲಾಸಪುರ, ಅಂಬಿಕಾಪುರ ಮತ್ತು ಕವರ್ಧಾದಲ್ಲಿ 'ಭರವಸೆಯ ಘೋಷಣಾ ಪತ್ರ 2023-28' ಶೀರ್ಷಿಕೆಯ ಪ್ರಣಾಳಿಕೆ ಬಿಡುಗಡೆ ಮಾಡಲಾಯಿತು.

ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ರಾಜನಂದಗಾಂವ್‌ನಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು. ಪಕ್ಷದ ರಾಜ್ಯ ಉಸ್ತುವಾರಿ ಕುಮಾರಿ ಸೆಲ್ಜಾ ಅವರು ರಾಜಧಾನಿ ರಾಯಪುರದಲ್ಲಿ ಅನಾವರಣಗೊಳಿಸಿದರು.

ರೈತರ ಸಾಲ ಮನ್ನಾ, ಜಾತಿಗಣತಿ, ಎಕರೆಗೆ 20 ಕ್ವಿಂಟಲ್ ಭತ್ತ ಖರೀದಿ, ಶಿಶುವಿಹಾರದಿಂದ ಸ್ನಾತಕೋತ್ತರ ಪದವಿವರೆಗೆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಸೇರಿದಂತೆ ಕಾಂಗ್ರೆಸ್ ನಾಯಕರು ಪ್ರಚಾರದ ವೇಳೆ ನೀಡಿದ ಹಲವು ಭರವಸೆಗಳನ್ನು ಪ್ರಣಾಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಬಘೇಲ್ ಅವರು ಮಾತನಾಡಿ, 'ಭತ್ತ ಬೆಳೆಗಾರರಿಗೆ ಪ್ರಸ್ತುತ ರಾಜೀವ್ ಗಾಂಧಿ ನ್ಯಾಯ್ ಯೋಜನೆಯ ಅಡಿ ನೀಡಲಾಗುತ್ತಿರುವ ಇನ್‌ಪುಟ್ ಸಬ್ಸಿಡಿ ಸೇರಿದಂತೆ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹3,200 ನೀಡಲಾಗುವುದು. ತೆಂಡು ಎಲೆ ಸಂಗ್ರಹಿಸುವವರಿಗೆ ವಾರ್ಷಿಕ ₹4,000 ಬೋನಸ್ ನೀಡಲಾಗುವುದು' ಎಂದು ಅವರು ಹೇಳಿದರು.

'ತಾಯಂದಿರು ಮತ್ತು ಸಹೋದರಿಯರಿಗೆ ಮಹತಾರಿ ನ್ಯಾಯ್ ಯೋಜನೆ ಪ್ರಾರಂಭಿಸಲಾಗುವುದು. ಇದರ ಅಡಿ ಎಲ್ಲಾ ಆದಾಯ ವರ್ಗಗಳಿಗೆ ಸೇರಿದ ಮಹಿಳೆಯರಿಗೆ ಪ್ರತಿ ಅಡುಗೆ ಅನಿಲ ಸಿಲಿಂಡರ್‌ಗೆ ₹500 ಸಬ್ಸಿಡಿ ನೀಡಲಾಗುವುದು. ಸಬ್ಸಿಡಿ ಮೊತ್ತವನ್ನು ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗುವುದು' ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡರೆ ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳು ಮುಂದುವರಿಯುತ್ತವೆ ಎಂದರು.

90 ಸದಸ್ಯ ಬಲದ ವಿಧಾನಸಭೆಗೆ ನವೆಂಬರ್ 7 ಮತ್ತು 17ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ.

ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ (ಎಡದಿಂದ ಮೂರನೇಯವರು) ಬಿಡುಗಡೆ ಮಾಡಿದರು —ಪಿಟಿಐ ಚಿತ್ರ

'ರಾಹುಲ್‌ರಂತೆ ಭರವಸೆಗಳೂ ವಿಫಲ'

ಭೋಪಾಲ್ (ಪಿಟಿಐ): ಹಿಮಾಚಲ ಪ್ರದೇಶ, ರಾಜಸ್ಥಾನ, ಕರ್ನಾಟಕದಲ್ಲಿ ಕಾಂಗ್ರೆಸ್ ನೀಡಿದ ಭರವಸೆಗಳು ಪಕ್ಷದ ನಾಯಕ ರಾಹುಲ್ ಗಾಂಧಿ ಅವರಂತೆಯೇ ವೈಫಲ್ಯ ಕಂಡಿವೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ವ್ಯಂಗ್ಯವಾಡಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆ ವೇಳೆ ನೀಡಿದ್ದ ಭರವಸೆಗಳನ್ನು ಈಡೇರಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಸರ್ಕಾರವು 10 ದಿನಗಳಲ್ಲಿ ₹2 ಲಕ್ಷ ವರೆಗಿನ ಕೃಷಿ ಸಾಲ ಮನ್ನಾ ಜಾರಿ ಮಾಡದಿದ್ದರೆ ಮುಖ್ಯಮಂತ್ರಿ ಬದಲಾವಣೆ, ನಿರುದ್ಯೋಗ ಭತ್ಯೆಯಾಗಿ ₹4,000 ಎಂಬ ಭರವಸೆಗಳನ್ನು ರಾಹುಲ್ ನೀಡಿದ್ದರು. ಆದರೆ, ಈ ಘೋಷಣೆಗಳು 15 ತಿಂಗಳ ಆಡಳಿತದಲ್ಲಿ (2018ರ ಡಿಸೆಂಬರ್ ಮತ್ತು 2020ರ ಮಾರ್ಚ್‌ವರೆಗಿನ ಕಮಲ್ ನಾಥ್ ಅಧಿಕಾರ ಅವಧಿ) ಜಾರಿಗೆ ಬಂದಿಲ್ಲ ಎಂದು ಠಾಕೂರ್ ಆರೋಪಿಸಿದ್ದಾರೆ.

'ಕಾಂಗ್ರೆಸ್ ಅಧಿಕಾರದಲ್ಲಿರುವ ಕರ್ನಾಟಕ, ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶದಲ್ಲಿ ಇಂತಹ ಭರವಸೆಗಳು ವಿಫಲವಾಗಿವೆ. ಹಿಮಾಚಲ ಪ್ರದೇಶದಲ್ಲಿ 22.50 ಲಕ್ಷ ಮಹಿಳೆಯರಿಗೆ ತಿಂಗಳಿಗೆ ₹1,500 ಕೊಡುವ ಭರವಸೆಯನ್ನು ಪಕ್ಷ ನೀಡಿತ್ತು. ಪಕ್ಷ ಅಧಿಕಾರಕ್ಕೆ ಬಂದು 10 ತಿಂಗಳು ಕಳೆದರೂ ಅದನ್ನು ಜಾರಿಗೆ ತಂದಿಲ್ಲ. ಒಂದು ಲಕ್ಷ ಉದ್ಯೋಗ ಸೃಷ್ಟಿಯ ಭರವಸೆ ನೀಡಿದ್ದರು. ಆದರೆ, ಈವರೆಗೆ 1,000 ಉದ್ಯೋಗಗಳನ್ನೂ ಸೃಷ್ಟಿಸಿಲ್ಲ' ಎಂದು ಅವರು ಹೇಳಿದ್ದಾರೆ. ರಾಜಸ್ಥಾನದಲ್ಲಿ ಮಹಿಳೆಯರ ಮೇಲೆ ಅತಿ ಹೆಚ್ಚು ದೌರ್ಜನ್ಯಗಳು ನಡೆದಿವೆ ಎಂದು ಸಚಿವರು ಆರೋಪಿಸಿದ್ದಾರೆ.

'ಮುಸ್ಲಿಮರು, ಯಾದವರ ಸಂಖ್ಯೆ ಹೆಚ್ಚು ತೋರಿಸಲಾಗಿದೆ'

ಮುಜಫ್ಫರಪುರ (ಬಿಹಾರ): ಬಿಹಾರ ಸರ್ಕಾರ ನಡೆಸಿರುವ ಜಾತಿ ಗಣತಿಯು ಓಲೈಕೆ ರಾಜಕಾರಣದ ಒಂದು ಭಾಗ. ರಾಜ್ಯದ ಮುಸ್ಲಿಮರು ಮತ್ತು ಯಾದವ ಸಮುದಾಯದವರ ಸಂಖ್ಯೆಯನ್ನು ಜಾತಿ ಗಣತಿಯ ವರದಿಯಲ್ಲಿ ಉದ್ದೇಶಪೂರ್ವಕವಾಗಿಯೇ ಹೆಚ್ಚು ತೋರಿಸಲಾಗಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದರು.

ರಾಜ್ಯದ ಮುಜಫ್ಫರಪುರದ ಪತಾಹಿಯಲ್ಲಿ ಅವರು ಸಾರ್ವಜನಿಕ ರ್‍ಯಾಲಿ ನಡೆಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ಮುಸ್ಲಿಮರ ತುಷ್ಟೀಕರಣ ನಡೆಸುತ್ತಿದೆ ಎಂದರು.

'ರಾಜ್ಯದಲ್ಲಿ ಜಾತಿ ಗಣತಿಗೆ ಆದೇಶ ನೀಡಿದ ವೇಳೆ ಬಿಜೆಪಿಯು ಜೆಡಿಯು ಜೊತೆ ಅಧಿಕಾರ ಹಂಚಿಕೊಂಡಿತ್ತು. ಆದರೆ, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರ ಒತ್ತಡಕ್ಕೆ ಮಣಿದು ಈ ಕುರಿತು ನಿತೀಶ್ ಏನು ಮಾಡುತ್ತಾರೆ ಎಂಬುದರ ಬಗ್ಗೆ ನಮಗೆ ಸುಳಿವಿರಲಿಲ್ಲ. ಯಾದವರು ಮತ್ತು ಮುಸ್ಲಿಮರ ಸಂಖ್ಯೆ ಹೆಚ್ಚಿದೆ ಎಂದು ತೋರಿಸಲಾಗಿದೆ. ಈ ಮೂಲಕ, ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮತ್ತು ಅತ್ಯಂತ ಹಿಂದುಳಿದ ವರ್ಗಗಳಿಗೆ (ಇಬಿಸಿ) ಅನ್ಯಾಯ ಮಾಡಲಾಗಿದೆ' ಎಂದು ಅಮಿತ್ ಶಾ ಅವರು ಹೇಳಿದರು.

ಸಾರ್ವಭೌಮತೆ ಏಕಮುಖ ಆಗಿರಬಾರದು: ಜೈಶಂಕರ್

'ರಾಜತಾಂತ್ರಿಕ ಚರ್ಚೆಗೆ ಮಾರ್ಗವಿದೆ'

ಎಸ್.ಜೈಶಂಕರ್

ನವದೆಹಲಿ (ಪಿಟಿಐ): ಭಾರತ ಮತ್ತು ಕೆನಡಾ ನಡುವಿನ ರಾಜತಾಂತ್ರಿಕ ವಿವಾದವನ್ನು ಇತ್ಯರ್ಥಪಡಿಸಿಕೊಳ್ಳಲು ರಾಜತಾಂತ್ರಿಕ ಹಂತದಲ್ಲಿ ಚರ್ಚೆಗೆ ಅವಕಾಶಗಳಿವೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಪ್ರತಿಪಾದಿಸಿದ್ದಾರೆ.

'ಉಭಯ ದೇಶಗಳು ಸಂಪರ್ಕದಲ್ಲಿದ್ದು, ವಿವಾದ ಬಗೆಹರಿಸಿಕೊಳ್ಳಲು ಮಾರ್ಗೋಪಾಯಗಳನ್ನು ಗುರುತಿಸುವ ವಿಶ್ವಾಸವಿದೆ' ಎಂದರು. ಅದೇ ಸಂದರ್ಭದಲ್ಲಿ 'ದೇಶದ ಸಾರ್ವಭೌಮತೆ ಮತ್ತು ಸೂಕ್ಷ್ಮತೆ' ಏಕಮುಖವಾಗಿರಬಾರದು' ಎಂದೂ ಜೈಶಂಕರ್ ಪ್ರತಿಪಾದಿಸಿದರು.

'ನನ್ನ ಪ್ರಕಾರ, ರಾಜತಾಂತ್ರಿಕ ಹಂತದ ಚರ್ಚೆಗೆ ಅವಕಾಶಗಳಿವೆ. ಕೆನಡಾದ ವಿದೇಶಾಂಗ ಸಚಿವರು ಇದೇ ಅಭಿಪ್ರಾಯ ಹೊಂದಿದ್ದಾರೆ ಎಂದು ತಿಳಿಸಿದ್ದು, ನಾವು ಸಂಪರ್ಕದಲ್ಲಿದ್ದೇವೆ' ಎಂದು ಹೇಳಿದರು.

'ಆದರೆ, ದೇಶದ ಸಾರ್ವಭೌಮತೆ ಮತ್ತು ಸೂಕ್ಷ್ಮತೆ ಎಂಬುದು ಏಕಮುಖವಾಗಿರಬಾರದು. ಅವರಿಗೆ ತಮ್ಮದೇ ಆದ ಆತಂಕಗಳು ಇರಬಹುದು. ಯಾವುದೇ ರಾಷ್ಟ್ರದ ಶಾಸನಬದ್ಧ ಕಾಳಜಿ ಕುರಿತು ಮಾತನಾಡುವುದಾಗಿ ನಾನು ಎಂದಿಗೂ ಹೇಳಿಲ್ಲ' ಎಂದರು.

ಆರೋಪ ಸಮರ್ಥಿಸುವ ಸಾಕ್ಷ್ಯ ಎಲ್ಲಿದೆ: ಭಾರತದ ರಾಯಭಾರಿ ವರ್ಮಾ ಪ್ರಶ್ನೆ

ಒಟ್ಟಾವ (ಪಿಟಿಐ): ಕೆನಡಾದ ಸಿಖ್ ಪ್ರತ್ಯೇಕವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಕುರಿತ ತನ್ನ ಆರೋಪಗಳಿಗೆ ಸಾಕ್ಷ್ಯ ಒದಗಿಸಬೇಕು ಎಂದು ಕೆನಡಾದಲ್ಲಿ ಭಾರತದ ರಾಯಭಾರಿ ಆಗ್ರಹಪಡಿಸಿದ್ದಾರೆ.

ಗ್ಲೋಬ್ ಅಂಡ್ ಮೇಲ್ ಪತ್ರಿಕೆಗೆ ಸಂದರ್ಶನದಲ್ಲಿ ಭಾರತದ ರಾಯಭಾರಿ ಸಂಜಯ್ ಕುಮಾರ್ ವರ್ಮಾ, 'ತನಿಖೆಗೆ ಸಹಕಾರ ನೀಡಲು ನಿರ್ದಿಷ್ಟ ಮಾಹಿತಿಗಳನ್ನೇ ತನಿಖಾಧಿಕಾರಿಗಳು ಒದಗಿಸಿಲ್ಲ' ಎಂದಿದ್ದಾರೆ.

'ಸಾಕ್ಷ್ಯ ಎಲ್ಲಿದೆ, ತನಿಖೆ ಅಂತಿಮ ಹಂತಕ್ಕೆ ಬಂದಿದೆಯೇ? ನಾನು ಈಗ ತನಿಖಾ ಪ್ರಕ್ರಿಯೆಗೇ ಕಳಂಕ ತಗುಲಿದೆ ಎಂದು ಹೇಳಬಯಸುತ್ತೇನೆ' ಎಂದು ವರ್ಮಾ ಅವರ ಹೇಳಿಕೆಯನ್ನು ಉಲ್ಲೇಖಿಸಿ ಪತ್ರಿಕೆ ವರದಿ ಮಾಡಿದೆ.

'ನಿಜ್ಜಾರ್ ಹತ್ಯೆ ಹಿಂದೆ ಭಾರತ ಅಥವಾ ಭಾರತೀಯ ಏಜೆಂಟರಿದ್ದಾರೆ' ಎಂದು ಹೇಳಲು ಉನ್ನತ ಮಟ್ಟದ ಕೆಲವರಿಂದ ನಿರ್ದೇಶನವಿರಬಹುದು' ಎಂದರು. ಆದರೆ, ವರ್ಮಾ ಯಾರ ಹೆಸರನ್ನು ಉಲ್ಲೇಖಿಸಿಲ್ಲ.

ಹಳ್ಳಿ ಒಂದು, ಇಬ್ಬರು ಶಾಸಕರು!

ಅಂಜೋರಾ (ಛತ್ತೀಸಗಢ) (ಪಿಟಿಐ): ಐದು ಸಾವಿರ ಜನಸಂಖ್ಯೆ ಹೊಂದಿರುವ ಅಂಜೋರಾ ಗ್ರಾಮವು ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಬಹಳ ಜನರ ಗಮನ ಸೆಳೆಯುತ್ತಿದೆ. ಎರಡು ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಮತ ಯಾಚಿಸಲು ಈ ಗ್ರಾಮಕ್ಕೆ ಭೇಟಿ ನೀಡುತ್ತಿದ್ದಾರೆ.

ದುರ್ಗ ಮತ್ತು ರಾಜನಂದಗಾಂವ್ ಜಿಲ್ಲೆಗಳ ನಡುವಿನ ಗಡಿಯಲ್ಲಿದೆ ಅಂಜೋರಾ. ಗ್ರಾಮದ ರಸ್ತೆಯ ಒಂದು ಬದಿಯ ಮನೆಗಳು ರಾಜನಂದಗಾಂವ್ ಕ್ಷೇತ್ರದ ವ್ಯಾಪ್ತಿಗೆ ಬಂದರೆ, ಇನ್ನೊಂದು ಬದಿಯಲ್ಲಿರುವ ಮನೆಗಳು ದುರ್ಗ ಗ್ರಾಮೀಣ ಕ್ಷೇತ್ರದ ವ್ಯಾಪ್ತಿಗೆ ಒಳಪಡಲಿವೆ.

ದುರ್ಗ ಮತ್ತು ರಾಜನಂದಗಾಂವ್ ನಗರಗಳ ನಡುವಿನ ಮುಂಬೈ-ಹೌರಾ ರಾಷ್ಟ್ರೀಯ ಹೆದ್ದಾರಿ-53ರಲ್ಲಿ ದುರ್ಗ ಪಟ್ಟಣದಿಂದ ಸುಮಾರು 10 ಕಿ.ಮೀ ದೂರದಲ್ಲಿರುವ ಈ ಗ್ರಾಮವನ್ನು ಅಂಜೋರಾ ಗ್ರಾಮ ಪಂಚಾಯಿತಿ (ರಾಜನಂದಗಾಂವ್) ಮತ್ತು ಅಂಜೋರಾ 'ಕೆಎಚ್ (ಬಿ)' ಗ್ರಾಮ ಪಂಚಾಯಿತಿ (ದುರ್ಗ) ಎಂಬ ಎರಡು ಪಂಚಾಯಿತಿಗಳು ನಿರ್ವಹಿಸುತ್ತವೆ.

ದುರ್ಗ ಗ್ರಾಮೀಣ ಮತ್ತು ರಾಜನಂದಗಾಂವ್ ಕ್ಷೇತ್ರಗಳ ಅಭ್ಯರ್ಥಿಗಳು ಪ್ರಚಾರಕ್ಕಾಗಿ ಗ್ರಾಮಕ್ಕೆ ಭೇಟಿ ನೀಡುತ್ತಿದ್ದಾರೆ.

'ಎರಡೂ ಕ್ಷೇತ್ರಗಳ ಅಭ್ಯರ್ಥಿಗಳು ಪ್ರಚಾರಕ್ಕಾಗಿ ಗ್ರಾಮಕ್ಕೆ ಭೇಟಿ ನೀಡುವುದರಿಂದ ಕೆಲವೊಮ್ಮೆ ಜನರು ಗೊಂದಲಕ್ಕೊಳಗಾಗುತ್ತಾರೆ. ಗ್ರಾಮದಲ್ಲಿ ಅಭ್ಯರ್ಥಿಗಳ ಪೋಸ್ಟರ್‌ಗಳು ಮತ್ತು ಬ್ಯಾನರ್‌ಗಳನ್ನು ಕಾಣಬಹುದು. ಗ್ರಾಮವು ಇಬ್ಬರು ಶಾಸಕರನ್ನು ಆಯ್ಕೆ ಮಾಡುತ್ತದೆ' ಎಂದು ಅಂಜೋರಾ ಪಂಚಾಯತ್ ಸರಪಂಚ ಅಂಜು ಸಾಹು ಹೇಳಿದರು.

'ಗ್ರಾಮವನ್ನು ಬೀದಿಯೊಂದು ವಿಭಜಿಸಿದ್ದರೂ, ಇಲ್ಲಿನ ಜನರು ಶಾಂತಿಯುತ ಸಹಬಾಳ್ವೆ ನಡೆಸುತ್ತಿದ್ದಾರೆ. ಹಬ್ಬಗಳು ಮತ್ತು ಇತರ ಕಾರ್ಯಗಳನ್ನು ಒಟ್ಟಿಗೆ ಆಚರಿಸುತ್ತಾರೆ. ತಂದೆ ಮನೆ ಅಂಜೋರಾ ಬಿ ಪ್ರದೇಶದಲ್ಲಿದೆ, ಅವರು ದುರ್ಗ ಗ್ರಾಮೀಣ ಸ್ಥಾನದ ಅಭ್ಯರ್ಥಿಗೆ ಮತ ಚಲಾಯಿಸಿದರೆ, ಅತ್ತೆ ಮತ್ತು ಮಾವ ರಾಜನಂದಗಾಂವ್ ಕ್ಷೇತ್ರದ ಅಭ್ಯರ್ಥಿಗೆ ಮತ ಚಲಾಯಿಸುತ್ತಾರೆ' ಎಂದು ಕಾಂಗ್ರೆಸ್ ಸ್ಥಳೀಯ ನಾಯಕಿ ಸಾಹು ಹೇಳಿದರು.

16 ವಿದ್ಯಾರ್ಥಿಗಳಿಗೆ ನೋಟಿಸ್

ನವದೆಹಲಿ (ಪಿಟಿಐ): ಜವಾಹರ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಕುಲಪತಿ ನಿವಾಸದ ಹೊರಗೆ ಪ್ರತಿಭಟನೆ ನಡೆಸಿದ್ದಕ್ಕಾಗಿ ವಿಚಾರಣೆಗೆ ಹಾಜರಾಗುವಂತೆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ ನಾಲ್ವರು ಪ್ರತಿನಿಧಿಗಳು ಮತ್ತು 12 ಹಾಸ್ಟೆಲ್‌ಗಳ ಅಧ್ಯಕ್ಷರಿಗೆ ನೋಟಿಸ್ ಜಾರಿಯಾಗಿದೆ.

ನೋಟಿಸ್ ಜಾರಿಯಾಗಿರುವ 16 ವಿದ್ಯಾರ್ಥಿಗಳು ಇದೇ 7ರಂದು ವಿದ್ಯಾರ್ಥಿ ಶಿಸ್ತುಪಾಲನಾಧಿಕಾರಿ ಸತೀಶ್ ಗರಗೋಟಿ ಅವರ ಎದುರು ವಿಚಾರಣೆಗೆ ಹಾಜರಾಗಬೇಕಿದೆ.

ಕಳೆದ ಸೆಪ್ಟೆಂಬರ್ 19ರಂದು ಕುಲಪತಿ ನಿವಾಸದ ಎದುರು ನಡೆದ ಪ್ರತಿಭಟನೆಯಲ್ಲಿ ಈ ವಿದ್ಯಾರ್ಥಿಗಳು ಭಾಗಿಯಾಗಿದ್ದ ಬಗ್ಗೆ ವಿ.ವಿಯ ಮುಖ್ಯ ಭದ್ರತಾ ಅಧಿಕಾರಿಗೆ ಸಲ್ಲಿಸಿದ ದೂರು ಆಧರಿಸಿ, ವಿಚಾರಣೆಗೆ ಹಾಜರಾಗಲು ನೋಟಿಸ್ ಜಾರಿ ಮಾಡಲಾಗಿದೆ.

'ಕನಿಷ್ಠ ಐದು ಹಾಸ್ಟೆಲ್‌ಗಳಲ್ಲಿ ಹಲವು ದಿನಗಳಿಂದ ನೀರು ಸರಬರಾಜು ಸ್ಥಗಿತಗೊಂಡಿದ್ದಕ್ಕೆ ಜೆಎನ್‌ಯುಎಸ್‌ಯು ಮತ್ತು ಹಾಸ್ಟೆಲ್ ಅಧ್ಯಕ್ಷರು ಕುಲಪತಿಗಳ ನಿವಾಸದ ಎದುರು ಪ್ರತಿಭಟನೆ ನಡೆಸಿದ್ದರು' ಎಂದು ನೋಟಿಸ್ ಸ್ವೀಕರಿಸಿದ ವಿದ್ಯಾರ್ಥಿಗಳಲ್ಲಿ ಒಬ್ಬರಾದ, ಜೆಎನ್‌ಯುಎಸ್‌ಯು ಅಧ್ಯಕ್ಷೆ ಆಯಿಷಿ ಘೋಷ್ ಹೇಳಿದ್ದಾರೆ.

ವಿಶ್ವ ಹಿಂದೂ ಪರಿಷತ್‌ನ ಕಾರ್ಯಕರ್ತರು ಅಯೋಧ್ಯೆಯ ರಾಮ ಮಂದಿರದಲ್ಲಿ ಪೂಜಿಸಲಾದ ಅಕ್ಷತೆಯನ್ನು ಹೊತ್ತು ಸಾಗಿದರು —ಪಿಟಿಐ ಚಿತ್ರ

ರಾಮ ಮೂರ್ತಿ ಪ್ರತಿಷ್ಠಾಪನೆ ವಿಧಿವಿಧಾನ ಆರಂಭ

ಅಯೋಧ್ಯೆ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆಯ ವಿಧಿವಿಧಾನಗಳು ಅಕ್ಷತಾ ಪೂಜೆಯನ್ನು ನೆರವೇರಿಸುವ ಮೂಲಕ ಭಾನುವಾರ ಆರಂಭಗೊಂಡವು.

'ಅಕ್ಷತಾ ಪೂಜೆಯನ್ನು ದೇವಸ್ಥಾನದ ರಾಮ ದರ್ಬಾರ್‌ನಲ್ಲಿ ನೆರವೇರಿಸಲಾಯಿತು.

'100 ಕ್ವಿಂಟಲ್ ಅಕ್ಕಿಯನ್ನು ಅರಿಸಿನ ಮತ್ತು ದೇಸಿ ತುಪ್ಪದಲ್ಲಿ ಮಿಶ್ರಣ ಮಾಡಿ ಪೂಜೆ ನಡೆಸಲಾಯಿತು' ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ.

'ದೇಶದ 45 ಭಾಗಗಳಿಂದ ಇಲ್ಲಿಗೆ ಬಂದಿರುವ ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) 90 ಕಾರ್ಯಕರ್ತರಿಗೆ ಪೂಜೆ ಮಾಡಲಾದ ಅಕ್ಷತೆಯನ್ನು ವಿತರಿಸಲಾಗುವುದು. ಈ ಅಕ್ಷತೆಯನ್ನು ಜನವರಿ 22ರೊಳಗಾಗಿ ಅವರು ದೇಶದಾದ್ಯಂತ ಸಂಚರಿಸಿ ವಿತರಿಸುವರು' ಎಂದು ತಿಳಿಸಿದೆ.

'ಪೂಜೆ ಮಾಡಲಾದ ಅಕ್ಷತೆಯನ್ನು ದೇಶದ ಐದು ಲಕ್ಷ ಹಳ್ಳಿಗಳಲ್ಲಿ ಕಾರ್ಯಕರ್ತರು ಹಂಚಲಿದ್ದಾರೆ' ಎಂದು ತಿಳಿಸಿದೆ.

ಗಾಜಾ ಮೇಲೆ 'ಅಣು ಬಾಂಬ್' ಹೇಳಿಕೆ: ಸಚಿವ ಅಮಾನತು

ಜೆರುಸಲೇಂ (ಪಿಟಿಐ/ರಾಯಿಟರ್ಸ್): ಹಮಾಸ್ ಆಡಳಿತದ ಗಾಜಾ ಪಟ್ಟಿಯ ಮೇಲೆ ಅಣು ಬಾಂಬ್ ಹಾಕುವುದು ಒಂದೇ ಆಯ್ಕೆ ಎಂದು ಇಸ್ರೇಲ್‌ನ ಬಲಪಂಥೀಯ ಓಟ್ಜ್‌ಮಾ ಯೆಹುದಿತ್ ಪಕ್ಷದ ಸಚಿವ ಭಾನುವಾರ ಹೇಳಿಕೆ ನೀಡಿದ್ದಾರೆ.

ಈ ಹೇಳಿಕೆ ನೀಡಿರುವ ಜೆರುಸಲೇಂ ವ್ಯವಹಾರಗಳು ಮತ್ತು ಪಾರಂಪಾರಿಕ ಖಾತೆ ಸಚಿವ ಅಮಿಚೈ ಎಲಿಯಾಹು ಅವರನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅನಿರ್ದಿಷ್ಟಾವಧಿಗೆ ಸರ್ಕಾರಿ ಸಭೆಗಳಿಂದ ಅಮಾನತುಗೊಳಿಸಿದ್ದಾರೆ. ಇದನ್ನು ಪ್ರಧಾನಿ ಕಚೇರಿಯು ಖಚಿತಪಡಿಸಿದೆ. ರೇಡಿಯೋ ಸಂದರ್ಶನವೊಂದರಲ್ಲಿ ಸಚಿವ ಅಮಿಚೈ ಎಲಿಯಾಹು ಅವರು ಇಂತಹ ಹೇಳಿಕೆ ನೀಡಿದ್ದು, ಅವರ ಹೇಳಿಕೆಗಳು ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರನ್ನು ಕೆರಳಿಸಿತ್ತು.

'ಕದನ ವಿರಾಮವಿಲ್ಲ': ಹಮಾಸ್ ಉಗ್ರರು ಅ.7ರಂದು ದಾಳಿ ನಡೆಸಿ ಒತ್ತೆ ಇರಿಸಿಕೊಂಡಿರುವ 240ಕ್ಕೂ ಹೆಚ್ಚು ಒತ್ತೆಯಾಳುಗಳನ್ನು ವಾಪಸ್ ಕಳುಹಿಸುವವರೆಗೂ ಗಾಜಾದಲ್ಲಿ ಕದನ ವಿರಾಮ ಘೋಷಣೆ ಇಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಹಮಾಸ್ ಹತ್ತಿಕ್ಕುವ ಪಟ್ಟು ಇನ್ನಷ್ಟು ಬಿಗಿ • ಅಮೆರಿಕ ಮನವಿಯೂ ಕಡೆಗಣನೆ

ಇಸ್ರೇಲ್ ವಾಯುದಾಳಿ: 47 ನಿರಾಶ್ರಿತರ ಸಾವು

ದೇರ್ ಅಲ್-ಬಾಲಾಹ್, ಗಾಜಾ ಪಟ್ಟಿ (ಎ.ಪಿ): ಇಸ್ರೇಲ್‌ನ ಯುದ್ಧ ವಿಮಾನಗಳು ಭಾನುವಾರ ಬೆಳಗಿನ ಜಾವ ಗಾಜಾ ಪಟ್ಟಿಯಲ್ಲಿನ ನಿರಾಶ್ರಿತರ ಶಿಬಿರವನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, ಕನಿಷ್ಠ 47 ಮಂದಿ ಸತ್ತಿದ್ದು, ಇತರೆ 34 ಮಂದಿ ಗಾಯಗೊಂಡಿದ್ದಾರೆ.

ಹಮಾಸ್ ಆಡಳಿತದ ಪ್ರಾಬಲ್ಯವನ್ನು ಕುಗ್ಗಿಸಲು ತೀವ್ರ ದಾಳಿ ಮುಂದುವರಿಯಲಿದೆ ಎಂಬ ಇಸ್ರೇಲ್ ಹೇಳಿಕೆ ಹಿಂದೆಯೇ ಈ ದಾಳಿ ನಡೆದಿದೆ. ನೊಂದವರಿಗೆ ನೆರವಾಗಲು ದಾಳಿಗೆ ಬಿಡುವು ನೀಡಬೇಕು ಎಂಬ ಅಮೆರಿಕದ ಮನವಿಯನ್ನೂ ಈ ಮೂಲಕ ಕಡೆಗಣಿಸಿದೆ.

ಹಮಾಸ್‌ನ ಆರೋಗ್ಯ ಸಚಿವಾಲಯದ ವಕ್ತಾರರ ಹೇಳಿಕೆಯನ್ನು ಆಧರಿಸಿ, ದಾಳಿಯಿಂದ ಕನಿಷ್ಠ 47 ಮಂದಿ ಸತ್ತಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

'ಇದು, ನಿಜವಾಗಿ ನರಮೇಧ. ಇಲ್ಲಿದ್ದ ಎಲ್ಲರೂ ಶಾಂತಿಪ್ರಿಯರು. ಒಬ್ಬರಾದರೂ ಪ್ರತಿರೋಧ ತೋರಿರಲಿಲ್ಲ' ಎಂದು ಶಿಬಿರದಲ್ಲಿದ್ದ ಅರಾಫತ್ ಅಬು ವಾಯುದಾಳಿಯ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದರು.

ಇಸ್ರೇಲ್‌ನ ದಾಳಿ ಹಾಗೂ ಗಾಜಾಪಟ್ಟಿಯಲ್ಲಿನ ಸಾವುಗಳ ವಿರುದ್ಧ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಕ್ರೋಶ ಹೆಚ್ಚಿದೆ. ಕದನವಿರಾಮ ಘೋಷಿಸಲು ಒತ್ತಾಯಿಸಿ ಶನಿವಾರ ವಾಷಿಂಗ್ಟನ್ ಮತ್ತು ಬರ್ಲಿನ್‌ನಲ್ಲಿ ಬೃಹತ್ ಪ್ರತಿಭಟನೆಗಳು ನಡೆದಿವೆ.

ಆದರೆ, ಇಸ್ರೇಲ್ ತನ್ನ ಪಟ್ಟು ಮುಂದುವರಿಸಿದೆ. ದಾಳಿಯ ತೀವ್ರತೆ ತಗ್ಗಿಸಲು ನಿರಾಕರಿಸಿದೆ. ಈ ಪ್ರಾಂತ್ಯದಲ್ಲಿ ಪ್ರವಾಸದಲ್ಲಿರುವ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು, ದಾಳಿಗೆ ಬಿಡುವು ನೀಡಲು ಕೋರಿದ್ದರು. ಆದರೆ, 'ಹಮಾಸ್ ತನ್ನ ಸೇನೆಯ ಮೇಲೆ ಪೂರ್ಣ ಬಲದಿಂದ ದಾಳಿ ನಡೆಸುತ್ತಿದೆ' ಎಂದು ಪ್ರತಿಕ್ರಿಯಿಸಿದ್ದ ಇಸ್ರೇಲ್ ಈ ಮನವಿಯನ್ನು ಕಡೆಗಣಿಸಿತ್ತು.

'ಗಾಜಾದಲ್ಲಿ ಉಳಿದಿರುವ ಪ್ರತಿಯೊಬ್ಬರು ತಮ್ಮ ಜೀವವನ್ನೇ ಅಪಾಯಕ್ಕೆ ದೂಡುತ್ತಿದ್ದಾರೆ' ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರು ನಗರದ ನಿವಾಸಿಗಳಿಗೆ ಸ್ಪಷ್ಟವಾದ ಎಚ್ಚರಿಕೆಯನ್ನು ರವಾನಿಸಿದ್ದಾರೆ. ಗಾಜಾದ ಆರೋಗ್ಯ ಸಚಿವಾಲಯದ ಪ್ರಕಾರ, ಯುದ್ಧದಿಂದಾಗಿ ಒಂದು ತಿಂಗಳಲ್ಲಿ 9,400 ಪ್ಯಾಲೆಸ್ಟೀನಿಯರು ಅಸುನೀಗಿದ್ದಾರೆ.

ಇಸ್ರೇಲ್‌ನ ವಾಯುದಾಳಿಯಿಂದಾಗಿ ಗಾಜಾ ಪಟ್ಟಿಯ ಕೇಂದ್ರಭಾಗದಲ್ಲಿ, ನೆಲಸಮಗೊಂಡಿರುವ ಅಲ್ ಮಘಜಿ ನಿರಾಶ್ರಿತರ ಶಿಬಿರದ ಸ್ಥಳವನ್ನು ಜನರು ಸುತ್ತುವರಿದಿದ್ದರು —ಎಎಫ್‌ಪಿ ಚಿತ್ರ

ಇಸ್ರೇಲ್–ಹಮಾಸ್ ಸಮರ

ಆ್ಯಂಟನಿ ಬ್ಲಿಂಕನ್–ಅಬ್ಬಾಸ್ ಭೇಟಿ

ಗಾಜಾ ಪಟ್ಟಿ (ಎಎಫ್‌ಪಿ): ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್, ಪ್ಯಾಲೆಸ್ಟೀನ್ ಹಿಡಿತದಲ್ಲಿರುವ ಗಾಜಾಪಟ್ಟಿಗೆ ಭೇಟಿ ನೀಡಿದ್ದು, ಪ್ಯಾಲೆಸ್ಟೀನ್ ಅಧ್ಯಕ್ಷರ ಭೇಟಿ ಮಾಡಿ ಪ್ರಸ್ತುತ ಬಿಕ್ಕಟ್ಟು ಕುರಿತು ಚರ್ಚಿಸಿದರು.

ಅಧ್ಯಕ್ಷ ಮಹಮುದ್ ಅಬ್ಬಾಸ್ ಭೇಟಿ ವೇಳೆ, 'ಗಾಜಾದಿಂದ ಪ್ಯಾಲೆಸ್ಟೀನಿಯರ ಬಲವಂತದ ಸ್ಥಳಾಂತರ ಬೇಡ. ಪ್ಯಾಲೆಸ್ಟೀನಿಯರ ವಿರುದ್ಧ ಮೂಲಭೂತವಾದಿಗಳ ಹಿಂಸೆ ಹತ್ತಿಕ್ಕಬೇಕಾಗಿದೆ' ಎಂದು ತಿಳಿಸಿದ್ದಾರೆ.

'ಇಸ್ರೇಲ್ –ಪ್ಯಾಲೆಸ್ಟೀನ್ ಬಿಕ್ಕಟ್ಟಿಗೆ ಸಮಗ್ರ ಪರಿಹಾರ ಸಿಕ್ಕರಷ್ಟೇ ಗಾಜಾಪಟ್ಟಿಯಲ್ಲಿ ಅಧಿಕಾರ ವಹಿಸಿಕೊಳ್ಳಲಾಗುವುದು. ಜೆರುಸಲೇಂ ಪೂರ್ವ ಮತ್ತು ಗಾಜಾ ಪಟ್ಟಿ ಒಳಗೊಂಡ ವೆಸ್ಟ್‌ಬ್ಯಾಂಕ್‌ಗೆ ಸಮಗ್ರ ರಾಜಕೀಯ ಪರಿಹಾರ ಬೇಕಾಗಿದೆ' ಎಂದು ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮುದ್ ಅಬ್ಬಾಸ್ ಹೇಳಿದ್ದಾರೆ.

ಆಹಾರಕ್ಕಾಗಿ ಹಾಹಾಕಾರ

ಗಾಜಾ (ರಾಯಿಟರ್ಸ್): ಗಾಜಾ ನಗರದಲ್ಲಿ ನಿವಾಸಿಗಳಿಗೆ ಅವಶೇಷಗಳಿಂದ ಶವಗಳ ಹೊರತೆಗೆಯುವ ಜೊತೆಗೆ, ನಿತ್ಯದ ಆಹಾರ, ನೀರಿಗೆ ಹುಡುಕಾಟ ನಡೆಸುವುದೇ ಕಾಯಕವಾಗಿದೆ.

ಇಸ್ರೇಲ್ ಸೇನೆಗಳು ಇತ್ತೀಚೆಗೆ ನಿರಾಶ್ರಿತರ ಶಿಬಿರ, ಜನರು ಆಶ್ರಯ ಪಡೆದಿರುವ ಶಾಲೆಗಳ ಗುರಿಯಾಗಿಸಿ ದಾಳಿ ಮಾಡುತ್ತಿದ್ದು, ಸಮಸ್ಯೆ ಇನ್ನಷ್ಟು ಗಂಭೀರವಾಗುತ್ತಿದೆ

ಸುಭಾಷಿತ

ಯಾವುದೇ ಬಂಡವಾಳ ತೊಡಗಿಸುವಿಕೆಯು ಭೂಮಿಯನ್ನು ನಾಶ ಮಾಡುವಂತಿದ್ದರೆ ಅದು ಹೂಡಿಕೆ ಎನಿಸಿಕೊಳ್ಳುವುದಿಲ್ಲ.

-ವಂದನಾ ಶಿವ

ಭ್ರಷ್ಟಾಚಾರ ನಿಗ್ರಹದ ವಿಚಾರದಲ್ಲಿ ವಿಳಂಬ ಧೋರಣೆ ಸಲ್ಲದು

ಭ್ರಷ್ಟಾಚಾರ ಮತ್ತು ದುರಾಡಳಿತದ ಆಪಾದನೆ ಎದುರಿಸುತ್ತಿರುವ ಸರ್ಕಾರಿ ನೌಕರರ ವಿರುದ್ಧ ಕ್ರಮ ಜರುಗಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ಮೃದು ಧೋರಣೆ ಅನುಸರಿಸುತ್ತಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಲಂಚ ಪ್ರಕರಣ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು ಸೇರಿದಂತೆ ಭ್ರಷ್ಟಾಚಾರ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಕಾಲಮಿತಿಯೊಳಗೆ ಅನುಮತಿ ನೀಡದೇ ಆರೋಪಿಗಳಿಗೆ ಅನುಕೂಲಕರವಾಗುವ ರೀತಿಯಲ್ಲಿ ಸಕ್ಷಮ ಪ್ರಾಧಿಕಾರಗಳು ವರ್ತಿಸುತ್ತಿರುವುದಕ್ಕೆ ಲೋಕಾಯುಕ್ತರು ಆಕ್ಷೇಪ ಎತ್ತಿದ್ದಾರೆ. ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿ, ದಂಡನೆಗೆ ಶಿಫಾರಸು ಮಾಡಲಾದ 1,074 ವರದಿಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ದೀರ್ಘಕಾಲದಿಂದ ಬಾಕಿ ಇರಿಸಿಕೊಂಡು ಭ್ರಷ್ಟಾಚಾರಿಗಳಿಗೆ ಅನುಕೂಲ ಮಾಡಿಕೊಡುತ್ತಿರುವುದನ್ನೂ ಅವರು ಬಹಿರಂಗಪಡಿಸಿದ್ದಾರೆ. ವಿಧಾನಸೌಧದಲ್ಲೇ ನಡೆದ ಕಾರ್ಯಾಗಾರದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಎದುರಿನಲ್ಲೇ ಲೋಕಾಯುಕ್ತರು ಈ ಎಲ್ಲ ಮಾಹಿತಿಗಳನ್ನೂ ಹಂಚಿಕೊಂಡಿದ್ದಾರೆ. ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ಹತ್ತಿಕ್ಕಲು ಸ್ವಯಂಪ್ರೇರಿತ ಕ್ರಮಗಳನ್ನು ಕೈಗೊಂಡು, ಆಡಳಿತದಲ್ಲಿ ಸುಧಾರಣೆ ತರಬೇಕಾದುದು ಸರ್ಕಾರದ ಜವಾಬ್ದಾರಿ. ಆದರೆ, ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಸರ್ಕಾರವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ, ಸರ್ಕಾರಿ ನೌಕರರ ಸೇವಾ ನಿಯಮಾವಳಿ ಹಾಗೂ ತನಿಖಾ ಸಂಸ್ಥೆಗಳನ್ನು ಅಣಕಿಸುವಂತೆ ವರ್ತಿಸುತ್ತಿರುವುದನ್ನು ಲೋಕಾಯುಕ್ತರ ಹೇಳಿಕೆಯು ಎತ್ತಿತೋರಿಸುತ್ತದೆ.

ಭ್ರಷ್ಟಾಚಾರವನ್ನು ನಿಗ್ರಹಿಸುವ ವಿಚಾರದಲ್ಲಿ ಯಾವ ಒತ್ತಡಕ್ಕೂ ಮಣಿಯದೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು

ಭ್ರಷ್ಟಾಚಾರ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆಯನ್ನು ಪೂರ್ಣಗೊಳಿಸಿ, ಕಾಲಮಿತಿಯಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಬೇಕು. ಅಷ್ಟೇ ತ್ವರಿತವಾಗಿ ವಿಚಾರಣೆ ಪೂರ್ಣಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು. ಈ ಯಾವುದೇ ಪ್ರಕ್ರಿಯೆಯಲ್ಲಿ ವಿಳಂಬವಾದರೂ ಆರೋಪಿಗಳು ಅದರ ಅನುಕೂಲ ಪಡೆದುಕೊಂಡು, ಕಾನೂನಿನ ಕುಣಿಕೆಯಿಂದ ತಪ್ಪಿಸಿ ಕೊಳ್ಳುವ ಸಾಧ್ಯತೆ ಹೆಚ್ಚು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್-19ಕ್ಕೆ 2018ರಲ್ಲಿ ತಿದ್ದುಪಡಿ ತಂದ ಬಳಿಕ, ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ತನಿಖಾಧಿಕಾರಿಯು ಪ್ರಸ್ತಾವ ಸಲ್ಲಿಸಿದ ದಿನದಿಂದ ಮೂರು ತಿಂಗಳೊಳಗೆ ಸಕ್ಷಮ ಪ್ರಾಧಿಕಾರ ಅನುಮತಿ ನೀಡುವುದು ಕಡ್ಡಾಯ. ಹೆಚ್ಚಿನ ವಿವರಣೆ ಅಗತ್ಯವಿರುವ ಪ್ರಕರಣಗಳಲ್ಲಿ ಮಾತ್ರ ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶ ಇದೆ. ಈ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ಕೂಡ 2022ರ ತೀರ್ಪಿನಲ್ಲಿ ಎತ್ತಿಹಿಡಿದಿದೆ. ಆದರೆ, ಲೋಕಾಯುಕ್ತ ಪೊಲೀಸರು ಸಲ್ಲಿಸುವ ಬಹುತೇಕ ಪ್ರಸ್ತಾವಗಳನ್ನು ಈ ಕಾಲಮಿತಿಗಿಂತ ಹೆಚ್ಚು ಅವಧಿಯವರೆಗೆ ಸಕ್ಷಮ ಪ್ರಾಧಿಕಾರಗಳು ಬಾಕಿ ಇರಿಸಿಕೊಳ್ಳುತ್ತಿವೆ. ಪ್ರಾಥಮಿಕ ತನಿಖೆಯನ್ನು ಪೂರ್ಣಗೊಳಿಸಿದ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ಸಲ್ಲಿಸುವ ಪ್ರಸ್ತಾವಗಳ ವಿಲೇವಾರಿಯಲ್ಲೂ ಸಕ್ಷಮ ಪ್ರಾಧಿಕಾರಗಳು ವಿಳಂಬ ಧೋರಣೆ ಅನುಸರಿಸುತ್ತಿವೆ. ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ಕೋರುವ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರಗಳು ಪರ್ಯಾಯ ವಿಚಾರಣೆ ನಡೆಸುತ್ತಾ ಕಾಲಹರಣ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಈ ಧೋರಣೆಯು ಭ್ರಷ್ಟಾಚಾರ ನಿಗ್ರಹದ ವಿಷಯದಲ್ಲಿ ಸರ್ಕಾರದ ಬದ್ಧತೆಯ ಕುರಿತು ಅನುಮಾನಕ್ಕೆ ಎಡೆಮಾಡುವಂತಿದೆ.

ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಸಾಕ್ಷಿಗಳ ಅಸಹಕಾರ, ತನಿಖೆಯಲ್ಲಿನ ಲೋಪಗಳು ಸೇರಿದಂತೆ ತಾಂತ್ರಿಕ ಕಾರಣಗಳಿಗಾಗಿ ಆರೋಪಿಗಳು ಖುಲಾಸೆ ಆಗುತ್ತಾರೆ. ಅಂತಹ ಪ್ರಕರಣಗಳಲ್ಲಿ ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುವುದನ್ನು ತಡೆಯುವುದಕ್ಕಾಗಿಯೇ ಸೇವಾ ನಿಯಮಾವಳಿಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲಾಗುತ್ತದೆ. ಕ್ರಿಮಿನಲ್ ಪ್ರಕರಣಗಳಲ್ಲಿ ಖುಲಾಸೆಯಾದರೂ ಸಾಂದರ್ಭಿಕ ಸಾಕ್ಷ್ಯಗಳು ಬಲವಾಗಿದ್ದರೆ ಇಲಾಖಾ ವಿಚಾರಣೆಯಲ್ಲಿ ಆರೋಪಿಗಳನ್ನು ದಂಡನೆಗೆ ಒಳಪಡಿಸಲು ಶಿಫಾರಸು ಮಾಡಲಾಗುತ್ತದೆ. ಆದರೆ, ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಲಯಗಳಿಂದ ಖುಲಾಸೆಯಾಗಿದ್ದಾರೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಇಲಾಖಾ ವಿಚಾರಣೆಯ ಶಿಫಾರಸನ್ನು ತಿರಸ್ಕರಿಸಿ ದಂಡನೆಯಿಂದ ಪಾರು ಮಾಡುವ ಪರಿಪಾಟವೂ ಇದೆ. ಲಂಚ ಪ್ರಕರಣ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣಗಳಲ್ಲಿ ಸಿಲುಕಿದ ಸರ್ಕಾರಿ ನೌಕರರನ್ನು ಕೆಲವು ದಿನಗಳವರೆಗೆ ಅಮಾನತಿನಲ್ಲಿ ಇರಿಸಲಾಗುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿ ಅಮಾನತು ತೆರವಾದ ಬೆನ್ನಿಗೇ ಅದೇ ಹುದ್ದೆಗೆ ನಿಯೋಜಿಸಲಾಗುತ್ತಿದೆ. ಸರ್ಕಾರದ ಈ ಧೋರಣೆ ಸಂಪೂರ್ಣವಾಗಿ ಜನವಿರೋಧಿಯಾದುದು. ವಿಚಾರಣೆ, ತನಿಖೆಗೆ ಅನುಮತಿ ನೀಡಲು ವಿಳಂಬ ಮಾಡುವುದು, ಆರೋಪ ಹೊತ್ತವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸುವುದು, ಇಲಾಖಾ ವಿಚಾರಣೆಗಳ ವರದಿಗಳನ್ನು ತಾಂತ್ರಿಕ ಕಾರಣ ಮುಂದಿಟ್ಟು ತಿರಸ್ಕರಿಸುವಂತಹ ನಡೆಗಳ ಹಿಂದೆ ಭ್ರಷ್ಟರನ್ನು ರಕ್ಷಿಸುವ ಹುನ್ನಾರ ಅಡಗಿದೆ. 'ಭ್ರಷ್ಟಾಚಾರವನ್ನು ಎಳ್ಳಷ್ಟೂ ಸಹಿಸುವುದಿಲ್ಲ' ಎಂದು ಚುನಾವಣೆ ಸಮಯದಲ್ಲಿ ಘೋಷಿಸಿದವರು ಅಧಿಕಾರದ ಗದ್ದುಗೆ ಏರಿದ ಬಳಿಕ ಅದನ್ನು ಮರೆತವರಂತೆ ವರ್ತಿಸುತ್ತಾರೆ. ಭ್ರಷ್ಟಾಚಾರ ನಿಗ್ರಹದ ವಿಚಾರದಲ್ಲಿ ಸರ್ಕಾರ ದೃಢ ನಿಲುವು ತಳೆಯಬೇಕು. ತನಿಖೆ, ವಿಚಾರಣೆಗೆ ಅನುಮತಿ ನೀಡುವ ವಿಚಾರದಲ್ಲಿ ವಿಳಂಬಕ್ಕೆ ಅವಕಾಶ ಇಲ್ಲದಂತಹ ಪಾರದರ್ಶಕ ವ್ಯವಸ್ಥೆಯೊಂದನ್ನು ರೂಪಿಸಬೇಕು. ಭ್ರಷ್ಟಾಚಾರದ ಆರೋಪ ಹೊತ್ತವರನ್ನು ಅದೇ ಹುದ್ದೆಗಳಲ್ಲಿ ಮುಂದುವರಿಸುವ ಪ್ರವೃತ್ತಿಯನ್ನು ಕೈಬಿಡಬೇಕು. ಭ್ರಷ್ಟಾಚಾರ ನಿಗ್ರಹಿಸುವ ವಿಚಾರದಲ್ಲಿ ಯಾವ ಒತ್ತಡಕ್ಕೂ ಮಣಿಯದೆ, ವಿಳಂಬಕ್ಕೆ ಅವಕಾಶ ಇಲ್ಲದಂತೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ರಾಜ್ಯ ಸರ್ಕಾರದ ಮೇಲಿದೆ.

ರಾಮನಗರ, ಕನಕಪುರವು ನಮ್ಮ ರಾಜಕಾರಣಿಗಳ ವೈಯಕ್ತಿಕ ಆಸ್ತಿಯಲ್ಲ

ಬೆಂಗಳೂರಿಗೆ ಕನಕಪುರ ಸೇರಿಸುವ ಮುನ್ನ

ವಿಶ್ಲೇಷಣೆ

ಎ. ರವೀಂದ್ರ

ರಾಮನಗರ ಜಿಲ್ಲೆಯ ಭಾಗವಾಗಿರುವ ಕನಕಪುರವು ಶೀಘ್ರದಲ್ಲಿಯೇ ಬೆಂಗಳೂರಿನ ವ್ಯಾಪ್ತಿಗೆ ಒಳಪಡಲಿದೆ, ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಚೆಗೆ ನೀಡಿರುವ ಹೇಳಿಕೆಯು ಹಲವರ ಹುಬ್ಬು ಮೇಲೇರಲು ಕಾರಣವಾಯಿತು. ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಮನಗರ ಜಿಲ್ಲೆಯನ್ನು ಸೃಷ್ಟಿಸಲಾಗಿತ್ತು. ರಾಮನಗರ ಜಿಲ್ಲೆಯ ಸ್ಥಾನವನ್ನು ಇಲ್ಲವಾಗಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕುಮಾರಸ್ವಾಮಿ ಹೇಳಿದರು. ಒಕ್ಕಲಿಗ ಸಮುದಾಯದ ಇಬ್ಬರು ನಾಯಕರ ನಡುವಿನ ಮಾತಿನ ಸಮರವು ಬೆಂಕಿಗೆ ತುಪ್ಪ ಸುರಿಯುವ ಕೆಲಸವನ್ನಷ್ಟೇ ಮಾಡಿದೆ.

ರಾಜ್ಯದ ರಾಜಧಾನಿಯ ಅನಿರ್ಬಂಧಿತ ಹಾಗೂ ಯೋಜನಾರಹಿತ ಬೆಳವಣಿಗೆಯು ನಗರ ಹಾಗೂ ಇಲ್ಲಿನ ನಿವಾಸಿಗಳ ಮೇಲೆ ಹಲವು ರೀತಿಯಲ್ಲಿ ಪರಿಣಾಮ ಉಂಟುಮಾಡಿದೆ. ಸಂಚಾರ ದಟ್ಟಣೆ, ಮಾಲಿನ್ಯ, ತ್ಯಾಜ್ಯ ನಿರ್ವಹಣೆ, ಮೂಲಸೌಕರ್ಯದ ಸಮಸ್ಯೆ ಇವೆಲ್ಲ ಗೊತ್ತಿರುವಂಥವು. ಆದರೆ, ಯೋಜನೆಯ ಚೌಕಟ್ಟು ಮತ್ತು ಪ್ರಕ್ರಿಯೆ ಬಗ್ಗೆ, ನಗರದ ವ್ಯವಸ್ಥಿತ ಬೆಳವಣಿಗೆಯಲ್ಲಿ ಅವುಗಳ ಮಹತ್ವದ ಬಗ್ಗೆ ಅರಿವು ಹೆಚ್ಚಿಲ್ಲ.

ಪ್ರತಿ ರಾಜ್ಯವೂ ನಗರ ಯೋಜನಾ ಕಾಯ್ದೆಯನ್ನು ಹೊಂದಿದೆ. ಕರ್ನಾಟಕದಲ್ಲಿ ಈ ಕಾಯ್ದೆಯು 1961ರಲ್ಲಿ ಜಾರಿಗೆ ಬಂತು. ಈ ಕಾಯ್ದೆಯು ನಗರದ ವಿಸ್ತಾರವಾದ ಪ್ರದೇಶದ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವ 'ಮಾಸ್ಟರ್ ಪ್ಲ್ಯಾನ್' ರೂಪಿಸುವುದನ್ನು ಕಡ್ಡಾಯಗೊಳಿಸಿದೆ. ಲಭ್ಯವಿರುವ ಜಮೀನನ್ನು ಹೇಗೆ ಬಳಸಿಕೊಳ್ಳಬೇಕು ಎಂದು ಇದು ಹೇಳುತ್ತದೆ. ವಸತಿಗೆ, ವಾಣಿಜ್ಯ ಉದ್ದೇಶಕ್ಕೆ, ಕೈಗಾರಿಕೆಗಳಿಗೆ ಹಾಗೂ ಒಂದಿಷ್ಟು ಜಾಗವನ್ನು ಸಾರ್ವಜನಿಕ ಬಳಕೆಗೆ ಮುಕ್ತವಾಗಿ ಇರಿಸುವುದಕ್ಕೆ ಜಮೀನನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ವಲಯ ಸಂಬಂಧಿ ನಿಯಮಗಳನ್ನು ಇದು ಹೊಂದಿದೆ, ಇದರ ಆಧಾರದಲ್ಲಿ ನಿರ್ಮಾಣ ಚಟುವಟಿಕೆಗಳನ್ನು ನಿಯಂತ್ರಿಸಲಾಗುತ್ತದೆ. ಬೆಂಗಳೂರಿಗೆ ಮೊದಲ ಮಾಸ್ಟರ್ ಪ್ಲ್ಯಾನ್ ಸಿದ್ಧವಾಗಿದ್ದು 1984ರಲ್ಲಿ. ಇದನ್ನು 1995ರಲ್ಲಿ ಪರಿಷ್ಕರಿಸಲಾಯಿತು. ನಂತರದಲ್ಲಿ, ಮಾಸ್ಟರ್ ಪ್ಲ್ಯಾನ್ (2015), 2007ರಿಂದ ಜಾರಿಗೆ ಬಂತು. ಇದು ಈಗಲೂ ಜಾರಿಯಲ್ಲಿದೆ. ಹೊಸ ಮಾಸ್ಟರ್ ಪ್ಲ್ಯಾನ್ (2031) ಸರ್ಕಾರಕ್ಕೆ ಸಲ್ಲಿಕೆಯಾಗಿ ನಾಲ್ಕು ವರ್ಷಗಳು ಕಳೆದಿವೆ. ಆದರೆ ಅನುಮೋದನೆ ಸಿಕ್ಕಿಲ್ಲ.

ಬೆಂಗಳೂರಿನ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಿದ್ದು ಬಿಡಿಎ. ಈ ಯೋಜನೆಯು ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶಕ್ಕೆ ಅನ್ವಯವಾಗುತ್ತದೆ. ಈ ಪ್ರದೇಶದ ವ್ಯಾಪ್ತಿ 1,200 ಚದರ ಕಿ.ಮೀ.ಗಿಂತ ಹೆಚ್ಚು. ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಎಂಬ ಪ್ರತ್ಯೇಕ ಪ್ರಾಧಿಕಾರವೊಂದು ಇದೆ. ಈ ಪ್ರಾಧಿಕಾರದ ಕಾರ್ಯವ್ಯಾಪ್ತಿ 8,500 ಚದರ ಕಿ.ಮೀ. ಇದರ ಅಡಿಯಲ್ಲಿ ಕನಕಪುರ, ರಾಮನಗರ, ಚನ್ನಪಟ್ಟಣ, ಹೊಸಕೋಟೆ ಮತ್ತು ಈ ಪ್ರದೇಶದ ಇತರ ಪಟ್ಟಣಗಳು ಬರುತ್ತವೆ. ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಅಭಿವೃದ್ಧಿಗೆ, ಹಸಿರು ವಲಯಕ್ಕೆ, ಅರಣ್ಯಕ್ಕೆ ಜಾಗಗಳನ್ನು ಗುರುತಿಸಿರುವ ಕರಡು ಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ಆದರೆ ಇದು ಸಂಬಂಧಪಟ್ಟ ಅಧಿಕಾರಿಗಳ ಗಮನವನ್ನು ಅಗತ್ಯ ಪ್ರಮಾಣದಲ್ಲಿ ಸೆಳೆದಿಲ್ಲ. ಇದು ಅನುಮೋದನೆ ಇಲ್ಲದೆ ಬಿದ್ದಿದೆ.

ಸ್ತುತ್ಯರ್ಹ ಉದ್ದೇಶದೊಂದಿಗೆ 1985ರಲ್ಲಿ ಬಿಎಂಆರ್‌ಡಿಎ ರಚಿಸಲಾಯಿತಾದರೂ, ಅದಕ್ಕೆ ತನ್ನ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಆಗಿಲ್ಲ. ಈ ಪ್ರಾಧಿಕಾರದ ನಿರ್ದೇಶಕರ ಮಂಡಳಿಗೆ ಮುಖ್ಯಮಂತ್ರಿಯೇ ಅಧ್ಯಕ್ಷ, ನಗರಾಭಿವೃದ್ಧಿ ಸಚಿವರೇ ಇದಕ್ಕೆ ಉಪಾಧ್ಯಕ್ಷರಾಗಿರುತ್ತಾರಾದರೂ, ಪರಿಸ್ಥಿತಿ ಹೀಗಿದೆ. ಆದರೆ ಬಿಡಿಎ ಕೆಲಸಗಳು ಈ ಪ್ರಾಧಿಕಾರವನ್ನು ಮರೆಮಾಚಿಸುವಂತೆ ಇವೆ. ನಿವೇಶನ ಇಲ್ಲದವರಿಗಾಗಿ ಬಿಡಿಎ ಕೆಲಸ ಮಾಡಬೇಕು. ಆದರೆ ಅದು ಒಂದು ಬಗೆಯಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಇಲ್ಲಿ ಸರ್ಕಾರದ ಒಳಗೆ ಹಾಗೂ ಹೊರಗೆ ಇರುವವರ ಒಂದಿಷ್ಟು ಹಿತಾಸಕ್ತಿಗಳು ಇವೆ. ನನ್ನ ವೈಯಕ್ತಿಕ ಅನುಭವದಲ್ಲಿ ಹೇಳುವುದಾದರೆ, ಯಾವ ಮುಖ್ಯಮಂತ್ರಿಯೂ ಬಿಎಂಆರ್‌ಡಿಎ ಬಗ್ಗೆ ಆಸಕ್ತಿ ತೋರಿಸುವುದಿಲ್ಲ. ಅದರ ನಿರ್ದೇಶಕರ ಮಂಡಳಿ ಸಭೆಗಳು ನಡೆಯುವುದು ಕಡಿಮೆ. ನಗರ ಪ್ರದೇಶದ ಜಮೀನಿನ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಬಹಳ ಆಸಕ್ತಿ ತೋರಿಸುವ ರಾಜಕೀಯ ನಾಯಕರು ನಗರ ಯೋಜನೆಯನ್ನು ಅಲಕ್ಷಿಸುವುದು ಸಮಸ್ಯೆಯ ಮೂಲ.

ಇದಕ್ಕೆ ಪರಿಹಾರ ಇರುವುದು ನಗರ ಸುಧಾರಣೆಗಳಲ್ಲಿ. ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶದ ಸಮಸ್ಯೆಗಳನ್ನು ಪರಿಶೀಲಿಸಲು ರಚಿಸಲಾದ ಕಸ್ತೂರಿರಂಗನ್ ಸಮಿತಿಯು ಬಿಡಿಎ ಬಳಿ ಇರುವ ಯೋಜನಾ ಕೆಲಸಗಳನ್ನು ಹಿಂಪಡೆಯಬೇಕು ಎಂದು ಶಿಫಾರಸು ಮಾಡಿತ್ತು. ಈ ಕೆಲಸಗಳನ್ನು ಮೆಟ್ರೊಪಾಲಿಟನ್ ಯೋಜನಾ ಸಮಿತಿಗೆ (ಎಂಪಿಸಿ) ವಹಿಸಬೇಕು, ಬಿಎಂಆರ್‌ಡಿಎ ಅನ್ನು ತಾಂತ್ರಿಕ ಯೋಜನಾ ವಿಭಾಗವನ್ನಾಗಿಸಿ ಅದು ಎಂಪಿಸಿಗೆ ನೆರವಾಗುವಂತೆ ಮಾಡಬೇಕು ಎಂದು ಹೇಳಿತ್ತು. ಬೆಂಗಳೂರು ಅಭಿವೃದ್ಧಿ ಸಚಿವರಾಗಿ ಶಿವಕುಮಾರ್ ಅವರು ಮಾಡಬೇಕಾದ ಕೆಲಸವೆಂದರೆ, ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಆಗಬೇಕಿರುವ ಸುಧಾರಣೆಗಳಿಗೆ ಸಂಬಂಧಿಸಿದ ವಿಷಯವನ್ನು ಎಂಪಿಸಿಯಲ್ಲಿ ಪ್ರಸ್ತಾಪಿಸುವುದು. ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿರುವ ಕನಕಪುರವನ್ನು ಬೆಂಗಳೂರಿನ ಭಾಗವನ್ನಾಗಿಸುವಂತಹ ಪ್ರಮುಖ ತೀರ್ಮಾನವನ್ನು ವ್ಯಕ್ತಿಯೊಬ್ಬರ ಇಚ್ಛೆಗೆ ಅನುಗುಣವಾಗಿ ಕೈಗೊಳ್ಳಲು ಆಗುವುದಿಲ್ಲ. ಎಚ್.ಡಿ.ಕುಮಾರಸ್ವಾಮಿ, ಡಿ.ಕೆ. ಶಿವಕುಮಾರ್ ಅವರು ರಾಮನಗರ ಮತ್ತು ಕನಕಪುರವನ್ನು ವೈಯಕ್ತಿಕ ಆಸ್ತಿಯಂತೆ ಕಾಣಲು ಬರುವುದಿಲ್ಲ.

ಬೇರೆಡೆಗಿನ ಅನುಭವಗಳನ್ನು ಒಮ್ಮೆ ಗಮನಿಸೋಣ. ಬೇರೆ ಬೇರೆ ದೇಶಗಳಲ್ಲಿ ಪ್ರದೇಶ ಯೋಜನೆ ರೂಪಿಸುವಿಕೆಯು ನಗರಗಳ ಆಡಳಿತದಲ್ಲಿ ಬಹಳ ಮಹತ್ವ ಪಡೆಯುತ್ತಿದೆ. ಜಗತ್ತಿನ ಅತಿದೊಡ್ಡ ಮೆಟ್ರೊಪಾಲಿಟನ್ ಪ್ರದೇಶ ಹಾಗೂ 3.7 ಕೋಟಿ ಜನಸಂಖ್ಯೆ ಹೊಂದಿರುವ ಟೋಕಿಯೊ, ಮೂರು ಹಂತಗಳ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಲಂಡನ್‌ನಲ್ಲಿ ಮೇಯರ್ ಹುದ್ದೆಯಲ್ಲಿರುವವರು ನಗರದ ಯೋಜನೆ ಮತ್ತು ಸಾರಿಗೆಯನ್ನು ನೋಡಿಕೊಳ್ಳುತ್ತಾರೆ. ಮುನಿಸಿಪಲ್ ಕೆಲಸಗಳನ್ನು 32 ಬರೋಗಳು ನೋಡಿಕೊಳ್ಳುತ್ತವೆ. 2.3 ಕೋಟಿ ಜನಸಂಖ್ಯೆ ಹೊಂದಿರುವ ನ್ಯೂಯಾರ್ಕ್ ಪ್ರದೇಶದಲ್ಲಿ ಮೂರು ರಾಜ್ಯಗಳಿವೆ. ಇದು 13,999 ಚದರ ಮೈಲಿ ವಿಸ್ತಾರ ಹೊಂದಿದೆ, 31 ಕೌಂಟಿಗಳು ಮತ್ತು 782 ಸ್ಥಳೀಯ ಸಂಸ್ಥೆಗಳನ್ನು (ಮುನಿಸಿಪಾಲಿಟಿ) ಹೊಂದಿದೆ.

ಭಾರತದ ರಾಷ್ಟ್ರ ರಾಜಧಾನಿ ಪ್ರದೇಶವು ದೆಹಲಿ ಕೇಂದ್ರಾಡಳಿತ ಪ್ರದೇಶ ಮತ್ತು ನೆರೆಯ ಹರಿಯಾಣ, ರಾಜಸ್ಥಾನ, ಉತ್ತರಪ್ರದೇಶ ರಾಜ್ಯಗಳ ಕೆಲವು ಭಾಗಗಳನ್ನು ಒಳಗೊಂಡಿದೆ. ಇದರ ವ್ಯಾಪ್ತಿ 55,083 ಚದರ ಕಿ.ಮೀ. ಜನಸಂಖ್ಯೆ 7 ಕೋಟಿಗೂ ಹೆಚ್ಚು. ಈ ಎಲ್ಲ ಮೆಟ್ರೊಪಾಲಿಟನ್ ಪ್ರದೇಶಗಳ ನಡುವೆ ಇರುವ ಸಮಾನ ಅಂಶವೆಂದರೆ, ಅತ್ಯುನ್ನತ ಹಂತದ ಆಡಳಿತ ವ್ಯವಸ್ಥೆಯು ಯೋಜನೆ ರೂಪಿಸುವ ಹೊಣೆಯನ್ನು ಮಾತ್ರ ಹೊಂದಿದೆ. ಸ್ಥಳೀಯ ಮಟ್ಟದ ಕೆಲಸಗಳನ್ನು ಮುನಿಸಿಪಾಲಿಟಿಗಳು ನಿರ್ವಹಿಸುತ್ತವೆ. ಸಂವಿಧಾನದಲ್ಲಿ ಹೇಳಿರುವಂತೆ ಎಂಪಿಸಿ, ಕರಡು ಅಭಿವೃದ್ಧಿ ಯೋಜನೆಯನ್ನು ರೂಪಿಸಬೇಕು. ಮುನಿಸಿಪಾಲಿಟಿಗಳು ಸ್ಥಳೀಯ ಕೆಲಸಗಳನ್ನು ನಿರ್ವಹಿಸಬೇಕು. ಬೆಂಗಳೂರಿನ ಮಟ್ಟಿಗೆ ಎಂಪಿಸಿಯನ್ನು ಸಕ್ರಿಯಗೊಳಿಸಿ ಬಲಪಡಿಸಬೇಕು. ಸೂಕ್ತ ಅಭಿವೃದ್ಧಿ ಯೋಜನೆ ರೂಪಿಸಬೇಕು. ಮೆಟ್ರೊಪಾಲಿಟನ್ ಪ್ರದೇಶದಲ್ಲಿ ಸಣ್ಣ ನಗರಗಳು ಅಥವಾ ಪಟ್ಟಣಗಳು– ಕನಕಪುರ, ರಾಮನಗರ ಅಥವಾ ಹೊಸಕೋಟೆ– ಸ್ಥಳೀಯ ಮುನಿಸಿಪಲ್ ಕಾರ್ಯಗಳನ್ನು ನಡೆಸುವುದು ಮುಂದುವರಿಯಬೇಕು. ಬೇರೆ ಬೇರೆ ಪ್ರದೇಶಗಳಿಗೆ ವ್ಯಾಪಿಸಿಕೊಂಡಿರುವ ಬೃಹತ್ ಪ್ರಮಾಣದ ಮೂಲಸೌಕರ್ಯ ಯೋಜನೆಗಳನ್ನು ಎಂಪಿಸಿಯು ರೂಪಿಸಿ, ಮೇಲ್ವಿಚಾರಣೆ ನಡೆಸಬಹುದು.

ಶಿವಕುಮಾರ್ ಅವರೇ, ಮೊದಲು ನೀವು ಬೆಂಗಳೂರು ನಗರಕ್ಕೆ ಸಂಬಂಧಿಸಿದ ಯೋಜನೆ, ನೀತಿನಿರೂಪಣೆಯ ಹೊಣೆ ವಹಿಸಿಕೊಳ್ಳಿ. ನಂತರ ಕನಕಪುರವನ್ನು ಬೆಂಗಳೂರು ದಕ್ಷಿಣದ ಭಾಗವನ್ನಾಗಿಸುವ ಆಲೋಚನೆ ಮಾಡಿ. ಆಗ ಬಹುಶಃ ನಿಮಗೆ ಮತ್ತೊಂದು ಆಲೋಚನೆ ಮೂಡಬಹುದು, ನಗರಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವ, ಅದನ್ನು ಜೀವಿಸಲು ಯೋಗ್ಯವನ್ನಾಗಿಸುವ ಕೆಲಸವನ್ನು ಶುರುಮಾಡಬಹುದು.

ಲೇಖಕ: ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ

ಚುರುಮುರಿ

ಕುರ್ಚಿಗಾಗಿ ಪರೀಕ್ಷೆ

• ಸುಮಂಗಲಾ

'ಅಲ್ಲಾ... ಸಿಎಂ ಕುರ್ಚಿಗೆ ಎಲ್ಲರೂ ಎದಕ್ಕ ಅಷ್ಟ್ ಬಡಿದಾಡ್ತಾರಂತ ನನಗ ಅರ್ಥನೇ ಆಗವಲ್ದು' ಬೆಕ್ಕಣ್ಣ ತಲೆ ಕೆರೆದುಕೊಂಡಿತು.

'ಅದ್ ಬರೀ ಕುರ್ಚಿ ಅಲ್ಲಲೇ... ಸಿಎಂ ಪದವಿ, ಅಧಿಕಾರ ಎಲ್ಲಾನೂ ಅದ್ರೊಳಗೆ ಅಡಗಿರ್ತದ' ಎಂದೆ ನಾನು.

'ಡಿಕೇಶಣ್ಣ, ಪರಮೇಶಮಾಮ, ಅಷ್ಟೇಅಲ್ಲದ ಇನ್ನೂ ಎರಡು ಮೂರು ಮಂದಿ ಸಿಎಂ ಆಗಬೇಕಂತ ಬೆಂಬಲಿಗರಿಂದ ತುತ್ತೂರಿ ಊದಿಸೋದನ್ನು ನೋಡಿದರೆ, ಕನಿಷ್ಠ ಐದಾದರೂ ಸಿಎಂ ಕುರ್ಚಿ ಮಾಡಿಸಿಡಬೇಕು, ಹೌದಿಲ್ಲೋ?' ಬೆಕ್ಕಣ್ಣ ಉಪಾಯ ಸೂಚಿಸಿತು.

'ಹಂಗೆ ಮಾಡಿ, ಸಿಎಂ 1, ಸಿಎಂ 2 ಹಿಂಗ ನಂಬರ್ ಕೊಟ್ರೂ ಸಮಸ್ಯೆ ಬಗೆಹರಿಯಂಗಿಲ್ಲ. ಎಲ್ಲಾರೂ ನಂ. 1 ಕುರ್ಚಿನೇ ಬೇಕು ಅಂತಾರೆ, ಸಿದ್ದು ಅಂಕಲ್ಲು ನಂ. 1 ಸಿಎಂ ಕುರ್ಚಿ ಯಾವಾಗಿದ್ರೂ ನನ್ನದೇ ಅಂತಾರೆ' ಎಂದೆ ನಾನು.

'ನಂಬರ್‍ರೇ ಕೊಡದೆ ಐದೂ ಕುರ್ಚಿ ಒಂದೇ ಸಾಲಿನಲ್ಲಿ ಹಾಕಿ, ಬರೇ ಹೆಸರಿನಿಂದ ಕರೆದ್ರ ಹೆಂಗಿರ್ತದ? ಸಿಎಂ ಸಿದ್ದು ಅಂಕಲ್ಲು, ಸಿಎಂ ಡಿಕೇಶಣ್ಣ ಹಿಂಗ ಕರೆದ್ರೆ?'

'ಮತ್ತ ಕೆಲವು ಕಡತಗಳಿಗೆ ಸಿಎಂ ಸಹಿ ಹಾಕಬೇಕಾಗುತ್ತಲ್ಲ, ಆವಾಗ ಯಾರು ಸಹಿ ಹಾಕದು?'

'ಐವರೂ ಸಿಎಂ ಸಹಿ ಹಾಕದು, ಐದೂ ಒಂದೇ ಸಾಲಿಗೆ ಇರಬೇಕು ಮತ್ತ'.

'ಪ್ರಮೋಶನ್ ಬೇಕಂದ್ರ ಎಕ್ಸಾಂ ಬರೀತಾರಲ್ಲ, ಹಂಗೆ ಮಂತ್ರಿಗಳಿಗೂ ಸಿಎಂ ಎಕ್ಸಾಂ ನಡೆಸಿ, ಅದರಲ್ಲಿ ಮೊದಲ ರ‍್ಯಾಂಕ್ ಬಂದವರಿಗೆ ಸಿಎಂ ಕುರ್ಚಿ ಕೊಟ್ಟರೆ ಹೆಂಗಿರ್ತದ?' ನಾನು ಇನ್ನೊಂದು ಉಪಾಯ ಹೇಳಿದೆ.

'ಹೌದು, ಥಿಯರಿವಳಗ ವಿವಿಧ ರೀತಿಯ ಆಪರೇಶನ್ ವಿಧಾನಗಳು, ಸ್ವಹಿತ, ಪಕ್ಷಹಿತ ಎರಡನ್ನೂ ಒಟ್ಟಿಗೇ ಹೆಂಗ ಸಾಧಿಸಬೇಕು, ಅದೃಶ್ಯರೀತಿಯಲ್ಲಿ ಕಾಲೆಳೆದು ಬೀಳಿಸದು ಹೇಗೆ ಎಂಬೆಲ್ಲ ವಿಷಯಗಳ ಬಗ್ಗೆ ಪ್ರಶ್ನೆಗಳಿರಬೇಕು'.

'ವಿರೋಧ ಪಕ್ಷದ ನಾಯಕರ ಸ್ಥಾನಕ್ಕೂ ಇಂಥದ್ದೇ ಪರೀಕ್ಷೆ ಬೇಕಾಗಬಹುದು' ಎಂದೆ.

'ಅದಕ್ಕೆ ಮೋದಿಮಾಮ, ಕುಮಾರಣ್ಣ ಸೇರಿಯೇ ಬ್ಯಾರೆ ಥರದ ಪ್ರಶ್ನೆಪತ್ರಿಕೆ ರಚನೆ ಮಾಡತಾರೆ' ಎಂದು ಬೆಕ್ಕಣ್ಣ ಹಲ್ಲು ಕಿಸಿಯಿತು.

ದಿನದ ಟ್ವೀಟ್

ಕೂಳೆಗೆ ಬೆಂಕಿ ಸಲ್ಲದು

ಪಂಜಾಬ್‌ನಲ್ಲಿ ಎಲ್ಲ ಪ್ರಯತ್ನಗಳ ನಡುವೆಯೂ ಶೇ 50ರಷ್ಟು, ಅಂದರೆ ಸುಮಾರು 100 ಲಕ್ಷ ಟನ್‌ನಷ್ಟು ಕೂಳೆಗೆ ಬೆಂಕಿ ಹಚ್ಚಲಾಗಿದೆ. ರೈತರಿಗೆ ಪ್ರೋತ್ಸಾಹ ನೀಡುವ ಕ್ರಮಗಳನ್ನು ಕೈಗೊಳ್ಳುವುದು ಕೂಳೆ ಸುಡುವಿಕೆಯ ನಿರ್ವಹಣೆಗೆ ಇರುವ ಸೂಕ್ತವಾದ ಮಾರ್ಗ ಎಂಬುದನ್ನು ಕೇಂದ್ರ ಮನಗಂಡಿದ್ದರೆ, ಕೂಳೆ ಸುಡುವ ಇಂತಹ ಪರಿಪಾಟದಿಂದ ಪಂಜಾಬ್ ಇಷ್ಟುಹೊತ್ತಿಗೆ ಮುಕ್ತವಾಗಿರುತ್ತಿತ್ತು.

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ

ಬಿಜೆಪಿಯ ರಾಜ್ಯ ನಾಯಕರು ಇಲ್ಲಿ ಪ್ರವಾಸ ಕೈಗೊಂಡು ಏನು ಮಾಡುತ್ತಾರೆ? ಅವರಿಗೆ ನಿಜವಾಗಿ ನಮ್ಮ ರೈತರ ಬಗ್ಗೆ ಕಾಳಜಿ ಇದ್ದರೆ ದೆಹಲಿಗೆ ಹೋಗಿ ಕೇಂದ್ರ ಸರ್ಕಾರವನ್ನು ಕೇಳಲಿ, ಹಣ ಬಿಡುಗಡೆ ಮಾಡಿಸಲಿ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 6-11-1998

• **ಆಲಮಟ್ಟಿ: 'ಕ್ರೆಸ್ಟ್ ಗೇಟ್ ಅಳವಡಿಸಿಲ್ಲ'**

ನವದೆಹಲಿ, ನ. 5– ಆಲಮಟ್ಟಿ ಅಣೆಕಟ್ಟಿನಲ್ಲಿ ಕರ್ನಾಟಕ ಯಾವುದೇ ಕ್ರೆಸ್ಟ್ ಗೇಟುಗಳನ್ನು ಅಳವಡಿಸಿಲ್ಲ, ಆಂಧ್ರಪ್ರದೇಶ ಈ ನಿಟ್ಟಿನಲ್ಲಿ ಹೊಂದಿರುವ ಶಂಕೆ ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ಕಮಿಷನರ್ ಡಾ.ಎಸ್.ಎಂ.ಸೇಠ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆಂಧ್ರ ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ನಿಂದನೆ ಅರ್ಜಿ ಸಲ್ಲಿಸಿ, ಕೆಲವು ಪತ್ರಿಕೆಗಳು ಈ ಸಂಬಂಧ ಪ್ರಕಟಿಸಿರುವ ವರದಿಗಳನ್ನು ನ್ಯಾಯಾಲಯದ ಗಮನಕ್ಕೆ ತಂದಿತ್ತು.

ಇದಕ್ಕೆ ಉತ್ತರವಾಗಿ ಕರ್ನಾಟಕದ ಭಾರಿ ನೀರಾವರಿ ಸಚಿವ ಕೆ.ಎನ್.ನಾಗೇಗೌಡ ಅವರು ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿ, ಕರ್ನಾಟಕ ಯಾವುದೇ ಕ್ರೆಸ್ಟ್ ಗೇಟುಗಳನ್ನು ಅಣೆಕಟ್ಟು ಪ್ರದೇಶದಲ್ಲಿ ನಿರ್ಮಿಸಿಲ್ಲ ಎಂದು ತಿಳಿಸಿದ್ದರು.

50 ವರ್ಷಗಳ ಹಿಂದೆ

ಮಂಗಳವಾರ, 6-11-1973

• **ಕುದುರೆಗಾಡಿಯಲ್ಲಿ ಕಚೇರಿಗೆ ಬಂದ ಇಂದಿರಾ...**

ನವದೆಹಲಿ, ನ. 5– ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಒಂದು ಕುದುರೆಯ ಸಾರೋಟದಲ್ಲಿ 'ಸೌತ್ ಬ್ಲಾಕ್'ನಲ್ಲಿರುವ ತಮ್ಮ ಅಧಿಕೃತ ಕಚೇರಿಗೆ ಇಂದು ಆಗಮಿಸಿ ಪೆಟ್ರೋಲ್ ಮಿತವ್ಯಯದ ಬಗ್ಗೆ ಇತರರಿಗೆ ಮಾರ್ಗದರ್ಶನ ಮಾಡಿಕೊಟ್ಟರು.

ರಾಷ್ಟ್ರದ ಪ್ರಧಾನ ಮಂತ್ರಿಗಳೊಬ್ಬರು ವಿಕ್ಟೋರಿಯಾ ರಾಣಿ ಕಾಲದಲ್ಲಿದ್ದಂತೆ ಕುದುರೆ ಗಾಡಿಯಲ್ಲಿ ತಮ್ಮ ಕಚೇರಿಗೆ ಆಗಮಿಸಿದ್ದು ಸ್ವಾತಂತ್ರ್ಯಾನಂತರ ಇದೇ ಮೊದಲು.

ಸಾರೋಟದ ಮುಂದೆ ಪಹರೆ ಕಾರು, ಹಿಂದೆ ಎರಡು ಭದ್ರತೆ ಕಾರುಗಳೂ ಇದ್ದವು.

ಕೆಂಪು ಅಂಚಿನ ಬಿಳೀ ಸೀರೆ ಉಟ್ಟಿದ್ದ ಇಂದಿರಾ ಗಾಂಧಿ ನವೆಂಬರ್ ತಿಂಗಳ ಸೂರ್ಯನ ಬಿಸಿಯಲ್ಲಿ ಉಲ್ಲಾಸಭರಿತರಾಗಿದ್ದರಲ್ಲದೆ ಫೈಲುಗಳನ್ನು ಅವಲೋಕಿಸುತ್ತಿದ್ದರು.

ನಾಲ್ಕು ಕಿ.ಮೀ. ದೂರದ ಈ ಪ್ರಯಾಣವು ಜನತೆಗೆ ಅಪೂರ್ವ ದೃಶ್ಯವಾಗಿತ್ತು.

ಪಾದಚಾರಿ ಪ್ರತಿಕ್ರಿಯೆ: 'ಪೆಟ್ರೋಲ್ ಬೆಲೆ ಏರಿಕೆ ಕಾಲದಲ್ಲಿ ಇದು ಸೂಕ್ತ ಪರಿಹಾರ ಕ್ರಮ. ಆದರೆ ರಾಷ್ಟ್ರದಲ್ಲಿ ಆಹಾರ ಅಭಾವ ಇರುವಾಗ ಕುದುರೆಗಳನ್ನು ಮೇಯಿಸುವವರಾದರೂ ಯಾರು?' ಎಂದು, ದೃಶ್ಯ ಕಂಡ ಪಾದಚಾರಿಯೊಬ್ಬ ಪ್ರತಿಕ್ರಿಯೆ ವ್ಯಕ್ತಪಡಿಸಿದ.

ಚರ್ಚೆ

ಕನ್ನಡದ ಹಲವು ಅವತಾರ

ವಿವಿಧ ಬಗೆಯಲ್ಲಿ ಕನ್ನಡ ಮಾತನಾಡುವುದನ್ನು ಗಮನಿಸಿದಾಗ, ಸ್ಪಷ್ಟವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲದ, ಆದರೂ ಭಿನ್ನವಾದ ಅಸಂಖ್ಯಾತ ಶೈಲಿಗಳು ನಮಗೆ ಕಾಣಸಿಗುತ್ತವೆ

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಕನ್ನಡ ಅತ್ಯಂತ ಜೀವಂತವಾದ, ಚಲನಶೀಲವಾದ ಭಾಷೆ. ಇದನ್ನು ಮಾತನಾಡುವ ಜನ ವ್ಯಾಕರಣ, ಛಂದಸ್ಸು, ಸಂಧಿ- ಸಮಾಸ ನೋಡಿಕೊಂಡು, ಉಚ್ಚಾರಣೆಯ ಕುರಿತು ಎಚ್ಚರಿಕೆ ವಹಿಸಿ ಮಾತನಾಡುವುದಿಲ್ಲ. ದಿನನಿತ್ಯದ ಗ್ರಹಿಕೆ, ಅರಿವು, ಸಂವಹನದ ಅಗತ್ಯಗಳನ್ನು ಪೂರೈಸುವಂತೆ ಪ್ರತಿಯೊಬ್ಬರೂ ಬಳಸುತ್ತಿರುವುದರಿಂದ ಕನ್ನಡ ಭಾಷೆಯು ಕ್ಷಣಕ್ಷಣಕ್ಕೂ ಬದಲಾಗುತ್ತಲೇ ಬೆಳೆಯುತ್ತಲೇ ಇರುತ್ತದೆ. ಜೀವಂತ ಸಮುದಾಯಗಳು ಆಡುಮಾತಿನಲ್ಲಿ ಬಳಸುವ ಯಾವುದೇ ಭಾಷೆಯ ಸಂದರ್ಭದಲ್ಲಿ ಈ ಮಾತು ನಿಜ.

ಕನ್ನಡ ಮಾತನಾಡುವವರು ಕರ್ನಾಟಕದಲ್ಲಿ ಮಾತ್ರ ಅಲ್ಲ, ಹೊರನಾಡು, ಹೊರದೇಶಗಳಲ್ಲೂ ಇದ್ದಾರೆ. ಕರ್ನಾಟಕದ ಗಡಿಯೊಳಗೆ ಮಾತನಾಡುವ ಕನ್ನಡವನ್ನು ಗಮನಿಸಿದರೂ ಸ್ಪಷ್ಟವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲದ ಆದರೂ ಭಿನ್ನವಾದ ಅಸಂಖ್ಯಾತ ಶೈಲಿಗಳನ್ನು ನೋಡುತ್ತೇವೆ. ಅಧ್ಯಯನದ ಅನುಕೂಲಕ್ಕಾಗಿ ಇವುಗಳನ್ನು ಕಲಬುರಗಿ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಮತ್ತು ಮೈಸೂರು ಕನ್ನಡ ಎಂದು ವಿಭಜಿಸಲಾಗುತ್ತದೆ. ಇವು ಪ್ರಾದೇಶಿಕ ಉಪಭಾಷೆಗಳು. ಒಂದೊಂದು ಪ್ರದೇಶದಲ್ಲಿ ಮತ್ತೆ ಒಳಹೊಕ್ಕು ನೋಡಿದರೆ ಜಿಲ್ಲೆಜಿಲ್ಲೆಗೆ, ತಾಲ್ಲೂಕು ತಾಲ್ಲೂಕಿಗೆ ಮಾತನಾಡುವ ಕನ್ನಡ ವಿಶಿಷ್ಟವಾಗಿರುವುದು ಕಂಡುಬರುತ್ತದೆ.

ಪ್ರತಿಯೊಂದು ಪ್ರಾದೇಶಿಕ ಉಪಭಾಷೆಯಲ್ಲಿಯೇ ಮತ್ತೆ ಜಾತಿ, ಧರ್ಮ, ಕಸುಬು, ಲಿಂಗ, ಕನ್ನಡವಲ್ಲದ ಮಾತೃಭಾಷೆಯಂತಹವುಗಳ ಆಧಾರದಲ್ಲಿಯೂ ವೈಶಿಷ್ಟ್ಯ ಕಂಡುಬರುತ್ತದೆ. ಆಡುಮಾತಿನಲ್ಲಿ ಎಷ್ಟೊಂದು ವ್ಯತ್ಯಾಸ ಇರುತ್ತದೆ ಎಂದರೆ, ಉದಾಹರಣೆಗೆ, ಮಳವಳ್ಳಿಯಲ್ಲಿ ಮಾತನಾಡುವ ಕನ್ನಡ ಭಾಲ್ಕಿಯವರಿಗೆ, ದಾಂಡೇಲಿಯಲ್ಲಿ ಮಾತನಾಡುವವರ ಕನ್ನಡ ಮುಳಬಾಗಿಲಿನವರಿಗೆ ಹೆಚ್ಚೆಂದರೆ ಶೇ 30- 40ರಷ್ಟು ಅರ್ಥವಾಗಬಹುದು. ಆದರೂ ಇಡೀ ಕರ್ನಾಟಕದಲ್ಲಿ ಅವರೆಲ್ಲರೂ ಮಾತನಾಡುವುದು ಕನ್ನಡವೇ! ಇದೇ ಜೀವಂತ ಭಾಷೆಯ ವೈಶಿಷ್ಟ್ಯ ಮತ್ತು ಮಾಧುರ್ಯ.

ಆದರೆ, ಬರಹದ ಭಾಷೆ ಹಾಗಲ್ಲ. ಬರಹದ ಭಾಷೆಯು ಎಲ್ಲಾ ಆಡುಮಾತಿನ ವೈವಿಧ್ಯದಿಂದ ಸಾಮಗ್ರಿಯನ್ನು ಪಡೆದು ಬೆಳೆಯುತ್ತದೆ. ಬರಹದ ಭಾಷೆಯನ್ನು ಬಳಸುತ್ತಾ ಹೋದ ಹಾಗೆ ಅದು ವಿವಿಧ ಆಡುಮಾತಿನ ಪ್ರಕಾರಗಳ ಮೇಲೆ ಪ್ರಭಾವ ಬೀರಬಹುದು, ಕೆಲವೊಮ್ಮೆ ವಿಶಿಷ್ಟ ಆಡುಮಾತಿನ ಶೈಲಿಯಿಂದ ತಾನೂ ಪ್ರಭಾವಕ್ಕೆ ಒಳಗಾಗಬಹುದು. ಆದರೂ ಬರಹದ ಭಾಷೆ ಒಂದು ರೀತಿ ಉದ್ದೇಶಪೂರ್ವಕವಾಗಿ ಬೆಳೆದುನಿಂತಿರುವ, ಅಖಿಲ ಕರ್ನಾಟಕ ಮಟ್ಟದ ಲಿಖಿತ ಅಥವಾ ಮುದ್ರಿತ ಸಂವಹನಕ್ಕಾಗಿ ವಿಕಾಸಹೊಂದಿರುವ ಶೈಲಿ. ಈ ಮಾದರಿಯ ಕನ್ನಡವು ಯಾವುದೇ ಪ್ರದೇಶದ ಮನೆಮಾತಾಗಿರುವುದಿಲ್ಲ. ಆದರೂ ಇದು ಎಲ್ಲರ ಕನ್ನಡ.

ಕನ್ನಡವನ್ನು ಅಭಿವ್ಯಕ್ತಿಗಾಗಿ ಬಳಸುವವರು, ಎಂದರೆ, ಕಥೆ, ಕಾದಂಬರಿ, ಕಾವ್ಯ, ನಾಟಕದಂತಹ ರಚನೆಗಳಲ್ಲಿ ಯಾವುದಾದರೂ ಪ್ರಾದೇಶಿಕ, ಸಾಂಸ್ಕೃತಿಕ, ಆಡುಮಾತಿನ ಶೈಲಿಯನ್ನು ಯಶಸ್ವಿಯಾಗಿ ಬಳಸಬಹುದು. ಆ ಕೆಲಸವನ್ನು ಚೆನ್ನಾಗಿ ಮಾಡಿದಾಗ, ಆ ಸಾಹಿತ್ಯದಲ್ಲಿ ಒಂದು ಪ್ರದೇಶದ, ಜಾತಿಯ, ಉದ್ಯೋಗದ ಸೊಗಡು ಎದ್ದು ಕಾಣುತ್ತದೆ. ಬರಹದ ಶೈಲಿಯಲ್ಲಿಯೂ ಒಂದೊಂದು ಕ್ಷೇತ್ರದ ಅಗತ್ಯಕ್ಕೆ ತಕ್ಕ ಹಾಗೆ ವಿಶಿಷ್ಟ ಶೈಲಿಗಳು ವಿಕಾಸ ಹೊಂದಿರುತ್ತವೆ. ಉದಾಹರಣೆಗೆ, ಆಡಳಿತ, ನ್ಯಾಯಾಂಗ, ಉದ್ದಿಮೆ, ಶಿಕ್ಷಣ, ಸಂಶೋಧನೆ, ವಿಜ್ಞಾನ, ಸಮಾಜವಿಜ್ಞಾನ, ವೈದ್ಯಕೀಯ ಹೀಗೆ ತಾಂತ್ರಿಕ ಬರಹದ ಭಾಷೆಯ ಸರ್ವೇಸಾಮಾನ್ಯ ಲಕ್ಷಣಗಳು ಕಂಡುಬಂದರೂ, ಮುಖ್ಯವಾಗಿ ಪಾರಿಭಾಷಿಕ ಪದಗಳ ಮಟ್ಟಿಗಾದರೂ ಆಯಾ ಕ್ಷೇತ್ರದ ಬರಹಶೈಲಿಯು ವಿಶಿಷ್ಟವಾಗಿರುತ್ತದೆ.

ಮತ್ತೆ ಮಾತಿನ ಶೈಲಿಗೆ ಹಿಂದಿರುಗೋಣ. ಪ್ರಾದೇಶಿಕ ಉಪಭಾಷೆಗಳಲ್ಲಿ ಮಾತನಾಡುವಾಗ ಅದು ಸ್ಥಳೀಯ ಸಂವಹನದ ಅಗತ್ಯಗಳನ್ನು ಸಮರ್ಥವಾಗಿ ನಿಭಾಯಿಸುವಂತೆ ಇರುತ್ತದೆ. ಅಲ್ಲಿಗೆ ಅದು ಸಾರ್ಥಕ. ಆದರೆ, ಬೀದರ್‌ನ ಒಬ್ಬರು ಅಖಿಲ ಕರ್ನಾಟಕ ಸಮಾವೇಶದಲ್ಲಿ ಉಳಿದ ಪ್ರಾದೇಶಿಕ ಭಾಷೆಯವರಿಗೂ ಅರ್ಥವಾಗುವ ಹಾಗೆ ಭಾಷಣ ಮಾಡಬೇಕು ಎಂದಾದರೆ, ಅವರು ತಮ್ಮ ಅಪ್ಪಟ ಮನೆ ಮಾತಿನಲ್ಲಿ ಮಾತನಾಡುವುದಿಲ್ಲ. ಬದಲಿಗೆ, ತಮ್ಮ ಉಪಭಾಷೆಯ ಮಿತಿಯನ್ನು ಮೀರಿ, ಬರಹದ ಭಾಷೆಯ ಶೈಲಿಯಿಂದ ನೆರವು ಪಡೆಯಲು ನೋಡುತ್ತಾರೆ. ಇದು ಇನ್ನೊಂದು ರೀತಿಯ ಶೈಲಿಯಾಗಿ ಹೊಮ್ಮುತ್ತದೆ.



ಅಖಿಲ ಕರ್ನಾಟಕ ಮಟ್ಟದಲ್ಲಿ ತಲುಪುವ ಉದ್ದೇಶವಿರುವ ಮುದ್ರಣ ಮಾಧ್ಯಮದ ಪತ್ರಿಕೆಗಳು, ನಿಯತಕಾಲಿಕಗಳು ಯಾವುದೇ ಪ್ರದೇಶದಲ್ಲಿ ಆಡುವ ಮಾತನ್ನು ಅನುಸರಿಸದೆ ಸರ್ವೇಸಾಮಾನ್ಯ ಬರಹದ ಶೈಲಿಯನ್ನು ಅನುಸರಿಸುತ್ತವೆ. ಅದೇ ರೀತಿ ರೇಡಿಯೊ, ಟಿ.ವಿ., ವಿಡಿಯೊದಂತಹ ಮಾಧ್ಯಮಗಳೂ ಅದೇ ಬರಹ ಭಾಷೆಯ ಆಡುಮಾತಿನ ರೂಪವೇನೋ ಎನ್ನವಂಥ ಭಾಷೆಯನ್ನು ಬಳಸುತ್ತವೆ. ಹೀಗೆ ಮಾಡುವಾಗ ಸಹಜವಾಗಿಯೇ ಪದ, ವಾಕ್ಯರಚನೆ, ಉಚ್ಚಾರಣೆ ಎಲ್ಲವೂ ಬರಹ ರೂಪದ ಭಾಷೆಯ ಶಿಷ್ಟತೆಯನ್ನು ಅನುಸರಿಸಬೇಕಾಗುತ್ತದೆ. ಅದಕ್ಕನುಗುಣವಾಗಿ ಅಲ್ಪಪ್ರಾಣ, ಮಹಾಪ್ರಾಣ, ಹ- ವ್ಯಂಜನದ ಬದಲು ಆ ಅಥವಾ ಅ ಸ್ವರವನ್ನು ಬಳಸುವುದು, ಸ,ಶ,ಷ ವ್ಯತ್ಯಾಸವಿಲ್ಲದೇ ಮಾತಾಡುವುದು ಅಪ್ಸರ-ಮಟ್ಟಿಗೆ ತಪ್ಪಾಗುತ್ತದೆ. ಕನ್ನಡದಲ್ಲಿ ದನ-ಧನ, ಆದರ-ಹಾದರ, ಹಕ್ಕಿ- ಅಕ್ಕಿ, ಶಂಕರ- ಸಂಕರದಂತಹ ಒಂದೇ ಧ್ವನಿಮಾದ ವ್ಯತ್ಯಾಸದಲ್ಲಿ ಅರ್ಥವೇ ಬದಲಾಗುವ ಸನ್ನಿವೇಶದಲ್ಲಂತೂ ಬರಹದ ಹಾಗೆ ಸ್ಪಷ್ಟ ಉಚ್ಚಾರಣೆಯೂ ಸರಿಯಾಗಿ ಇರಬೇಕಾಗುತ್ತದೆ.

ಕೊನೆಯದಾಗಿ, ಉಚ್ಚಾರಣೆ ಸರಿಯೋ ಉಚ್ಛಾರಣೆ ಸರಿಯೋ, ನೀವೇ ಹೇಳಿ!

ವಾಚಕರ ವಾಣಿ

ನಂಬಿಕೆ, ಭಾವನೆಗೆ ಧಕ್ಕೆ ಸರಿಯಲ್ಲ

'ಗಣಪತಿ ಪೂಜೆ ಅಥವಾ ಪ್ರಾರ್ಥನೆ ಮಾಡುವುದು ಮೌಢ್ಯದ ಆಚರಣೆ, ಅದರ ಬದಲು ವಚನಗಳನ್ನು ಪ್ರಚುರಪಡಿಸುವುದು, ಪಠಿಸುವುದು ನಿಜವಾದ ಪ್ರಾರ್ಥನೆ' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿರುವುದು (ಪ್ರ.ವಾ., ನ. 3) ಸರಿಯಲ್ಲ. ಅವರವರು ನಂಬಿರುವ ದೈವಗಳನ್ನು ಪೂಜಿಸುವುದು ಅವರ ವೈಯಕ್ತಿಕ ಸ್ವಾತಂತ್ರ್ಯ. ಗಣಪತಿ ದೇವರಲ್ಲ, ಕಲ್ಪನೆಯಲ್ಲಿ ಹುಟ್ಟಿಕೊಂಡ ದೇವರು ಹಾಗೂ ವಿಗ್ರಹಗಳು ದೇವರಲ್ಲ ಎಂಬ ಸ್ವಾಮೀಜಿಯ ಹೇಳಿಕೆಯು ಜನರ ನಂಬಿಕೆ, ಭಾವನೆಗಳನ್ನು ಗಾಸಿಗೊಳಿಸುವಂತಿದೆ. ಜನರ ಭಾವನೆಗಳಿಗೆ ಧಕ್ಕೆ ಉಂಟಾಗುವ ರೀತಿಯಲ್ಲಿ ಹೇಳಿಕೆ ನೀಡಿರುವುದು ಸರಿಯಲ್ಲ. ಎಲ್ಲಾ ಧರ್ಮದವರನ್ನು, ದೇವರುಗಳನ್ನು ಸಮಾನತೆಯಿಂದ ಕಂಡು ಗೌರವಿಸುವುದೇ ತಾವು ನಂಬಿರುವ ಧರ್ಮಕ್ಕೆ ಸಲ್ಲಿಸುವ ನಿಜವಾದ ನ್ಯಾಯ.

ಎಲ್.ಚಿನ್ನಪ್ಪ, ಬೆಂಗಳೂರು

ಅರಳಲಿ ಬದಲಾವಣೆಯ ಹೂವು

ಅಫ್ಗಾನಿಸ್ತಾನ ಎಂದಾಗ ನಮಗೆ ನೆನಪಾಗುವುದು ನರಮೇಧದ ತಾಲಿಬಾನ್ ಸಂಸ್ಕೃತಿ. ಮದ್ದು ಗುಂಡುಗಳ ವಿಕೃತಿ. ಆದರೆ ಅಫ್ಗಾನಿಸ್ತಾನವು ಭಾರತದಲ್ಲಿ ನಡೆಯುತ್ತಿರುವ ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಡುತ್ತಿರುವ ರೀತಿ ಅದನ್ನೆಲ್ಲ ಮರೆಸುವಂತಿದೆ. ಲೆಕ್ಕಕ್ಕುಂಟು ಆಟಕ್ಕಿಲ್ಲ ಎಂಬಂತೆ ಪುಟಾಣಿ ತಂಡವಾಗಿ ವಿಶ್ವಕಪ್ ಪ್ರವೇಶ ಪಡೆದ ಅಫ್ಗಾನಿಸ್ತಾನ ಇಂದು ಇಂಗ್ಲೆಂಡ್, ಪಾಕಿಸ್ತಾನ, ಶ್ರೀಲಂಕಾದಂತಹ ಬಲಿಷ್ಠ ತಂಡಗಳನ್ನು ಸೋಲಿಸಿ, ಸೆಮಿಫೈನಲ್ ಪ್ರವೇಶಿಸಲು ಪ್ರಬಲ ಪೈಪೋಟಿ ನೀಡುತ್ತಿದೆ.

ಪ್ರತಿ ಗೆಲುವಿನ ನಂತರವೂ ಅಫ್ಗಾನಿಸ್ತಾನದ ಆಟಗಾರರು ಅಬ್ಬರ, ಚೀರಾಟ, ಕಿರುಚಾಟದಂತಹ ಅತಿರೇಕದ ವರ್ತನೆಗಳಿಲ್ಲದೆ ಪ್ರಬುದ್ಧರಾಗಿ ವರ್ತಿಸುತ್ತಿದ್ದಾರೆ. ಅಫ್ಗನ್ ಆಟಗಾರರ ನಡೆ ವಿಶ್ವಕಪ್‌ನಲ್ಲಿ ಮಾದರಿಯಾಗಿದೆ. ಈ ಆಟಗಾರರ ವರ್ತನೆ ಕಾಬೂಲ್‌ನಲ್ಲಿ ಹೊಸ ಶಕೆ ಆರಂಭಿಸಲಿ. ಬಂದೂಕಿನ ನಳಿಕೆಯಲ್ಲಿ ಬದಲಾವಣೆಯ ಹೂವು ಅರಳಲಿ ಎಂಬುದೇ ಅಭಿಮಾನಿಗಳ ಆಶಯ.

ಅಂಬರೀಷ್ ಎಸ್. ಪೂಜಾರಿ, ಬಳ್ಳಾರಿ

ಅಸಂಬದ್ಧ ವಿಚಾರಗಳಿಗೆ ಮಹತ್ವ ಬೇಡ

ಚಂದ್ರಯಾನದಂತಹ ವಿಜ್ಞಾನದ ಸಾಧನೆಗಳನ್ನು ಮಕ್ಕಳಿಗೆ ಪರಿಚಯಿಸುವ ನೆಪದಲ್ಲಿ, ಪುರಾಣಕಾಲದ ಕಾಲ್ಪನಿಕ ಕತೆಗಳನ್ನು ಸತ್ಯವೆಂದೇ ನಂಬುವಂತೆ ಸೇರ್ಪಡೆ ಮಾಡಿರುವ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಅವೈಜ್ಞಾನಿಕ ನಡೆಯ ಬಗ್ಗೆ ಸಂಪಾದಕೀಯ (ಪ್ರ.ವಾ., ನ. 4) ಬೆಳಕು ಚೆಲ್ಲಿದೆ. ಅಧಿಕಾರಸ್ಥರು ತಮ್ಮ ಅಸ್ತಿತ್ವದ ಪ್ರಶ್ನೆ ಬಂದಾಗ, ತಮ್ಮ ಪಕ್ಷದ ಸಿದ್ಧಾಂತ ಸರಿಯೋ ತಪ್ಪೋ ಎಂಬುದನ್ನು ವಿವೇಚಿಸುವ ಗೊಡವೆಗೇ ಹೋಗದೆ ಅದನ್ನು ಸಮರ್ಥಿಸಿಕೊಳ್ಳುವುದನ್ನು ನಾವು ಕಾಣುತ್ತಲೇ ಬಂದಿದ್ದೇವೆ. ಆದರೆ ಹತ್ತಾರು ವರ್ಷಗಳ ಕಾಲ ಅಧ್ಯಯನ ಮಾಡಿ ಪ್ರೊಫೆಸರ್‌ಗಿರಿ ಗಿಟ್ಟಿಸಿಕೊಂಡ ಅನೇಕರು, ವಿಜ್ಞಾನ ಮಾತ್ರವಲ್ಲ ಇತರ ವಿಷಯಗಳ ಬಗ್ಗೆಯೂ ಹೆಚ್ಚಿನ ಅರಿವಿರದ ಸಣ್ಣ ಮಕ್ಕಳೂ ನಂಬಲಾರದಂತಹ ವಿಚಾರಗಳನ್ನು ರಾಜಾರೋಷವಾಗಿ ಸಮರ್ಥಿಸಿಕೊಳ್ಳುವ ಭರಾಟೆ ನಿಜಕ್ಕೂ ಸೋಜಿಗ ಹುಟ್ಟಿಸುತ್ತದೆ.

ನಂಬಿಕೆ ಬೇರೆ, ವಿಜ್ಞಾನ ಬೇರೆ ಎಂಬ ಸಣ್ಣ ಅಂಶವನ್ನೂ ಅರಿಯದ ಪ್ರಾಜ್ಞರು ಅಧಿಕಾರಸ್ಥರ ಓಲೈಕೆಗಾಗಿ ಎಂತಹ ಮಟ್ಟಕ್ಕಾದರೂ ಇಳಿಯಬಲ್ಲರು ಎಂಬುದನ್ನು ಈ ವಿದ್ಯಮಾನ ಜಗಜ್ಜಾಹೀರುಗೊಳಿಸಿದೆ. ತಾನು ಹೇಳಿದ್ದೇ ಸತ್ಯ ಎಂದು ವಿಜ್ಞಾನ ಹಟಕ್ಕೆ ಬೀಳುವುದಿಲ್ಲ. ಸದಾ ಪರಿಷ್ಕರಣೆಗೆ ಒಳಪಡುವ ಸತ್ಯಗಳನ್ನು ಅದು ಒಪ್ಪುತ್ತದೆ. ಆದರೆ ವಿತಂಡವಾದಿಗಳಿಗೆ ಇದು ಅರ್ಥವಾಗದು. ಎಳೆಯ ಮನಸ್ಸಿನೊಳಗೆ ಆಹ್ಲಾದಕರ, ಆಸಕ್ತಿಕರ ವಿಷಯಗಳನ್ನು ತುಂಬಬೇಕಾದವರೇ ಅರ್ಧ ಸತ್ಯಗಳನ್ನು, ಅಸಂಬದ್ಧ ವಿಚಾರಗಳನ್ನು ತುಂಬುವ ಮೂಲಕ ಅವರನ್ನು ನೂರಾರು ವರ್ಷ ಹಿಂದಕ್ಕೆ ಕೊಂಡೊಯ್ಯುವ ಕೆಲಸ ಮಾಡುತ್ತಾರಷ್ಟೇ. ಚಂದ್ರಯಾನ ಎಂಬ ಕೌತುಕ ಹಾಗೂ ಪ್ರೇರಣೆ ನೀಡುವ ವಿಜ್ಞಾನಕ್ಕೂ ತುಕ್ಕುಹಿಡಿದಿರುವ ಕಲ್ಪಿತ ಅಸತ್ಯಗಳನ್ನು ಹೇಗೆ ತುರುಕಲಾಗುತ್ತಿದೆ ಎಂಬ ಸತ್ಯವನ್ನು ನಾಡಿನ ಜನರಿಗೆ ಮನಗಾಣಿಸಿದ ಪತ್ರಿಕೆ ಅಭಿನಂದನಾರ್ಹ.

ಎಚ್.ಚಂದ್ರಪ್ಪ ನೀಲಗುಂದ, ಹರಪನಹಳ್ಳಿ

ಪ್ರಶಸ್ತಿ ನೀಡಿಕೆ: ಲೋಪವಾಗಿಲ್ಲ

ಶಿವಮೊಗ್ಗದ ಕರ್ನಾಟಕ ಸಂಘಕ್ಕೆ ಎರಡನೇ ಬಾರಿ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದನ್ನು ಗಿರಿಧರ ಕಾರ್ಕಳ ಅವರು ಪ್ರಶ್ನಿಸಿದ್ದಾರೆ (ವಾ.ವಾ., ನ. 4). ಅವರು ಹೇಳಿದಂತೆ, ಸಂಘಕ್ಕೆ 2007ರಲ್ಲಿ ಒಮ್ಮೆ ಬಂದಿರುವುದು ಕರ್ನಾಟಕ ಏಕೀಕರಣ ಪ್ರಶಸ್ತಿ. ಈಗ ದೊರೆತಿರುವುದು, ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿ 50 ವರ್ಷ ಸಂದಿರುವುದಕ್ಕೆ ಹತ್ತು ಸಂಘ ಸಂಸ್ಥೆಗಳನ್ನು ಸರ್ಕಾರವೇ ಆಯ್ಕೆ ಮಾಡಿ ಕೊಟ್ಟಿರುವ ಸುವರ್ಣ ಮಹೋತ್ಸವ ಪ್ರಶಸ್ತಿ. ಈ ವಿಷಯವನ್ನು ಸ್ವತಃ ಮುಖ್ಯಮಂತ್ರಿಯವರೇ ರಾಜ್ಯೋತ್ಸವ ಪ್ರಶಸ್ತಿ ಸಮಾರಂಭದಲ್ಲಿ ಬಹಿರಂಗವಾಗಿ ತಿಳಿಸಿದ್ದಾರೆ. ಆದ್ದರಿಂದ, ಸದರಿ ಪ್ರಶಸ್ತಿಯನ್ನು ಕರ್ನಾಟಕ ಸಂಘ ಪಡೆದಿರುವುದರಲ್ಲಿ ಯಾವ ಲೋಪವೂ ಆಗಿಲ್ಲ.

ಎಸ್.ಜಿ.ಆನಂದ್, ಶಿವಮೊಗ್ಗ

ಅಂಗಾಂಗ ದಾನ: ಅರಿವು ಮೂಡಲಿ

ಸಮಾಜದಲ್ಲಿ ಆನುವಂಶೀಯತೆ, ರಸ್ತೆ ಅಪಘಾತದಂತಹ ಕಾರಣಗಳಿಂದ ಅಂಗಾಂಗ ವೈಫಲ್ಯವುಂಟಾಗಿ ಬಳಲುತ್ತಿರುವ ರೋಗಿಗಳ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿದೆ. ಇದರಿಂದ ಬಹಳಷ್ಟು ಜನರಿಗೆ ಅಂಗಾಂಗಗಳ ಅವಶ್ಯಕತೆ ಇದ್ದು, ಅವುಗಳ ಪೂರೈಕೆಯ ಪ್ರಮಾಣದಲ್ಲಿ ಹಿನ್ನಡೆಯಾಗಿದೆ. ಏಕೆಂದರೆ, ವ್ಯಕ್ತಿಯೊಬ್ಬ ಸತ್ತ ನಂತರ ಆತ್ಮವು ಬೇರ್ಪಡುತ್ತದೆ, ದೇಹವನ್ನು ಮಣ್ಣು ಮಾಡಿದರೆ ಆತ್ಮಕ್ಕೆ ತೃಪ್ತಿಯಾಗುತ್ತದೆ ಎಂಬ ನಂಬಿಕೆ ಇರುವುದರಿಂದ, ಅಂಗಾಂಗ ದಾನ ಮಾಡುವವರ ಸಂಖ್ಯೆ ತುಂಬಾ ಕಡಿಮೆ. ಅಂಗಾಂಗ ದಾನ ಮಾಡಿದವರಿಗೆ ಸರ್ಕಾರಿ ಗೌರವ, ನಮನಗಳೊಂದಿಗೆ ಅಂತಿಮಸಂಸ್ಕಾರ ನೆರವೇರಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಘೋಷಿಸಿರುವುದು ಈ ದಿಸೆಯಲ್ಲಿ ತುಂಬಾ ಪ್ರಯೋಜನಕಾರಿ.

ಇದರ ಜೊತೆಯಲ್ಲಿ, ಅಂಗಾಂಗಗಳನ್ನು ದಾನ ಮಾಡುವುದರ ಮಹತ್ವ ಹಾಗೂ ಅದರ ಪ್ರಯೋಜನಗಳನ್ನು ಜನರಿಗೆ ತಿಳಿಸುವುದಕ್ಕೆ ಪೂರಕವಾಗಿ ಒಂದು ಅಭಿಯಾನ ಆರಂಭಿಸಬೇಕು. ಈ ದಿಸೆಯಲ್ಲಿ ಸಹಾಯವಾಣಿ ತೆರೆಯುವುದು, ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಅಂಗಾಂಗ ದಾನಕ್ಕೆ ಪ್ರತ್ಯೇಕ ವಿಭಾಗವನ್ನು ತೆರೆಯುವುದರಿಂದ ಜನರಲ್ಲಿ ಈ ಬಗ್ಗೆ ಅರಿವು ಮೂಡುತ್ತದೆ.

ಕೀರ್ತಿ ಎ., ಅಂಕನಹಳ್ಳಿ, ಸಾಲಿಗ್ರಾಮ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಯೇತರ ಪಕ್ಷಗಳಿರುವ ರಾಜ್ಯ ಸರ್ಕಾರಗಳಿಗೆ ರಾಜ್ಯಪಾಲರ ಕಿರುಕುಳ

ಬಿಜೆಪಿಯೇತರ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಸರ್ಕಾರ ಹಾಗೂ ರಾಜ್ಯಪಾಲರ ನಡುವಣ ತಿಕ್ಕಾಟ ತಾರಕಕ್ಕೇರುತ್ತಿದೆ. ಕೇರಳ, ತಮಿಳುನಾಡು, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಇರುವ ಸರ್ಕಾರಗಳು ಆಯಾ ರಾಜ್ಯಪಾಲರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿವೆ. ದೆಹಲಿ, ಮಹಾರಾಷ್ಟ್ರದಲ್ಲಿ ನಡೆದ ಇಂತಹ ಬೆಳವಣಿಗೆಗಳ ಸಂದರ್ಭಗಳಲ್ಲಿ ರಾಜ್ಯಪಾಲರು 'ರಾಜಕೀಯ' ಮಾಡಬಾರದು ಎಂಬಂಥ ತೀರ್ಪುಗಳನ್ನು ಸುಪ್ರೀಂ ಕೋರ್ಟ್ ನೀಡಿದೆ

ಪ್ರಜಾವಾಣಿ ವಾರ್ತೆ

ಕೇಂದ್ರದಲ್ಲಿ ಇರುವ ಸರ್ಕಾರದ ಶಿಫಾರಸಿನ ಮೇಲೆ ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಿಸುತ್ತಾರೆ. ರಾಜ್ಯ ಸರ್ಕಾರಗಳನ್ನು ಆಯಾ ರಾಜ್ಯದ ಜನರು ಆಯ್ಕೆ ಮಾಡುತ್ತಾರೆ. ಹೀಗಿರುವಾಗ ಯಾರಿಗೆ ಹೆಚ್ಚು ಅಧಿಕಾರ ಇರಬೇಕು ಎನ್ನುವ ಚರ್ಚೆ ಈಗ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ರಾಜ್ಯ ಸರ್ಕಾರಗಳಿಗೇ ಹೆಚ್ಚು ಅಧಿಕಾರ ಎನ್ನುವುದನ್ನು ಸಂವಿಧಾನವೂ ಹೇಳಿದೆ. ಹಾಗಾದರೆ, ರಾಜ್ಯಪಾಲರ ಅಗತ್ಯ ಏನಿದೆ? ರಾಜ್ಯಗಳಲ್ಲಿ ಸರ್ಕಾರಗಳು ಇರುವಾಗ ಕೇಂದ್ರ ಸರ್ಕಾರದ 'ಅಂಶ'ದಂತಿರುವ ರಾಜ್ಯಪಾಲರ ಅಗತ್ಯ ಏನು? ಎಂಬಂಥ ಚರ್ಚೆಗಳೂ ಪ್ರಾರಂಭವಾಗಿವೆ.

ರಾಜ್ಯಗಳು 'ಫೆಡರಲ್' ಆಗಿರಬೇಕೊ ಅಥವಾ ಅವು 'ಯೂನಿಯನ್' ಆಗಿರಬೇಕೊ ಎನ್ನುವಲ್ಲಿ ರಾಜ್ಯಪಾಲರ ಹುದ್ದೆಯ ಬಗ್ಗೆ ಪ್ರಶ್ನೆ ಉದ್ಭವಿಸುತ್ತದೆ. ಸಂವಿಧಾನದಲ್ಲಿ ಹೇಳಲಾಗಿರುವ 'ಯೂನಿಯನ್' ಪದವನ್ನು ಸರಿಯಾಗಿ ಅರ್ಥೈಸದ ಹೊರತು ಅಥವಾ ರಾಜ್ಯಗಳು 'ಫೆಡೆರಲ್' ಆಗದ ಹೊರತು ಮುಂದೊಂದು ದಿನ ಸಮಸ್ಯೆಗಳನ್ನು ದೇಶ ಎದುರಿಸುತ್ತದೆ ಎಂಬ ವಿಚಾರ ಸಂವಿಧಾನ ಕರಡು ರಚನಾ ಸಭೆಯಲ್ಲಿಯೇ ಚರ್ಚಿತವಾಗಿತ್ತು. ಸಂವಿಧಾನದ 1ನೇ ವಿಧಿಯ ಕುರಿತ ಚರ್ಚೆಯ ವೇಳೆ, ಕೆಲವು ಮಹತ್ವದ ವಿಷಯಗಳು ಪ್ರಸ್ತಾಪವಾಗಿದ್ದವು. ರಾಜ್ಯಗಳು 'ಫೆಡರಲ್' ಆಗಿರಬೇಕು ಎಂಬ ಚರ್ಚೆ ನಡೆದಿದೆ. 1ನೇ ವಿಧಿಯಲ್ಲಿ ಹೇಳಿರುವಂತೆ 'ರಾಜ್ಯ' ಎಂದು ಸಂಬೋಧಿಸದೆ, ಅವುಗಳನ್ನು 'ಪ್ರಾವಿನ್ಸ್' ಎಂದು ಕರೆಯಬೇಕು ಎಂದು ಮದ್ರಾಸ್ ಪ್ರಾಂತ್ಯದ ಸದಸ್ಯರಾಗಿದ್ದ ಮೆಹಬೂಬ್ ಅಲಿಭಾಗ್ ಸಾಹಿಬ್ ಬಹದ್ದೂರ್ ಅವರು ತಿದ್ದುಪಡಿ ಸೂಚಿಸಿದ್ದರು.

ಸಾಹಿಬ್ ಬಹದ್ದೂರ್ ಏನು ಹೇಳಿದ್ದರು?: 'ಕರಡು ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ಸರ್ಕಾರವು 'ಫೆಡರಲ್' ಆಗಿರಬೇಕು ಹೊರತು 'ಯೂನಿಟರಿ' ಸ್ವರೂಪದ್ದಲ್ಲ. ಆದ್ದರಿಂದ ಸರ್ಕಾರವನ್ನು ಫೆಡರಲ್ ಸರ್ಕಾರ ಎಂದೂ ಕರೆಯಬಹುದು ಅಥವಾ ಯೂನಿಯನ್ ಸರ್ಕಾರ ಅಂತಲೂ ಕರೆಯಬಹುದು ಎಂದು ಡಾ. ಅಂಬೇಡ್ಕರ್ ಅವರು ಹೇಳಿದ್ದಾರೆ. ಇನ್ನೂ ಮುಂದುವರಿದು, 'ಯೂನಿಯನ್' ಎಂದೇ ಕರೆಯಬೇಕು. ಇಲ್ಲವಾದರೆ, ರಾಜ್ಯಗಳು ಸಿಡಿದು, ಬೇರ್ಪಟ್ಟು ಹೋಗಬಹುದು ಎಂದೂ ಅವರು ಹೇಳಿದ್ದಾರೆ'.

'ಯೂನಿಯನ್' ಎಂಬ ಪದಕ್ಕೆ ಅಂಥ ಮಹತ್ವವೇನಿಲ್ಲ ಎನ್ನುವುದು ಅಂಬೇಡ್ಕರ್ ಅವರ ವಾದವಾದರೆ, ನಾವೇಕೆ 'ಫೆಡರಲ್' ಎನ್ನುವ ಸೂಕ್ತವಾದ ಪದವನ್ನು ಬಳಸಬಾರದು? 'ಯೂನಿಯನ್' ಪದವನ್ನೇ ಬಳಸಿದೆವು ಎಂದಾದರೆ, ಮುಂದೊಂದು ದಿನ ಅಧಿಕಾರದ ಲಾಲಸೆ ಇರುವ ಸರ್ಕಾರವೊಂದು ಅಧಿಕಾರಕ್ಕೆ ಬಂದರೆ, ಅದು ಇಡೀ ವ್ಯವಸ್ಥೆಯನ್ನು ಏಕಾಧಿಪತ್ಯಕ್ಕೆ ತಳ್ಳಬಹುದು. ಜೊತೆಗೆ, ಆ ಸರ್ಕಾರವು ಫ್ಯಾಸಿಸ್ಟ್ ಆಗಬಹುದು ಹಾಗೂ ನಿರಂಕುಶವಾಗಬಹುದು' ಎಂಬುದು ಅವರ ಪ್ರತಿಪಾದನೆಯಾಗಿತ್ತು.

ಜತೆಗೆ, ರಾಜ್ಯ ಮತ್ತು ಒಕ್ಕೂಟ ಸರ್ಕಾರದ ಸಂಬಂಧ ಹಾಗೂ ಅಧಿಕಾರ ಹಂಚಿಕೆಯನ್ನು ಸರಿಯಾಗಿ ಮಾಡಬೇಕು. ಇಲ್ಲದಿದ್ದಲ್ಲಿ, ರಾಜ್ಯ ಸರ್ಕಾರಗಳ ಅಧಿಕಾರ ಮೊಟಕಾಗುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದರು. ಅಂಬೇಡ್ಕರ್ ಅವರು ಈ ತಿದ್ದುಪಡಿಯನ್ನು ಒಪ್ಪುವುದಿಲ್ಲ. ತಿದ್ದುಪಡಿಯನ್ನು ಮತಕ್ಕೆ ಹಾಕಲಾಗುತ್ತದೆ. ಮತದಲ್ಲಿ ತಿದ್ದುಪಡಿಯ ಪ್ರಸ್ತಾವವು ಸೋಲುತ್ತದೆ.

ಆದರೆ, ಆ ತಿದ್ದುಪಡಿಗೆ ಸೋಲಾದ ಹಲವು ದಶಕಗಳ ನಂತರದಲ್ಲಿ ರಾಜ್ಯ ಸರ್ಕಾರಗಳು ಮತ್ತು ರಾಜ್ಯಪಾಲರ ಮಧ್ಯೆ ಸಂಘರ್ಷ ತೀವ್ರವಾಗುತ್ತದೆ. ರಾಜ್ಯ ಸರ್ಕಾರಗಳು ದೈನಂದಿನ ಕಾರ್ಯಗಳನ್ನು ಮಾಡದಿರುವ ಮಟ್ಟಿಗೆ ಅವುಗಳನ್ನು ಕಟ್ಟಿಹಾಕಲು ರಾಜ್ಯಪಾಲರ ಅಧಿಕಾರವು ಬಳಕೆಯಾಗುತ್ತಿದೆ.

ಇಕ್ಕಟ್ಟಿಗೆ ಸಿಲುಕಿಸುವಷ್ಟು ಇದೆ ಅಧಿಕಾರ

ರಾಜ್ಯಪಾಲರೇ ರಾಜ್ಯ ಸರ್ಕಾರದ ಮುಖ್ಯಸ್ಥ. ರಾಜ್ಯದ ಎಲ್ಲಾ ಕಾಯ್ದೆ-ಕಟ್ಟಳೆಗಳು, ನೇಮಕಾತಿ ಆದೇಶಗಳು, ವಿವಿಧ ಆದೇಶಗಳು ಅನುಷ್ಠಾನ ಯೋಗ್ಯವಾಗುವುದು ರಾಜ್ಯಪಾಲರ ಅಂಕಿತ ಬಿದ್ದನಂತರವೇ. ಇವೆಲ್ಲವೂ ಮುಖ್ಯಮಂತ್ರಿ ನೇತೃತ್ವದ ಸಚಿವ ಸಂಪುಟದ ಒಪ್ಪಿಗೆ ಪಡೆದು, ನಂತರದಲ್ಲಿ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಅನುಮೋದನೆ ನೀಡಿದ ಬಳಿಕವೇ ರಾಜ್ಯಪಾಲರ ಬಳಿಗೆ ಬರುತ್ತವೆ. ಅವುಗಳಿಗೆ ಅಂಕಿತ ಹಾಕುವುದು ರಾಜ್ಯಪಾಲರ ಕರ್ತವ್ಯ (ಸಂವಿಧಾನದ 200ನೇ ವಿಧಿ).

ಮೇಲ್ನೋಟಕ್ಕೆ ರಾಜ್ಯಾಪಾಲರಿಗೆ ಏನೂ ಅಧಿಕಾರವಿಲ್ಲ, ಅವರು ರಬ್ಬರ್ ಸ್ಟ್ಯಾಂಪ್ ಎಂಬಂತೆ ಭಾಸವಾಗುತ್ತದೆ. ಆದರೆ, ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಮತ್ತು ರಾಜ್ಯದ ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸುವಷ್ಟು ಅಧಿಕಾರ ರಾಜ್ಯಪಾಲರಿಗೆ ಇದೆ. ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ತಮ್ಮ ಬಳಿಗೆ ಬಂದ ಮಸೂದೆಗಳನ್ನು ವಿಲೇವಾರಿ ಮಾಡದೆ, ವರ್ಷಗಳ ಕಾಲ ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. (ತಮಿಳುನಾಡಿನ ನೀಟ್ ಮಸೂದೆ, ಕೇರಳದ ವಿಶ್ವವಿದ್ಯಾಲಯದ ತಿದ್ದುಪಡಿ ಕಾನೂನು ಮಸೂದೆಗಳು ಇದಕ್ಕೆ ಸ್ಪಷ್ಟ ಉದಾಹರಣೆ). ಇದೇ ಆಯಾ ರಾಜ್ಯಗಳ ಸರ್ಕಾರ ಮತ್ತು ರಾಜ್ಯಪಾಲರ ನಡುವಣ ಸಂಘರ್ಷಕ್ಕೆ ಕಾರಣವಾಗಿದೆ.

ರಾಜ್ಯಪಾಲರು ಇಂತಿಷ್ಟೇ ಸಮಯದಲ್ಲಿ ಮಸೂದೆಗಳನ್ನು ವಿಲೇವಾರಿ ಮಾಡಬೇಕು ಎಂದು ಸಂವಿಧಾನವು ಕಾಲಮಿತಿ ನಿಗದಿ ಮಾಡಿಲ್ಲ. ಈ ಸಮಸ್ಯೆಯನ್ನು ತೊಡೆದುಹಾಕಲು, ನೀವೇ ಕಾಲಮಿತಿಯನ್ನು ನಿಗದಿ ಮಾಡಿ ಎಂದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ತನ್ನ ಅರ್ಜಿಯಲ್ಲಿ ಮನವಿ ಮಾಡಿಕೊಂಡಿದೆ.

ಪಂಜಾಬ್

ಬನ್ವರಿಲಾಲ್ ಪುರೋಹಿತ್

ಪಂಜಾಬ್‌ನಲ್ಲಿ ಎಎಪಿ ಸರ್ಕಾರವಿದ್ದು, ಬನ್ವರಿಲಾಲ್ ಪುರೋಹಿತ್ ಅವರು ರಾಜ್ಯಪಾಲರಾಗಿದ್ದಾರೆ. ಹಲವು ಮಸೂದೆಗಳನ್ನು ರಾಜ್ಯಪಾಲರು ತಡೆಹಿಡಿದ ಕಾರಣ ಸಂಘರ್ಷ ಆರಂಭವಾಗಿತ್ತು. ಉಚಿತ ವಿದ್ಯುತ್ ಯೋಜನೆಗೆ ರಾಜ್ಯಪಾಲರು ಅಂಕಿತ ಹಾಕಿರಲಿಲ್ಲ. ಇದರ ವಿರುದ್ಧ ಸರ್ಕಾರ ಬಹಿರಂಗವಾಗಿ ಟೀಕೆ ಮಾಡಿತ್ತು. ಅದರ ಬೆನ್ನಲ್ಲೇ ಪುರೋಹಿತ್ ಅವರು ಯೋಜನೆಗೆ ಅನುಮೋದನೆ ನೀಡಿದ್ದರು. ಇನ್ನೂ ಹಲವು ಮಸೂದೆಗಳಿಗೆ ಅಂಕಿತ ಹಾಕದೇ ಅವರು ತಮ್ಮ ಬಳಿಯೇ ಉಳಿಸಿಕೊಂಡಿದ್ದರು. ಅದರ ವಿರುದ್ಧ ಸರ್ಕಾರವು ಈಚೆಗಷ್ಟೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅದರ ಮರುದಿನವೇ ಪುರೋಹಿತ್ ಅವರು ತಮ್ಮ ಬಳಿ ಇದ್ದ ಎಲ್ಲಾ ಮಸೂದೆಗಳಿಗೆ ಸಹಿ ಮಾಡಿದ್ದರು.

ಪಶ್ಚಿಮ ಬಂಗಾಳ



ಸಿ.ವಿ. ಆನಂದ್ ಬೋಸ್

ಇಲ್ಲಿ ಟಿಎಂಸಿ ಸರ್ಕಾರವಿದ್ದು, ಈ ಹಿಂದೆ ಜಗದೀಪ್ ಧನಕರ್ ಅವರು ರಾಜ್ಯಪಾಲರಾಗಿದ್ದರು. ಧನಕರ್ ಮತ್ತು ಸರ್ಕಾರದ ಸಂಘರ್ಷಗಳು ದೇಶದ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿದ್ದವು. ಈಗ ಸಿ.ವಿ. ಆನಂದ್ ಬೋಸ್ ಅವರು ರಾಜ್ಯಪಾಲರಾಗಿದ್ದಾರೆ. ರಾಜ್ಯಪಾಲ ಮತ್ತು ಸರ್ಕಾರದ ಮಧ್ಯೆ ಇಲ್ಲಿ ಆಡಳಿತಾತ್ಮಕ ಗುದ್ದಾಟ ನಡೆಯುತ್ತಿದೆ. ಕುಲಪತಿಗಳ ನೇಮಕದ ಅಧಿಕಾರವನ್ನು ಸರ್ಕಾರಕ್ಕೆ ನೀಡುವ ಮಸೂದೆಗೆ ಆನಂದ್ ಅವರು ಅಂಕಿತ ಹಾಕಿಲ್ಲ. ಜೊತೆಗೆ, ಇನ್ನು ಹಲವು ಮಸೂದೆಗಳಿಗೆ ಅಂಕಿತ ಹಾಕಿಲ್ಲ.

ತೆಲಂಗಾಣ

ತಮಿಳ್ ಇಸೈ

ತೆಲಂಗಾಣ ರಾಜ್ಯಪಾಲೆ ತಮಿಳ್ ಇಸೈ ಸೌಂದರರಾಜನ್ ಮತ್ತು ರಾಜ್ಯದ ಬಿಆರ್‌ಎಸ್ ಸರ್ಕಾರದ ಸಂಬಂಧ ಉತ್ತಮವಾಗೇನೂ ಇಲ್ಲ. ಇಲ್ಲಿ ಮಸೂದೆಗಳು, ಆದೇಶಗಳನ್ನು ತಡೆಹಿಡಿಯುವಂತಹ ಸಂಘರ್ಷ ರಾಜ್ಯಪಾಲರು ಮತ್ತು ಸರ್ಕಾರದ ಮಧ್ಯೆ ಇಲ್ಲ. ಆದರೆ, ಸರ್ಕಾರದ ನಡೆ ಮತ್ತು ಕಾರ್ಯವೈಖರಿಯನ್ನು ತಮಿಳ್ ಇಸೈ ಅವರು ಹಲವು ಬಾರಿ ಬಹಿರಂಗವಾಗಿಯೇ ಟೀಕಿಸಿದ್ದಾರೆ. ಮಹಿಳೆ ಎಂಬ ಕಾರಣಕ್ಕೆ ತಮ್ಮನ್ನು ಸರ್ಕಾರವು ಕೆಟ್ಟದಾಗಿ ನಡೆಸಿಕೊಂಡಿದೆ ಎಂದು ತಮಿಳ್ ಇಸೈ ಅವರು ಹಲವು ಬಾರಿ ಹೇಳಿದ್ದಾರೆ. ರಾಜ್ಯಪಾಲರು ಪಕ್ಷವೊಂದರ ಪ್ರತಿನಿಧಿಯಂತೆ ವರ್ತಿಸುತ್ತಿದ್ದಾರೆ ಎಂದು ಬಿಆರ್‌ಎಸ್ ಹೇಳಿತ್ತು.

ಜಾರ್ಖಂಡ್



ಸಿ.ಪಿ. ರಾಧಾಕೃಷ್ಣನ್

ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ ಮೈತ್ರಿ ಸರ್ಕಾರವಿದೆ. ಈ ಹಿಂದೆ ರಮೇಶ್ ಬೈಸ್ ಅವರು ರಾಜ್ಯಪಾಲರಾಗಿದ್ದರು. ಈಗ ಸಿ.ಪಿ. ರಾಧಾಕೃಷ್ಣನ್ ಅವರು ರಾಜ್ಯಪಾಲರಾಗಿದ್ದಾರೆ. 20 ಮಸೂದೆಗಳಿಗೆ ಬೈಸ್ ಅವರು ಅಂಕಿತ ಹಾಕಲಿಲ್ಲ. ಆದರೆ, ಅಧಿಕಾರ ದುರ್ಬಳಕೆ ಆರೋಪದಲ್ಲಿ ಮುಖ್ಯಮಂತ್ರಿ ಹೇಮಂತ್ ಸೋರೇನ್ ವಿರುದ್ಧ ಕ್ರಮ ತೆಗೆದುಕೊಳ್ಳುಂತೆ ಚುನಾವಣಾ ಆಯೋಗ ಮಾಡಿದ್ದ ಶಿಫಾರಸನ್ನು ಬೈಸ್ ಅವರು ಕಾರ್ಯಗತ ಮಾಡಿರಲಿಲ್ಲ. ಅದರ ಬೆನ್ನಲ್ಲೇ ಬೈಸ್ ಅವರನ್ನು ಮಹಾರಾಷ್ಟ್ರದ ರಾಜ್ಯಪಾಲರಾಗಿ ನೇಮಕ ಮಾಡಲಾಯಿತು. ಈಗ ರಾಧಾಕೃಷ್ಣನ್ ಅವರೂ ಬೈಸ್ ಅವರ ತಂತ್ರವನ್ನು ಮುಂದುವರಿಸಿದ್ದಾರೆ.

ಕೇರಳ

ಆರಿಫ್ ಮೊಹಮ್ಮದ್

ರಾಜ್ಯ ಸರ್ಕಾರದ ವಿಶ್ವವಿದ್ಯಾಲಯ ನಿಯಮಗಳ ತಿದ್ದುಪಡಿ ಮಸೂದೆ, ಕೇರಳ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ ಮತ್ತು ಕೇರಳ ಲೋಕಾಯುಕ್ತ ಮಸೂದೆಗಳನ್ನು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಅಂಕಿತ ಹಾಕದೇ ಮೂರು ವರ್ಷಗಳಿಂದ ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. ಇದಲ್ಲದೇ ಇನ್ನೂ ಐದು ಮಸೂದೆಗಳಿಗೆ ಅಂಕಿತ ಹಾಕದೆ, ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ತಮ್ಮ ಬಳಿ ಇರಿಸಿಕೊಂಡಿದ್ದಾರೆ. ಇದು ಆರಿಫ್ ಮತ್ತು ಕೇರಳ ಸರ್ಕಾರದ ನಡುವಣ ಜಟಾಪಟಿಗೆ ಕಾರಣವಾಗಿದೆ. ರಾಜ್ಯಪಾಲರ ನಡೆಯ ವಿರುದ್ಧ ಕೇರಳ ಸರ್ಕಾರವು ವಿಧಾನಸಭೆಯಲ್ಲಿ ನಿರ್ಣಯವನ್ನೂ ಮಂಡಿಸಿದೆ.

ತಮಿಳುನಾಡು

ರವಿ

ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರವಿದೆ. ಆರ್.ಎನ್. ರವಿ ಇಲ್ಲಿನ ರಾಜ್ಯಪಾಲರು. ರವಿ ಅಧಿಕಾರವಹಿಸಿಕೊಂಡ ದಿನದಿಂದಲೂ ಅವರ ಮತ್ತು ಸರ್ಕಾರದ ಮಧ್ಯ ತಿಕ್ಕಾಟ ನಡೆಯುತ್ತಲೇ ಇದೆ. 19 ಮಸೂದೆಗಳು ಮತ್ತು 20ಕ್ಕೂ ಹೆಚ್ಚು ಸೂಚನೆಗಳು ರಾಜ್ಯಪಾಲರ ಬಳಿ ವಿಲೇವಾರಿಯಾಗದೇ ಉಳಿದಿವೆ. ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಬೇಕಿದ್ದ ಭಾಷಣವನ್ನು ಸರ್ಕಾರ ಸಿದ್ಧಪಡಿಸಿತ್ತು. ಆದರೆ, ಆ ಭಾಷಣದಲ್ಲಿದ್ದ ಹಲವು ಅಂಶಗಳನ್ನು ಕೈಬಿಟ್ಟು ರವಿ ಅವರು ತಮ್ಮದೇ ಭಾಷಣವನ್ನು ಓದತೊಡಗಿದರು. ಇದರ ವಿರುದ್ಧ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಕ್ಷಣವೇ ನಿರ್ಣಯವನ್ನು ಮಂಡಿಸಲು ಆರಂಭಿಸಿದರು.

ಆಧಾರ: ಪಿಟಿಐ, ಸಂವಿಧಾನ ಕರಡು ರಚನಾ ಚರ್ಚೆ

'ದಿಲ್ ಖುಷ್'ಗೆ ಡಾರ್ಲಿಂಗ್ ಕೃಷ್ಣ ಸಾಥ್

ಬಹುತೇಕ ಹೊಸಬರೇ ಇರುವ 'ದಿಲ್ ಖುಷ್' ಚಿತ್ರದ ಟೀಸರ್ ಅನ್ನು ನಟ ಡಾರ್ಲಿಂಗ್ ಕೃಷ್ಣ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ನವಿರಾದ ಪ್ರೇಮಕಥೆ ಹೊಂದಿರುವ ಚಿತ್ರವನ್ನು ಪ್ರಮೋದ್ ಜಯ ನಿರ್ದೇಶಿಸಿದ್ದಾರೆ.

''ಚಿತ್ರದಲ್ಲಿ 'ದಿಲ್ಮಯ' ನಾಯಕಿಯ ಹೆಸರಾದರೆ, 'ಕುಷಾಲ್' ನಾಯಕನ ಹೆಸರು. ಚಿತ್ರೀಕರಣ ಮುಕ್ತಾಯಗೊಂಡಿದ್ದು ನಂತರದ ಕೆಲಸಗಳು ಪ್ರಗತಿಯಲ್ಲಿವೆ. ಬೆಂಗಳೂರು, ಸೋಮವಾರಪೇಟೆ, ಶನಿವಾರಸಂತೆ ಮುಂತಾದೆಡೆ ಚಿತ್ರೀಕರಣ ಮಾಡಿದ್ದೇವೆ'' ಎಂದರು ನಿರ್ದೇಶಕರು.

ರಂಜಿತ್ ಚಿತ್ರದ ನಾಯಕನಾಗಿ, ಸ್ಪಂದನ ಸೋಮಣ್ಣ ನಾಯಕಿಯಾಗಿ ಅಭಿನಯಿಸಿದ್ದಾರೆ. ರಂಗಾಯಣ ರಘು, ಅರುಣಾ ಬಾಲರಾಜ್, ಧರ್ಮಣ್ಣ ಕಡೂರು ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಜಯಲಕ್ಷ್ಮಿ ಪ್ರವೀಣ್ ಹಾಗೂ ಪ್ರಭ ಶೇಖರ್ ನಿರ್ಮಿಸಿರುವ ಚಿತ್ರಕ್ಕೆ ಪ್ರಸಾದ್ ಕೆ ಶೆಟ್ಟಿ ಸಂಗೀತ, ನಿವಾಸ್ ನಾರಾಯಣ್ ಛಾಯಾಗ್ರಹಣವಿದೆ.

ರಂಜಿತ್, ಸ್ಪಂದನ ಸೋಮಣ್ಣ

'ಸರಳ ಪ್ರೇಮ ಕಥೆ' ಮುಗಿಸಿದ ವಿನಯ್

ಸಿಂಪಲ್ ಸುನಿ ನಿರ್ದೇಶಿಸಿ, ವಿನಯ್ ರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿರುವ 'ಒಂದು ಸರಳ ಪ್ರೇಮ ಕಥೆ' ಚಿತ್ರದ ಚಿತ್ರೀಕರಣ ಮೈಸೂರಿನಲ್ಲಿ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ಈ ಚಿತ್ರದಲ್ಲಿ ವಿನಯ್ ತಂದೆ ರಾಘವೇಂದ್ರ ರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಶೀರ್ಷಿಕೆಯಂತೆ ಇದೊಂದು ಸರಳವಾದ ಪ್ರೇಮಕಥೆ. ಸಿನಿಮಾದ ನಾಯಕ ಸಂಗೀತ ನಿರ್ದೇಶಕನ ಪಾತ್ರಧಾರಿ ಆಗಿರುವುದರಿಂದ ಸಂಗೀತಮಯ ಪಯಣ ಇದಾಗಿರಲಿದೆ. ಒಟ್ಟು 11 ಹಾಡುಗಳಿದ್ದು, ಮೈಸೂರಿನಲ್ಲಿ ನಮ್ಮ ಆಲ್ಬಂ ಪ್ಲೇ ಮಾಡಿಕೊಂಡು ಕಾರಿನಲ್ಲಿ ಹೊರಟರೆ ಹಾಡುಗಳು ಮುಗಿಯುವ ಹೊತ್ತಿಗೆ ಬೆಂಗಳೂರು ತಲುಪಿರುತ್ತೀರಿ. ಮುಂಬೈ, ರಾಜಸ್ಥಾನ, ಬೆಂಗಳೂರು, ಮೈಸೂರಿನಲ್ಲಿ 83 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ' ಎಂದರು ನಿರ್ದೇಶಕ ಸುನಿ.

ಮೈಸೂರು ರಮೇಶ್ ಚಿತ್ರಕ್ಕೆ ಬಂಡವಾಳ ಹೂಡಿದ್ದು, ನಟಿ ಸ್ವಾತಿಷ್ಠ ಕೃಷ್ಣನ್, 'ರಾಧಾಕೃಷ್ಣ' ಧಾರಾವಾಹಿ ಖ್ಯಾತಿಯ ಮಲ್ಲಿಕಾ ಸಿಂಗ್ ಚಿತ್ರದಲ್ಲಿ ವಿನಯ್‌ಗೆ ಜೋಡಿಯಾಗಿದ್ದಾರೆ. ರಾಜೇಶ್ ನಟರಂಗ, ಅರುಣಾ ಬಾಲರಾಜ್, ಸಾಧುಕೋಕಿಲ ಮುಂತಾದವರು ತಾರಾಬಳಗದಲ್ಲಿದ್ದು, ವೀರ್ ಸಮರ್ಥ್ ಸಂಗೀತ, ಕಾರ್ತಿಕ್ ಕ್ಯಾಮೆರಾ, ಆದಿ ಸಂಕಲನ ಚಿತ್ರಕ್ಕಿದೆ.

ರಾಘವೇಂದ್ರ ರಾಜ್‌ಕುಮಾರ್, ವಿನಯ್ ರಾಜ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ರತನ್ ಟಾಟಾ ಅವರು ತಮ್ಮ ಶ್ರೇಷ್ಠತೆಯನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್ ಅವರು ಪಾಕಿಸ್ತಾನವನ್ನು ಸೋಲಿಸಿದ ಬಳಿಕ, ಇರ್ಫಾನ್ ಪಠಾಣ್ ಅವರೊಂದಿಗೆ ಭಾರತದ ಧ್ವಜ ಹಿಡಿದು ಸಂಭ್ರಮಿಸಿ, ಕುಣಿದು ಕುಪ್ಪಳಿಸಿದರು. ಭಾರತ್ ಮಾತಾ ಕಿ ಜೈ ಎಂದೂ ಘೋಷಣೆ ಕೂಗಿದರು. ಆದರೆ, ಈ ಬಗ್ಗೆ ಪಾಕಿಸ್ತಾನವು ಐಸಿಸಿಗೆ ದೂರು ನೀಡಿತು. ಐಸಿಸಿಯು ರಶೀದ್ ಖಾನ್ ಅವರಿಗೆ ₹55 ಲಕ್ಷ ದಂಡವನ್ನು ವಿಧಿಸಿತು. ಭಾರತದ ಧ್ವಜಕ್ಕೆ ಗೌರವ ತೋರಿದ ವ್ಯಕ್ತಿಯನ್ನು ಹೊಗಳಬೇಕು ಎಂದು ರತನ್ ಟಾಟಾ ಹೇಳಿದರು. ಐಸಿಸಿ ವಿಧಿಸಿದ ₹55 ಲಕ್ಷ ದಂಡವನ್ನು ತಾವೇ ನೀಡಿದ್ದು ಮಾತ್ರವಲ್ಲದೆ, ರಶೀದ್ ಖಾನ್ ಅವರಿಗೆ ₹10 ಕೋಟಿಯ ಭಾರಿ ಮೊತ್ತದ ಬಹುಮಾನವನ್ನು ಘೋಷಿಸಿದ್ದಾರೆ' ಎಂಬಂತಹ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದ ಪೋಸ್ಟ್‌ಗಳ ಬಗ್ಗೆ ಸ್ವತಃ ರತನ್ ಟಾಟಾ ಅವರೇ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. 'ನಾನು ಐಸಿಸಿಗೆ ಅಥವಾ ಕ್ರಿಕೆಟ್‌ನ ಯಾವುದೇ ಸಂಸ್ಥೆಗೆ ಯಾವ ಸಲಹೆಯನ್ನೂ ನೀಡಿಲ್ಲ. ಯಾವುದೇ ಕ್ರಿಕೆಟ್ ಆಟಗಾರನಿಗೆ ಬಹುಮಾನವನ್ನು ಘೋಷಿಸಿಲ್ಲ, ದಂಡ ಭರಿಸುವುದಾಗಿಯೂ ಹೇಳಿಲ್ಲ. ಕ್ರಿಕೆಟ್‌ಗೂ ನನಗೂ ಇಲ್ಲಿಯವರೆಗೂ ಯಾವುದೇ ಸಂಬಂಧ ಏರ್ಪಟ್ಟಿಲ್ಲ. ವಾಟ್ಸ್‌ಆ್ಯಪ್ ಫಾರ್ವರ್ಡ್‌ಗಳನ್ನು ನಂಬಬೇಡಿ' ಎಂದು ಸ್ಪಷ್ಟಪಡಿಸಿದ್ದಾರೆ.

Ratan N. Tata
@RNTata2000
Follow
I have made no suggestions to the ICC or any cricket faculty about any cricket member regarding a fine or reward to any players.
I have no connection to cricket whatsoever
Please do not believe WhatsApp forwards and videos of such nature unless they come from my official platforms.
10:27 AM · Oct 30, 2023 · 4.9M Views

ಗುಂಡಣ್ಣ

ಆಗೋದೆಲ್ಲಾ ಒಳ್ಳೇದಕ್ಕೆ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಂದೂರಲ್ಲಿ ಒಬ್ಬ ರಾಜ ಇದ್ದ ಅವನಿಗೊಬ್ಬ ಬುದ್ಧಿವಂತನಾದ ಮಂತ್ರಿಯಿದ್ದ. ಸದಾ ರಾಜನ ಜೊತೆ ಇರುತ್ತಿದ್ದ ಮಂತ್ರಿ ಯಾವಾಗಲೂ ಏನೇ ಆಗಲಿ 'ಆಗೋದೆಲ್ಲ ಒಳ್ಳೇದಕ್ಕೆ' ಎನ್ನುತ್ತಿದ್ದ. ಒಮ್ಮೆ ರಾಜ ಮಂತ್ರಿಯೊಂದಿಗೆ ಕಾಡಿಗೆ ಬೇಟೆಯಾಡಲು ಹೋಗಿದ್ದ. ಆಗ ಕಾಡುಮೃಗವೊಂದು ರಾಜನ ಮೇಲೆ ದಾಳಿ ಮಾಡಿತು. ಈ ಸಂದರ್ಭದಲ್ಲಿ ರಾಜನ ಕೈಯ ಒಂದು ಬೆರಳು ತುಂಡಾಗಿ ಬಿಟ್ಟಿತು. ಆಗ ಅಲ್ಲಿದ್ದ ಮಂತ್ರಿ ಯಥಾಪ್ರಕಾರ 'ಆಗೋದೆಲ್ಲ ಒಳ್ಳೇದಕ್ಕೇ' ಎಂದ. ತನ್ನ ಕೈ ಬೆರಳು ಕತ್ತರಿಸಿ ರಕ್ತ ಸುರಿಯುತ್ತಿದ್ದರೂ ಈತ ಆಗೋದೆಲ್ಲ ಒಳ್ಳೇದಕ್ಕೆ ಎಂದು ಹೇಳುತ್ತಿದ್ದಾನಲ್ಲ ಎಂದು ರಾಜನಿಗೆ ವಿಪರೀತ ಸಿಟ್ಟು ಬಂತು. ತಕ್ಷಣ ತನ್ನ ಭಟರನ್ನು ಕರೆಸಿ ಮಂತ್ರಿಯನ್ನು ಸೆರೆಮನೆಗಟ್ಟಿದ. ಇದಾದ ಕೆಲ ದಿನಗಳ ನಂತರ ರಾಜ ಮತ್ತೆ ಬೇಟೆಗೆ ಹೋದ. ಈ ಬಾರಿ ಕಾಡು ಮನುಷ್ಯರು ರಾಜನನ್ನು ಹೊತ್ತೊಯ್ದರು. ಅಲ್ಲಿ ತಮ್ಮ ದೇವಿಗೆ ರಾಜನನ್ನು ನರಬಲಿ ಕೊಡುವುದು ಅವರ ಉದ್ದೇಶವಾಗಿತ್ತು.

ದೇವಿಯ ಮುಂದೆ ಬಲಿಪೀಠದಲ್ಲಿ ರಾಜನನ್ನು ಕುಳ್ಳಿರಿಸಿ ಇನ್ನೇನು ಅವನ ಕತ್ತನ್ನು ಕಡಿಯಬೇಕು ಅಷ್ಟರಲ್ಲಿ ಅವನ ಕೈ ಬೆರಳು ತುಂಡಾಗಿದ್ದು ಅವರ ಕಣ್ಣಿಗೆ ಬಿತ್ತು. ದೇಹದ ಯಾವುದೇ ಭಾಗದಲ್ಲಿ ಸ್ವಲ್ಪ ಊನವಿದ್ದರೂ ಅಂತಹ ವ್ಯಕ್ತಿ ಬಲಿಗೆ ಯೋಗ್ಯನಲ್ಲ ಎಂಬುದು ಅವರ ನಂಬಿಕೆ. ಹಾಗೇನಾದರೂ ಆದಲ್ಲಿ ದೇವಿ ಶಾಪ ಕೊಟ್ಟು ಬಿಡುತ್ತಾಳೆ ಎಂಬ ಭಯ ಅವರದ್ದು. ಹೀಗಾಗಿ ಅವರು ರಾಜನನ್ನು ಬಿಟ್ಟುಬಿಟ್ಟರು. ಬದುಕಿದೆಯಾ ಬಡಜೀವವೇ ಎಂದು ರಾಜ ಅಲ್ಲಿಂದ ಪರಾರಿಯಾದ. ರಾಜಧಾನಿಗೆ ಮರಳಿದ ವನೇ ತನ್ನ ಭಟರಿಗೆ ತಕ್ಷಣ ಮಂತ್ರಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ ಕರೆತರುವಂತೆ ಅಜ್ಞಾಪಿಸಿದ. ಮಂತ್ರಿ ಬಂದೊಡನೆ ಅವನನ್ನು ಬಿಗಿದಪ್ಪಿದ ರಾಜ 'ನೀನು ಹೇಳಿದ್ದು ನೂರಕ್ಕೆ ನೂರು ಸರಿ. ಆಗೋದೆಲ್ಲ ಒಳ್ಳೇದಕ್ಕೆ. ಅಂದು ನನ್ನ ಕೈ ಬೆರಳು ಕತ್ತರಿಸಿ ಹೋಗಿದ್ದರಿಂದಲೇ ನಾನಿಂದು ಜೀವಂತವಾಗಿ ಮರಳಿ ಬಂದಿದ್ದೇನೆ. ಆದರೆ ಒಂದೇ ಬೇಸರ... ನಿನ್ನನ್ನು ವೃಥಾ ಸೆರೆಮನೆಗೆ ತಳ್ಳಿದೆನಲ್ಲ' ಎಂದು ನುಡಿದ.

ಆಗ ಮಂತ್ರಿ ನಗುತ್ತಾ ಹೇಳಿದ 'ಮಹಾರಾಜ ಆಗೋದೆಲ್ಲ ಒಳ್ಳೇದಕ್ಕೆ. ನೀವು ನನ್ನನ್ನು ಸೆರೆಮನೆಗೆ ನೂಕದಿದ್ದರೆ ನಾನು ಸಹ ಈ ಬಾರಿಯೂ ನಿಮ್ಮ ಜೊತೆ ಬೇಟೆಗೆ ಬರುತ್ತಿದ್ದೆ. ಸದಾ ನಿಮ್ಮೊಂದಿಗೇ ಇರುತ್ತಿದ್ದ ನನ್ನನ್ನು ಸಹ ಕಾಡು ಮನುಷ್ಯರು ಹೊತ್ತೊಯ್ಯುತ್ತಿದ್ದರು. ಬೆರಳು ಊನವಾಗಿದೆ ಎಂದು ನಿಮ್ಮನ್ನು ಬಿಟ್ಟ ಅವರು ಖಂಡಿತವಾಗಿಯೂ ನನ್ನನ್ನು ಬಲಿಕೊಡುತ್ತಿದ್ದರು' ಎಂದು ನುಡಿದ.

'ಬರದಿರುವುದರ ಎಣಿಕೆಯಲಿ ಬಂದಿಹುದ ಮರೆಯದಿರು...
ಗುರುತಿಸು ಒಳಿತಿರುವುದನು ಕೇಡುಗಳ ನಡುವೆ...
ಇರುವ ಭಾಗ್ಯವ ನೆನೆದು ಬಾರನೆಂಬುದ ಬಿಡು
ಹರುಷಕಿದೆ ದಾರಿ- ಮಂಕುತಿಮ್ಮ'

ಎಂಬ ಡಿವಿಜಿಯವರ ಕಗ್ಗದ ಸಾಲಿನಂತೆ ಯಾವುದು ನಮಗೆ ಲಭಿಸಿಲ್ಲವೋ ಅದರ ಬಗ್ಗೆ ಕೊರಗುವುದರ ಬದಲು, ನಮ್ಮ ಬಳಿ ಏನಿದೆಯೋ ಅದನ್ನು ನೋಡಿ ಸಂತೋಷ ಪಡುವುದೇ ಒಳಿತು. ಹಾಗೆಯೇ ಕೇಡುಗಳ ನಡುವೆಯೂ ಒಳಿತಿರುತ್ತದೆ. ಸಂಕಷ್ಟಗಳ ನಡುವೆಯೂ ಸಂತಸದ ಬೆಳ್ಳಿ ರೇಖೆ ಇರುತ್ತದೆ, ಕತ್ತಲಿನಾಚೆಗೆ ಬೆಳಕಿದ್ದೇ ಇರುತ್ತದೆ ಎಂದುಕೊಂಡು ಬದುಕುವುದೇ ಹರುಷದ ನಿಜವಾದ ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ನವೆಂಬರ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ನವಮಿ ಗಂ. 29-51 ನಕ್ಷತ್ರ: ಆಶ್ಲೇಷ ಗಂ. 13-23 ಯೋಗ: ಶುಕ್ಲ (ಶುಕ್ರ) ಗಂ 14-25 ಕರಣ: ತೈತಿಲ ಗಂ. 16-34, ತುಲಾ ಮಾಸದ 20 ನೇ ದಿನ, ಮಳೆನಕ್ಷತ್ರ: ಸ್ವಾತಿ 4. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-30 ಸೂರ್ಯಾಸ್ತ : 05-59 , ಮುಸ್ಲಿಂ ದಿನಾಂಕ : 21 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 1, 11

ಮೇಷ: ಹೊಸ ಬದುಕನ್ನು ಆರಂಭಿಸಲು ಬೇಕಾದ ಅವಕಾಶದ ಬಾಗಿಲು ತೆರೆಯುವುದು. ಅವಕಾಶಗಳನ್ನು ಸದುಪಯೋಗಗೊಳಿಸಿಕೊಳ್ಳುವ ಕಾರ್ಯ ಮಾತ್ರ ಸಂಪೂರ್ಣವಾಗಿ ನಿಮಗೆ ಬಿಟ್ಟ ವಿಚಾರವಾಗಿದೆ.

ವೃಷಭ: ಕುಟುಂಬದ ಹಲವಾರು ತಾಪತ್ರಯಗಳಿಗೆ ಊರಿನ ಪ್ರಾಜ್ಞರಿಂದ ಪರಿಹಾರ ಪಡೆದುಕೊಳ್ಳುವಿರಿ. ಉದರ ಬಾಧೆಯನ್ನು ಉಪಶಮನ ಮಾಡಿಕೊಳ್ಳುವುದಕ್ಕಾಗಿ ಹಸಿ ತರಕಾರಿಯನ್ನೋ ಅಥವಾ ಸ್ನಿಗ್ಧ ಆಹಾರವನ್ನಷ್ಟೇ ಸೇವಿಸಿ.

ಮಿಥುನ: ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ತೇಜೋವಧೆಯನ್ನು ಮಾಡಿದ ವ್ಯಕ್ತಿಗಳ ಎದುರು ಅವರಿಗಿಂತ ಉತ್ತಮ ಸ್ಥಿತಿಯಲ್ಲಿರುವ ಕಾಲದಲ್ಲಿ ವಿನಯವನ್ನು ಮರೆಯದಿರಿ. ಸಾಮಾಜಿಕವಾಗಿ ಅನುಯಾಯಿಗಳು ಹೆಚ್ಚುವರು.

ಕರ್ಕಾಟಕ: ಪ್ರೀತಿಪಾತ್ರರಿಗೆ ನೋವಾದ ಕಾರಣದಿಂದ ಮನಸ್ಸು ಎಲ್ಲಾ ಕೆಲಸಗಳಿಂದ ವಿಮುಖವಾಗುವ ಸಾಧ್ಯತೆ ಇರುವುದು. ಹಾಗೆ ಮಾಡಿಕೊಂಡಲ್ಲಿ ಅಧಿಕಾರಿಗಳಿಂದ ನಿಂದನೆಗೆ ಒಳಗಾಗುವಿರಿ.

ಸಿಂಹ: ಅನೇಕ ಸಮಸ್ಯೆಗಳನ್ನು ಇತರರಲ್ಲಿ ಹೇಳಿಕೊಳ್ಳಲೂ ಆಗದೆ ಬಿಡಲೂ ಆಗದೆ ತೊಳಲಾಡುವ ಪರಿಸ್ಥಿತಿ ಬರುವುದು. ಮಗಳ ವಿದ್ಯಾಭ್ಯಾಸದಲ್ಲಿನ ಪ್ರಗತಿಯು ಸಂತೋಷ ನೀಡುವುದು. ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಲಿ.

ಕನ್ಯಾ: ಹಿರಿಯ ನಾಗರಿಕರ ವಿಚಾರವಾಗಿ ಸಣ್ಣಪುಟ್ಟ ವಿಷಯಗಳಲ್ಲೂ ನಿಗಾವಹಿಸುವುದು ಅಗತ್ಯ. ಮನೆಯ ದುರಸ್ತಿಯ ಕೆಲಸಗಳಿದ್ದಲ್ಲಿ ಶೀಘ್ರವಾಗಿ ಮಾಡಿಸಿ.

ತುಲಾ: ಪಾಲುದಾರರ ಜತೆಗಿನ ವ್ಯವಹಾರಗಳಲ್ಲಿ ಅತಿಯಾದ ಪಾರದರ್ಶಕತೆ ಅಪಾಯವನ್ನು ತಂದೊಡ್ಡಬಹುದು. ಇತರರ ವೈಯಕ್ತಿಕ ವಿಚಾರದಲ್ಲಿ ಅನವಶ್ಯಕವಾಗಿ ಯಾವುದೇ ಸಲಹೆ ಕೊಡದಿರಿ.

ವೃಶ್ಚಿಕ: ಯೋಗ ಅಥವಾ ಧ್ಯಾನದ ಮಾರ್ಗದಲ್ಲಿ ಸಾಧನೆ ಮಾಡುತ್ತಿರುವವರಿಗೆ ಅನೇಕ ಅನುಭೂತಿಗಳು ಉಂಟಾಗುತ್ತವೆ. ಸಹೋದರರಲ್ಲಿನ ಕೆಲ ದಿನಗಳ ಭಿನ್ನಾಭಿಪ್ರಾಯಗಳು ಪ್ರೀತಿಯ ಮಾತುಗಳಿಂದ ದೂರವಾಗುವವು.

ಧನು: ಹಲವು ಜನರ ಎದುರು ನಿಮ್ಮ ಮಾತನ್ನು ಪ್ರಸ್ತುತಪಡಿಸುವಾಗ ಅದ್ಭುತ ವಾಗ್ವೈಖರಿಯು ಎಲ್ಲರನ್ನೂ ಹಿಡಿದು ನಿಲ್ಲಿಸುತ್ತದೆ. ಮಂಗಳ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶಗಳಿವೆ.

ಮಕರ: ಪ್ರಯತ್ನಪೂರ್ವಕವಾಗಿ ಮಗನಿಗೆ ಹೇಳಿದ ವಿದ್ಯಾಮಾರ್ಗದಿಂದ ಮಗನು ಹಿಂದಿರುಗುವ ಸಾಧ್ಯತೆ ಇದೆ. ಸಂಶೋಧನಾಕಾರರಿಗೆ ಕೆಲಸಗಳು ಭರದಿಂದ ಸಾಗಲಿದೆ. ಪತ್ನಿಯ ಸಹಾಯವು ಅತ್ಯಮೂಲ್ಯ ಎನಿಸಲಿದೆ.

ಕುಂಭ: ಅಂತರ್ಜಾಲ ಕುರಿತಾಗಿ ಕೆಲಸವನ್ನು ಮಾಡುವವರಿಗೆ ಪದೇ ಪದೇ ತಪ್ಪುಗಳು ಸಂಭವಿಸಬಹುದು. ಮರೆವಿನ ಸಮಸ್ಯೆಯಿಂದ ಕೆಲವು ಅವಘಡ ಎದುರಿಸುವಿರಿ. ಸಂಬಂಧಗಳಲ್ಲಿ ಸಾಮರಸ್ಯವನ್ನು ಕಾಯ್ದುಕೊಳ್ಳಿರಿ.

ಮೀನ: ಕಟ್ಟಡಗಳನ್ನು ಬಾಡಿಗೆಗೆ ಕೊಡುವುದರಿಂದ ಆರ್ಥಿಕವಾಗಿ ಅಭಿವೃದ್ಧಿ ಕಂಡುಬರುವುದು. ಆಸ್ತಿ ಖರೀದಿಯ ವಿಚಾರದಲ್ಲಿ ಸಮಂಜಸವಾದ ನಿರ್ಧಾರ ಕೈಗೊಳ್ಳುವಿರಿ. ಕೆಲಸದಲ್ಲಿ ಸ್ವಾತಂತ್ರ್ಯ ಪಡೆಯುವಂತಾಗಲಿದೆ.

ಪದಬಂಧ 5492

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಲೆಯನ್ನು ಕೆಳಕ್ಕೆ ಬಾಗಿಸಿ ನಡೆಯುವವನು (4)
3.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
5.ಗಣಿಯೊಳಗಿರುವ ಬಸುರಿ! (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಕೋಟೆಯ ಮೇಲುಭಾಗ (3)
15.ಪ್ರತ್ಯಕ್ಷವಲ್ಲದ್ದು ಪಕ್ಷದೊಳಗಿದೆಯಲ್ಲಾ? (3)
16.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಜಮ ಅಲ್ಲ! ಇದು ವೆಚ್ಚ! (2)
3.ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ನರಕಾಧಿಪತಿ ನೀಡಿದ ಘೋರದಂಡನೆ (4)
6.ಸರಪಣಿಯಲ್ಲಿನ ಪಂಕ್ತಿಯೇ ಉಲ್ಟಾ ಆಗಿಬಿಟ್ಟದೆ (3)
7.ಕೆಲಸಕ್ಕೆ ಬಾರದ ಮಾತಿದು (5)
9.ಮುಸಲ್ಮಾನರ ದೊರೆ (3)
10.ಒಪ್ಪವಾಗಿ ಬಳಿಯುವುದು (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಬಂದಿರುವ ಸಂಪ್ರದಾಯ! (3)
14.ಕೂರ್ಮವಿಲ್ಲಿ ಉಲ್ಟಾಪಲ್ಟಾ ಆಗಿದೆ (2)



5491ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅತಿಮಾನುಷ 4.ಲೆಕ್ಕ
5.ರಾತ್ರಿ 6.ವನಿತ
7.ಕಟವಾಯಿ 8.ಬರಡುಭೂಮಿ
11.ಪದಚ್ಯುತಿ 12.ಭಾವನೆ
13.ರವ 14.ಋಷಿ
15.ನವೀಕರಣ

ಮೇಲಿಂದ ಕೆಳಕ್ಕೆ:
1.ಅನಾವರಣ 2.ಅಕ್ಕ
3.ಷರಾಯಿ 4.ಲೆತಕ್ಕಬ
7.ಕರಡುಪ್ರತಿ 9.ಮಿತಭಾಷಿ
10.ಸವಿನೆನಪು
11.ಪವನ 14.ಋಣ

ಸುಡೊಕು 5878

5					7		1	
8		7	6		4			
	2			8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5877 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಎಂಕ್ಯಾಪ್ ಮೌಲ್ಯ: ರಿಲಯನ್ಸ್ ನಂ.1

ಅತಿ ದೊಡ್ಡ 10 ಕಂಪನಿಗಳ ಪೈಕಿ 9ರ ಮಾರುಕಟ್ಟೆ ಮೌಲ್ಯ (ಎಂಕ್ಯಾಪ್) ಕಳೆದ ವಾರ ₹97,463 ಕೋಟಿಗೆ ಏರಿಕೆಯಾಗಿದೆ. ರಿಲಯನ್ಸ್ ಕಂಪನಿಯು ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಬಜಾಜ್ ಫೈನಾನ್ಸ್‌ನ ಮೌಲ್ಯದಲ್ಲಿ ಕುಸಿತ ಕಂಡಿದೆ.



ಬಹುಬೇಡಿಕೆಯ ಕಾರುಗಳ ತಯಾರಿಕೆ ಹೆಚ್ಚಿಸಲು ಮಾರುತಿ ಸುಜುಕಿ ಚಿಂತನೆ

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿನ ಬೇಡಿಕೆಯ ಆಧಾರದಲ್ಲಿ ನಿರ್ದಿಷ್ಟ ಮಾಡೆಲ್‌ನ ವಾಹನಗಳನ್ನು ತಯಾರಿಸಲು ಸಾಧ್ಯವಾಗುವಂತೆ ತಯಾರಿಕಾ ಸಾಮರ್ಥ್ಯವನ್ನು ರೂಪಿಸಿಕೊಳ್ಳಲು ಮಾರುತಿ ಸುಜುಕಿ ಇಂಡಿಯಾ ಸಂಸ್ಥೆಯು ಚಿಂತನೆ ನಡೆಸಿದೆ.

ಕಂಪೆನಿಯ ಅಧಿಕಾರಿಯೊಬ್ಬರ ಪ್ರಕಾರ, ಹೆಚ್ಚು ಬೇಡಿಕೆಯುಳ್ಳ ವಾಹನಗಳ ತಯಾರಿಕಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿ, ಆರಂಭಿಕ ಹಂತದ ಕಾರುಗಳ ತಯಾರಿಕೆಯನ್ನು ಕುಗ್ಗಿಸುವ ಸಾಧ್ಯತೆಗಳನ್ನು ಕಂಪನಿ ಪರಿಶೀಲಿಸುತ್ತಿದೆ.

ಯುಟಿಲಿಟಿ ವಾಹನಗಳು ಹಾಗೂ ಸಣ್ಣ ಕಾರುಗಳ ಬೇಡಿಕೆ ವಿರುದ್ಧ ದಿಕ್ಕಿನಲ್ಲಿವೆ. ಹೀಗಾಗಿ, ಬೇಡಿಕೆ ಆಧಾರದಲ್ಲಿ ಕಾರುಗಳನ್ನು ತಯಾರಿಸಲಾಗುವುದು ಎಂದು ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿ (ಕಾರ್ಪೊರೇಟ್ ವ್ಯವಹಾರ) ರಾಹುಲ್ ಭಾರ್ತಿ ಹೇಳಿದರು.

ಲಾಭಾಂಶವು ಇತ್ತೀಚಿನ ದಿನಗಳಲ್ಲಿ ಕುಸಿಯಲು ಕಡಿಮೆ ಬೇಡಿಕೆಯುಳ್ಳ ಕಾರುಗಳ ತಯಾರಿಕೆ ಹೆಚ್ಚಿರುವುದು ಕಾರಣ ಎಂಬುದು ಮನದಟ್ಟಾಗಿದೆ. ಇನ್ನೊಂದೆಡೆ, ಮೊದಲ ಬಾರಿಗೆ ಕಾರು ಖರೀದಿಸುವವರ ಪ್ರಮಾಣ ಶೇ 10ರಷ್ಟು ಕುಗ್ಗಿದೆ. ಈ ವರ್ಗದ ಆದಾಯ ಒಮ್ಮೆ ಏರಿದಂತೆ ಕಾರುಗಳ ಮಾರಾಟವು ಏರುಮುಖವಾಗುವ ವಿಶ್ವಾಸವಿದೆ ಎಂದು ಹೇಳಿದರು.

ಪ್ರಸ್ತುತ, ಹರಿಯಾಣ ಮತ್ತು ಗುಜರಾತ್‌ನಲ್ಲಿರುವ ತನ್ನ ಘಟಕಗಳಿಂದ ಒಟ್ಟು ತಯಾರಿಕಾ ಸಾಮರ್ಥ್ಯವು ವಾರ್ಷಿಕ 23 ಲಕ್ಷ ವಾಹನಗಳಾಗಿವೆ.

ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಆರಂಭಿಕ ಹಂತದ ಕಾರುಗಳ ಮಾರಾಟ ಪ್ರಸಕ್ತ ಹಣಕಾಸು ವರ್ಷದ ದ್ವಿತೀಯ ತ್ರೈಮಾಸಿಕದಲ್ಲಿ 35 ಸಾವಿರ ಕಾರುಗಳಿಗೆ ಕುಗ್ಗಿದೆ. 2018–19ರಲ್ಲಿ ಇದು ಗರಿಷ್ಠ, ಅಂದರೆ 1.38 ಲಕ್ಷ ಕಾರುಗಳಾಗಿತ್ತು.

'ಆದರೆ, ಕಾರುಗಳ ರಫ್ತಿನಲ್ಲಿ ಸಂಸ್ಥೆ ಮುನ್ನಡೆ ಕಾಯ್ದುಕೊಂಡಿದೆ. ಮುಖ್ಯವಾಗಿ ಆಫ್ರಿಕಾ, ಲ್ಯಾಟಿನ್ ಅಮೆರಿಕ, ಮಧ್ಯ ಪ್ರಾಚ್ಯ ರಾಷ್ಟ್ರಗಳತ್ತ ಕಂಪನಿಯು ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದೆ' ಎಂದು ಭಾರ್ತಿ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಎಂ.ಎಫ್ ಕಂಪನಿ ಹೇಗೆ ಹಣ ಗಳಿಸುತ್ತವೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸ್ವಿಗ್ಗಿ, ಜೊಮಾಟೊ, ಟಾಟಾ ಪ್ಲೇ, ಅಮೆಜಾನ್ ಪ್ರೈಂ, ನೆಟ್‌ಫ್ಲಿಕ್ಸ್... ಹೀಗೆ ಅನೇಕ ಸೇವೆಗಳನ್ನು ಒಂದಲ್ಲ ಒಂದು ಹಂತದಲ್ಲಿ ಬಳಕೆ ಮಾಡುತ್ತೀರಿ. ಉದಾಹರಣೆಗೆ ಸ್ವಿಗ್ಗಿಯಲ್ಲಿ ಆರ್ಡರ್ ಮಾಡಿದ ಮೇಲೆ ನಿಮ್ಮ ಮನೆಗೆ ಹೋಟೆಲ್‌ನಿಂದ ಆಹಾರ ಬರಬೇಕು ಅಂದ್ರೆ ಒಬ್ಬ ಡೆಲಿವರಿ ಬಾಯ್ ಕೆಲಸ ಮಾಡಬೇಕು, ಆತ ಸಂಚರಿಸಲು ಗಾಡಿ ಮತ್ತು ಪೆಟ್ರೋಲ್ ಬೇಕು, ಆಹಾರ ಬುಕ್ ಮಾಡಲು ಆ್ಯಪ್ ಬೇಕು... ಹೀಗೆ ಅನೇಕ ಖರ್ಚುಗಳು ಫುಡ್ ಡೆಲಿವರಿ ಕಂಪನಿಗೆ ಬರುತ್ತವೆ. ಅವೆಲ್ಲವನ್ನೂ ಒಳಗೊಂಡು ಒಂದಿಷ್ಟು ಲಾಭಾಂಶ ಸೇರಿಸಿ ಫುಡ್ ಡೆಲಿವರ್ ಕಂಪನಿ ಒಂದು ಶುಲ್ಕ ನಿಗದಿ ಮಾಡುತ್ತದೆ. ಅದನ್ನು ಪಾವತಿಸಲು ಒಪ್ಪುವ ಗ್ರಾಹಕನಿಗೆ ಫುಡ್ ಡೆಲಿವರ್ ಕಂಪನಿ ಸೇವೆ ಒದಗಿಸುತ್ತದೆ.

ಇದೇ ಮಾದರಿಯಲ್ಲಿ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಹೂಡಿಕೆದಾರ ಕೆಲ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಮ್ಯೂಚುಯಲ್ ಫಂಡ್ ಕಂಪನಿಗಳು ನಿಮ್ಮ ಹೂಡಿಕೆ ಮೊತ್ತವನ್ನು ನಿರ್ವಹಣೆ ಮಾಡಲು ಪಡೆಯುವ ಶುಲ್ಕಕ್ಕೆ ಎಕ್ಸ್‌ಪೆನ್ಸ್ ರೇಶಿಯೋ (ನಿರ್ವಹಣಾ ಶುಲ್ಕ) ಎಂದು ಕರೆಯಲಾಗುತ್ತದೆ. ಹೂಡಿಕೆಯನ್ನು ಸುರಕ್ಷಿತವಾಗಿ ನಿರ್ವಹಿಸಲು ರಿಜಿಸ್ಟ್ರಾರ್‌ಗೆ ಶುಲ್ಕ ಪಾವತಿಸುವುದು, ಬ್ರೋಕರೇಜ್ ಶುಲ್ಕ ಕಟ್ಟುವುದು, ಫಂಡ್ ಮ್ಯಾನೇಜರ್ ಸೇರಿದಂತೆ ಕಂಪನಿಯ ಸಿಬ್ಬಂದಿಗೆ ಸಂಬಳ ಕೊಡುವುದು, ಮ್ಯೂಚುಯಲ್ ಫಂಡ್‌ನ ಮಾರ್ಕೆಟಿಂಗ್‌ಗೆ ತಗಲುವ ವೆಚ್ಚ ನಿಭಾಯಿಸುವುದು ಸೇರಿದಂತೆ ಅನೇಕ ಖರ್ಚುಗಳು ಮ್ಯೂಚುಯಲ್ ಫಂಡ್ ಕಂಪನಿಗಳಿಗೆ ಇರುತ್ತವೆ. ಮ್ಯೂಚುಯಲ್ ಫಂಡ್ ಕಂಪನಿಗಳು ಹೂಡಿಕೆದಾರರಿಂದ ಬಹಳ ನಾಜೂಕಾಗಿ ನಿರ್ವಹಣಾ ಶುಲ್ಕ ಪಡೆಯುತ್ತವೆ. ಹಾಗಾಗಿ ಹೂಡಿಕೆದಾರರಿಗೆ ಅಷ್ಟು ಹೊರೆ ಅನಿಸುವುದಿಲ್ಲ.

ಕಂಪನಿಗಳು ಹಣ ಗಳಿಸುವುದು ಹೇಗೆ: ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವಾಗ ಯಾವ ಫಂಡ್‌ನ ಎಕ್ಸ್‌ಪೆನ್ಸ್ ರೇಷಿಯೋ (ನಿರ್ವಹಣಾ ಶುಲ್ಕ) ಎಷ್ಟು?, ಮ್ಯೂಚುಯಲ್ ಫಂಡ್ ಕಂಪನಿಗಳು ನಿರ್ವಹಣಾ ಶುಲ್ಕವನ್ನು ಹೇಗೆ ಪಡೆಯುತ್ತವೆ?, ಆ ವೆಚ್ಚದ ಹೊರೆಯನ್ನು ನಾವು ಹೇಗೆ ತಗ್ಗಿಸಿಕೊಳ್ಳಬಹುದು?, ಎನ್ನುವ ಬಗ್ಗೆ ತಿಳಿಯುವುದು ಬಹಳ ಮುಖ್ಯ. ಮೊದಲಿಗೆ ಎಕ್ಸ್‌ಪೆನ್ಸ್ ರೇಶಿಯೋ ಹೇಗೆ ಕೆಲಸ ಮಾಡುತ್ತದೆ ತಿಳಿಯೋಣ. ಉದಾಹರಣೆಗೆ ಮ್ಯೂಚುಯಲ್ ಫಂಡ್ ಕಂಪನಿ ಶೇ 1 ರಷ್ಟು ಎಕ್ಸ್‌ಪೆನ್ಸ್ ರೇಶಿಯೋ ಪಡೆಯುತ್ತದೆ ಎಂದುಕೊಳ್ಳೋಣ. ಅದರಂತೆ ನೀವು ಹೂಡಿಕೆ ಮಾಡುವ ಪ್ರತಿ ಒಂದು ಲಕ್ಷಕ್ಕೆ ಮ್ಯೂಚುಯಲ್ ಫಂಡ್ ಕಂಪನಿ ₹ 1 ಸಾವಿರವನ್ನು ನಿರ್ವಹಣಾ ಶುಲ್ಕವಾಗಿ ಪಡೆಯುತ್ತದೆ. ಈ ಶುಲ್ಕವನ್ನು ಮ್ಯೂಚುಯಲ್ ಫಂಡ್ ಕಂಪನಿಗಳು ವಾರ್ಷಿಕ, ಅರೆ ವಾರ್ಷಿಕ ಅಥವಾ ತ್ರೈಮಾಸಿಕದ ಲೆಕ್ಕಾಚಾರದಲ್ಲಿ ಪಡೆಯುವುದಿಲ್ಲ, ಬದಲಿಗೆ ಪ್ರತಿದಿನ ಶುಲ್ಕ ತೆಗೆದುಕೊಳ್ಳುತ್ತವೆ. ₹ 1 ಸಾವಿರವನ್ನು ನೀವು 365 ರೊಂದಿಗೆ ಭಾಗಿಸಿದರೆ (1000/365 = ₹ 2.73) ಪ್ರತಿದಿನ ₹ 2.73 ಅನ್ನು ಶುಲ್ಕವಾಗಿ ಪಡೆಯುತ್ತವೆ. ಎಷ್ಟು ದಿನ ಹೂಡಿಕೆ ಮಾಡಿರುತ್ತೀರೋ ಅಲ್ಲಿಯ ತನಕ ಪ್ರತಿ ದಿನ ₹ 2.73 ಶುಲ್ಕವನ್ನು ಮ್ಯೂಚುಯಲ್ ಫಂಡ್ ಕಂಪನಿ ಪಡೆಯುತ್ತಿರುತ್ತದೆ. ಹೂಡಿಕೆ ಮೇಲೆ ಗಳಿಕೆ ಬರಲಿ ಬಿಡಲಿ ಮ್ಯೂಚುಯಲ್ ಫಂಡ್ ಕಂಪನಿ ಪ್ರತಿದಿನ ₹ 2.73 ಅನ್ನು ಮುರಿದುಕೊಳ್ಳುತ್ತದೆ.

ಡೈರೆಕ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ಶುಲ್ಕ ಕಮ್ಮಿ: ಮ್ಯೂಚುಯಲ್ ಫಂಡ್ ಹೂಡಿಕೆಗೆ ಎರಡು ಮಾರ್ಗಗಳಿವೆ. ನೇರವಾಗಿ ನೀವೇ ಮ್ಯೂಚುಯಲ್ ಫಂಡ್ ವೆಬ್ ಸೈಟ್ ಮೂಲಕ ಅಥವಾ ಮೊಬೈಲ್ ಆ್ಯಪ್‌ಗಳ ಮೂಲಕ ಹೂಡಿಕೆ ಮಾಡಿದರೆ ಅದನ್ನು ಡೈರೆಕ್ಟ್ ಮ್ಯೂಚುಯಲ್ ಫಂಡ್ ಎಂದು ಕರೆಯಲಾಗುತ್ತದೆ. ಮ್ಯೂಚುಯಲ್ ಫಂಡ್ ಏಜೆಂಟ್ ಮೂಲಕ ಹೂಡಿಕೆ ಮಾಡಿದರೆ ಅದನ್ನು ರೆಗ್ಯೂಲರ್ ಮ್ಯೂಚುಯಲ್ ಫಂಡ್ ಎಂದು ಪರಿಗಣಿಸಲಾಗುತ್ತದೆ. ಡೈರೆಕ್ಟ್ ಮ್ಯೂಚುಯಲ್ ಫಂಡ್‌ನಲ್ಲಿ ನಿರ್ವಹಣಾ ಶುಲ್ಕ ಕಡಿಮೆ ಇರುತ್ತದೆ. ಆದರೆ ರೆಗ್ಯೂಲರ್ ಮ್ಯೂಚುಯಲ್ ಫಂಡ್‌ನಲ್ಲಿ ಏಜೆಂಟ್‌ನ ಕಮಿಷನ್ ಸಹ ಸೇರುವುದರಿಂದ ನಿರ್ವಹಣಾ ವೆಚ್ಚ ಹೆಚ್ಚಿರುತ್ತೆ. ಉದಾಹರಣೆಗೆ ಡೈರೆಕ್ಟ್ ಮ್ಯೂಚುಯಲ್ ಫಂಡ್‌ನ ನಿರ್ವಹಣಾ ಶುಲ್ಕ ಶೇ 1.5 ರಷ್ಟಿದ್ದರೆ , ರೆಗ್ಯೂಲರ್ ಮ್ಯೂಚುಯಲ್ ಫಂಡ್‌ನ ನಿರ್ವಹಣಾ ಶುಲ್ಕ ಶೇ 2.5 ರಷ್ಟಿರುತ್ತದೆ. ಮ್ಯೂಚುಯಲ್ ಫಂಡ್ ಬಗ್ಗೆ ಒಂದಷ್ಟು ಅರಿವಿದೆ ಎನ್ನುವವರು ಡೈರೆಕ್ಟ್ ಮ್ಯೂಚುಯಲ್ ಫಂಡ್ ಪರಿಗಣಿಸಬಹುದು. ಮ್ಯೂಚುಯಲ್ ಫಂಡ್ ಬಗ್ಗೆ ಏನೂ ತಿಳಿದಿಲ್ಲ ಎನ್ನುವವರು ಮ್ಯೂಚುಯಲ್ ಫಂಡ್ ಡಿಸ್ಟ್ರಿಬ್ಯೂಟರ್‌ಗಳ ಮೂಲಕ ರೆಗ್ಯೂಲರ್ ಫಂಡ್‌ನಲ್ಲಿ ಹೂಡುವುದು ಒಳಿತು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆಯ ಲಯಕ್ಕೆ ಮರಳಿದ ಷೇರುಪೇಟೆ

ಕಳೆದ ಎರಡು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಲಯಕ್ಕೆ ಮರಳಿವೆ. ನವೆಂಬರ್ 3ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. 64,363 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.91 ರಷ್ಟು ಗಳಿಸಿಕೊಂಡಿದೆ. 19,230 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.96 ರಷ್ಟು ಜಿಗಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರಗಳನ್ನು ಯಥಾಸ್ಥಿತಿಯಲ್ಲಿ ಇಟ್ಟಿದ್ದು, ತೈಲ ಬೆಲೆ ಇಳಿಕೆ ಸೇರಿ ಅನೇಕ ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಶೇ 10, ಬಿಎಸ್‌ಇ ಟೆಲಿಕಾಂ ಶೇ 5.3, ಬಿಎಸ್‌ಇ ತೈಲ ಮತ್ತು ಅನಿಲ ಸೂಚ್ಯಂಕ ಶೇ 3.6 ರಷ್ಟು ಗಳಿಸಿಕೊಂಡಿವೆ. ಆದರೆ ಬಿಎಸ್‌ಇ ಆಟೋ ಸೂಚ್ಯಂಕ ಶೇ 1 ರಷ್ಟು ಕುಸಿದಿದೆ.

ಗಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಇಂಡಸ್ ಟವರ್ಸ್, ಡಿಎಲ್‌ಎಫ್, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಜೊಮಾಟೊ, ಅದಾನಿ ಪವರ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ವೇದಾಂತ ಮತ್ತು ಅಪೋಲೊ ಹಾಸ್ಪಿಟಲ್ ಎಂಟರ್ ಪ್ರೈಸಸ್ ಗಳಿಸಿಕೊಂಡಿವೆ.

ಮುನ್ನೋಟ: ಅದಾನಿ ಎನರ್ಜಿ ಸೊಲ್ಯೂಷನ್ಸ್, ಬಜಾಜ್ ಎಲೆಕ್ಟ್ರಿಕಲ್ಸ್ ಲಿಮಿಟೆಡ್, ಬಾರ್ಬಿಕ್ಯೂ ನೇಷನ್ ಹಾಸ್ಪಿಟಾಲಿಟಿ, ಬಿಕಾಜಿ ಫುಡ್ಸ್ ಇಂಟರ್ ನ್ಯಾಷನಲ್ ಲಿ., ಮ್ಯಾಕ್ಸ್ ಹೆಲ್ತ್, ಶೋಭಾ ಲಿ., ಉಜ್ಜೀವನ್ ಫೈನಾನ್ಷಿಯಲ್ ಸರ್ವಿಸಸ್ ಲಿ., ಅಪೋಲೋ ಟೈಯರ್ಸ್, ಕೊಚ್ಚಿನ್ ಶಿಪ್ ಯಾರ್ಡ್ ಲಿ, ಬಿಎಚ್‌ಇಎಲ್, ಅದಾನಿ ಪೋರ್ಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಸದ್ಯಕ್ಕೆ ಮಾರುಕಟ್ಟೆ ಸಕಾರಾತ್ಮಕವಾಗಿ ಕಂಡುಬಂದರೂ ಹೆಚ್ಚಿನ ಏರಿಳಿತಗಳಿರುತ್ತವೆ.

ನವೆಂಬರ್ ಮೊದಲ ವಾರದ ಮೂರೇ ದಿನಗಳಲ್ಲಿ ₹3,400 ಕೋಟಿ ವಿದೇಶಿ ಬಂಡವಾಳ ಹಿಂದಕ್ಕೆ

ಹೂಡಿಕೆ ಹೊರ ಹರಿವಿಗಿಲ್ಲ ಕಡಿವಾಣ

ನವದೆಹಲಿ (ಪಿಟಿಐ): ಷೇರುಪೇಟೆಯಿಂದ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ತಮ್ಮ ಹೂಡಿಕೆ ವಾಪಸ್ ಪಡೆಯುವ ಪ್ರವೃತ್ತಿ ಮುಂದುವರಿದಿದೆ. ಕಳೆದ ವಾರದ ಮೂರು ವಹಿವಾಟು ಅವಧಿಯಲ್ಲಿ ಹೊರಗೆ ತೆಗೆಯಲಾದ ಹೂಡಿಕೆಯ ಮೊತ್ತವು ₹3,400 ಕೋಟಿಗೂ ಹೆಚ್ಚು. ಬಡ್ಡಿ ದರ ಏರಿಕೆ ಮತ್ತು ಮಧ್ಯ ಪ್ರಾಚ್ಯದ ಬಿಕ್ಕಟ್ಟು ಈ ಬೆಳವಣಿಗೆಗೆ ಕಾರಣ ಎಂದು ಹೇಳಲಾಗಿದೆ.

ಅಕ್ಟೋಬರ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿಯೂ ವಿದೇಶಿ ಹೂಡಿಕೆದಾರರು ತಮ್ಮ ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹಿಂದಕ್ಕೆ ಪಡೆದಿದ್ದರು. ಈ ಪ್ರವೃತ್ತಿ ನವೆಂಬರ್ ತಿಂಗಳಿನಲ್ಲಿಯೂ ಮುಂದುವರಿಯಲಿದೆ ಎಂಬ ಸುಳಿವನ್ನು ತಿಂಗಳಿನ ಮೊದಲ ವಾರದ ವಹಿವಾಟು ನೀಡಿದೆ.

ಆದರೆ, ಮಾರ್ಚ್‌ನಿಂದ ಆಗಸ್ಟ್ ಅವಧಿಯಲ್ಲಿ ಈಗಿನದಕ್ಕೆ ವ್ಯತಿರಿಕ್ತವಾದ ಪ್ರವೃತ್ತಿ ಮಾರುಕಟ್ಟೆಯಲ್ಲಿ ಕಂಡು ಬಂದಿತ್ತು. ಈ ಆರು ತಿಂಗಳಲ್ಲಿ ವಿದೇಶಿ ಹೂಡಿಕೆದಾರರು ₹1.74 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡಿದ್ದರು.

ಸರ್ಕಾರದ ಬಾಂಡ್‌ಗಳ ಮೇಲಿನ ಹೂಡಿಕೆಯ ವರಮಾನವು ಏರಿಕೆಯಾಗಿದೆ. ಅಮೆರಿಕದ ಫೆಡರಲ್ ರಿಸರ್ವ್‌ನ ನವೆಂಬರ್ ಸಭೆಯು ಬಡ್ಡಿ ದರ ಇಳಿಕೆಯ ಸೂಚನೆಯನ್ನೇನೂ ನೀಡಿಲ್ಲ. ಹಾಗಾಗಿ, ವಿದೇಶಿ ಬಂಡವಾಳ ಹೊರಹರಿವಿಗೆ ತಕ್ಷಣಕ್ಕೆ ಕಡಿವಾಣ ಬೀಳುವ ಸಾಧ್ಯತೆ ಇಲ್ಲ.

'ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚುತ್ತಲೇ ಇದೆ. ಆರ್ಥಿಕ ಹಿಂಜರಿತದ ಕುರಿತ ಆತಂಕವೂ ಇದೆ. ಹಣದುಬ್ಬರ ಏರಿಕೆಯ ಪರಿಣಾಮವೂ ಮಾರುಕಟ್ಟೆ ಮೇಲೆ ಆಗಿದೆ. ಅದರ ಜೊತೆಗೆ ಇಸ್ರೇಲ್–ಹಮಾಸ್ ಸಂಘರ್ಷವು ಬೆಳವಣಿಗೆಗೆ ಅಡ್ಡಿಯಾಗಿದೆ' ಎಂದು ಮಝರ್ಸ್ ಇನ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರ ಭರತ್ ಧವನ್ ಹೇಳಿದ್ದಾರೆ.

ಈಗಿನ ಸಂದರ್ಭದಲ್ಲಿ ಹೂಡಿಕೆಯಲ್ಲಿ ಹೆಚ್ಚು ಸುರಕ್ಷತೆಯನ್ನು ಹೂಡಿಕೆದಾರರು ಬಯಸುತ್ತಿದ್ದಾರೆ. ಹಾಗಾಗಿಯೇ ಚಿನ್ನ ಮತ್ತು ಡಾಲರ್ ಮೇಲೆ ಹೂಡಿಕೆ ಹೆಚ್ಚುತ್ತಿದೆ.

ದಿಕ್ಕು ನಿರ್ಧರಿಸಲಿರುವ ತ್ರೈಮಾಸಿಕ ವರಮಾನ

ಕಾರ್ಪೊರೇಟ್ ಸಂಸ್ಥೆಗಳ ತ್ರೈಮಾಸಿಕ ವರಮಾನ, ವಿದೇಶಿ ಹೂಡಿಕೆದಾರರ ನಡವಳಿಕೆ ಮತ್ತು ಜಾಗತಿಕ ಪ್ರವೃತ್ತಿಗಳು ಷೇರು ಮಾರುಕಟ್ಟೆಯ ವಹಿವಾಟು ದಿಕ್ಕನ್ನು ನಿರ್ಧರಿಸಲಿವೆ ಎಂದು ಮಾರುಕಟ್ಟೆ ಪರಿಣತರು ಹೇಳಿದ್ದಾರೆ.

ಬ್ರೆಂಟ್ ಕಚ್ಚಾತೈಲ ಮತ್ತು ರೂಪಾಯಿ–ಡಾಲರ್ ಮೌಲ್ಯದ ಏರುಪೇರು ಕೂಡ ಮಾರುಕಟ್ಟೆ ಮೇಲೆ ಪ್ರಭಾವ ಬೀರಬಹುದು.

'ಕಂಪೆನಿಗಳ ಎರಡನೇ ತ್ರೈಮಾಸಿಕದ ವರಮಾನ ವರದಿಯು ಇನ್ನೇನು ಬಿಡುಗಡೆಯಾಗಲಿದೆ. ಇದು ಹೂಡಿಕೆದಾರರ ಮನಃಸ್ಥಿತಿಯ ಮೇಲೆ ಗಣನೀಯ ಪರಿಣಾಮ ಬೀರಲಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಖರೀದಿ ಮುಂದುವರಿಸಿದರೆ ಮಾರುಕಟ್ಟೆಯು ಮೇಲಕ್ಕೆ ಹೋಗಬಹುದು' ಎಂದು ಸ್ವಸ್ತಿಕಾ ಇನ್ವೆಸ್ಟ್‌ಮಾರ್ಟ್‌ನ ಸಂಶೋಧನೆ ವಿಭಾಗದ ಮುಖ್ಯಸ್ಥ ಸಂತೋಷ್ ಮೀನಾ ಹೇಳಿದ್ದಾರೆ.

ಎಚ್‌ಪಿಸಿಎಲ್, ಎನ್‌ಎಚ್‌ಪಿಸಿ, ಐಆರ್‌ಸಿಟಿಸಿ, ಪವರ್ ಗ್ರಿಡ್, ಟಾಟಾ ಪವರ್, ಅಶೋಕ್ ಲೇಲ್ಯಾಂಡ್, ಕೋಲ್ ಇಂಡಿಯಾ, ಹಿಂಡಾಲ್ಕೊ, ಎಲ್‌ಐಸಿ, ಮಹೀಂದ್ರಾ ಆ್ಯಂಡ್ ಮಹೀಂದ್ರಾ, ಟಾಟಾ ಕೆಮಿಕಲ್ಸ್, ನಂದ ಮುಂತಾದ ಪ್ರಮುಖ ಕಂಪೆನಿಗಳ ಎರಡನೇ ತ್ರೈಮಾಸಿಕದ ವರಮಾನ ವರದಿಯು ಮುಂದಿನ ದಿನಗಳಲ್ಲಿ ಪ್ರಕಟ ಆಗಲಿದೆ.

ಕಳೆದ ವಾರದಲ್ಲಿ ಮುಂಬೈ ಷೇರುಪೇಟೆಯು 580.98 ಅಂಶಗಳಷ್ಟು ಏರಿಕೆ ಕಂಡಿದೆ. ನಿಫ್ಟಿ ಸೂಚ್ಯಂಕವು 183.35 ಅಂಶಗಳಷ್ಟು ಏರಿದೆ.

ಅಂಕಿ-ಅಂಶಗಳು

₹24,548 ಕೋಟಿ, ಅಕ್ಟೋಬರ್‌ನಲ್ಲಿ ಹಿಂದಕ್ಕೆ ಪಡೆಯಲಾದ ಮೊತ್ತ

₹14,767 ಕೋಟಿ, ಸೆಪ್ಟೆಂಬರ್‌ನಲ್ಲಿ ಹಿಂದಕ್ಕೆ ಪಡೆಯಲಾದ ಮೊತ್ತ

₹92,560 ಕೋಟಿ, ಷೇರುಪೇಟೆಯಲ್ಲಿ ಈ ವರ್ಷ ಈವರೆಗಿನ ವಿದೇಶಿ ಹೂಡಿಕೆ

₹37,485 ಕೋಟಿ, ಬಾಂಡ್ ಮಾರುಕಟ್ಟೆಯಲ್ಲಿ ಈ ವರ್ಷ ಈವರೆಗಿನ ವಿದೇಶಿ ಹೂಡಿಕೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹245-455

ದ್ವಿತಳಿ (ಬಿ.ವಿ) ₹325-621

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹73

ಮೈಸೂರು
100 ಮೊಟ್ಟೆಗೆ ₹570

ಐಒಸಿ ಸ್ವಾಧೀನಕ್ಕೆ ಮರ್ಕೇಟರ್ ಪೆಟ್ರೋಲಿಯಂ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ತೈಲ ನಿಗಮವು (ಐಒಸಿ) ಮರ್ಕೇಟರ್ ಪೆಟ್ರೋಲಿಯಂ ಲಿಮಿಟೆಡ್ (ಎಂಪಿಎಲ್) ಅನ್ನು ₹148 ಕೋಟಿಗೆ ಸ್ವಾಧೀನಪಡಿಸಿಕೊಂಡಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಎಂಪಿಎಲ್‌ನ ಶೇ 100ರಷ್ಟು ಪಾಲನ್ನು ಸ್ವಾಧೀನಪಡಿಸಿಕೊಳ್ಳಲು ಐಒಸಿ ಸಲ್ಲಿಸಿದ ಪ್ರಸ್ತಾವಕ್ಕೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಮುಂಬೈ ಪೀಠ 2023ರ ನ. 2ರಂದು ದಿವಾಳಿ ಸಂಹಿತೆ ನಿಬಂಧನೆಗಳ ಅಡಿಯಲ್ಲಿ ಅನುಮೋದಿಸಿದೆ. ನಿರ್ಣಯದ ಪ್ರಕಾರ, ತೈಲ ನಿಗಮವು ಭದ್ರತೆ ಹೊಂದಿರುವ ಸಾಲಗಾರರಿಗೆ ₹135 ಕೋಟಿ ಪಾವತಿಸುತ್ತದೆ. ಭದ್ರತೆ ಹೊಂದಿಲ್ಲದ ಸಾಲಗಾರರಿಗೆ ಯಾವುದೇ ಪಾವತಿ ಒದಗಿಸಲಾಗಿಲ್ಲ. ಕಾರ್ಯನಿರ್ವಹಣಾ ವೆಚ್ಚಕ್ಕೆ ಸಾಲ ನೀಡಿದ ಸಾಲಗಾರರಿಗೆ, ಉದ್ಯೋಗಿಗಳು, ಶಾಸನ ಬದ್ಧ ಬಾಕಿಗೆ ₹73 ಕೋಟಿ ಬದಲು ₹5.40 ಕೋಟಿ ನೀಡಲಿದೆ.

ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿ: ವಿದಿತ್‌ಗೆ ಜಂಟಿ ಮುನ್ನಡೆ

ಅಗ್ರಸ್ಥಾನದಲ್ಲಿ ಮುಂದುವರಿದ ವೈಶಾಲಿ

ಐಲ್ ಆಫ್ ಮ್ಯಾನ್, ಯುಕೆ (ಪಿಟಿಐ): ಭಾರತದ ಆರ್.ವೈಶಾಲಿ ಅವರು ಇಲ್ಲಿ ನಡೆಯುತ್ತಿರುವ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಮಹಿಳಾ ವಿಭಾಗದ 10ನೇ ಸುತ್ತಿನಲ್ಲಿ ಮಾಜಿ ವಿಶ್ವ ಚಾಂಪಿಯನ್ ಚೀನಾದ ಝೊಂಗ್‌ಯಿ ತಾನ್ ಅವರನ್ನು ಮಣಿಸಿ ಒಂಟಿಯಾಗಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಮಾತ್ರವಲ್ಲ, ತಮ್ಮ ಲೈವ್ ರೇಟಿಂಗ್ ಪಾಯಿಂಟ್ಸ್‌ಅನ್ನು 2,498ಕ್ಕೆ ಹೆಚ್ಚಿಸಿಕೊಂಡಿರುವ ಅವರು ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೆ ಇನ್ನಷ್ಟು ಸನಿಹ ಬಂದಿದ್ದಾರೆ.

ಪ್ರಜ್ಞಾನಂದ ಅವರ ಅಕ್ಕ ವೈಶಾಲಿ, ಇನ್ನೆರಡು ಪಾಯಿಂಟ್ಸ್ ಗಳಿಸಿದರೆ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಳ್ಳಲಿದ್ದಾರೆ. ಹಾಗಾದಲ್ಲಿ, ಜಿಎಂ ಪಟ್ಟ ಗಳಿಸಿದ ವಿಶ್ವದ ಮೊದಲ ಸಹೋದರ–ಸಹೋದರಿ ಎಂಬ ಗೌರವ ಪ್ರಜ್ಞಾನಂದ ಮತ್ತು ವೈಶಾಲಿ ಅವರಿಗೆ ಲಭಿಸಲಿದೆ.

10 ಸುತ್ತುಗಳ ಬಳಿಕ ವೈಶಾಲಿ ಅವರು ಎಂಟು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಉಕ್ರೇನ್‌ನ ಆನ್ನಾ ಮುಝಿಚುಕ್ ಅವರು ಏಳೂವರೆ ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಚೆನ್ನೈನ ಆಟಗಾರ್ತಿ ಕೊನೆಯ ಸುತ್ತಿನಲ್ಲಿ ಮಂಗೋಲಿಯದ ಬಕ್ತುಯಾಗ್ ಮುಂಗುತುವಾಲ್ ಅವರನ್ನು ಎದುರಿಸುವರು.

ಆರ್. ವೈಶಾಲಿ

ವಿದಿತ್‌ಗೆ ಜಂಟಿ ಮುನ್ನಡೆ: ಓಪನ್ ವಿಭಾಗದಲ್ಲಿ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅವರು ರುಮೇನಿಯಾದ ಬೊಗ್ಡಾನ್ ಡೇನಿಯಲ್ ಡೆಕ್ ವಿರುದ್ಧ ಗೆದ್ದು ಜಂಟಿ ಮುನ್ನಡೆಯಲ್ಲಿದ್ದಾರೆ. ನಾಲ್ಕನೇ ಗೆಲುವು ಸಾಧಿಸಿದ ಅವರು ಒಟ್ಟು 7.5 ಪಾಯಿಂಟ್ಸ್ ಹೊಂದಿದ್ದು, ಅಮೆರಿಕದ ಹಿಕಾರು ನಕಾಮುರಾ ಹಾಗೂ ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಜತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಅರ್ಜುನ್ ಇರಿಗೇಶಿ (7 ಪಾಯಿಂಟ್ಸ್) ಅವರು 10ನೇ ಸುತ್ತಿನಲ್ಲಿ ಅಮೆರಿಕದ ಸ್ಯಾಮುಯೆಲ್ ಸೇವಿಯನ್ ವಿರುದ್ಧ ಗೆದ್ದರು. ಜಂಟಿ ನಾಲ್ಕನೇ ಸ್ಥಾನದಲ್ಲಿರುವ ಅವರು ಅಂತಿಮ ಸುತ್ತಿನಲ್ಲಿ ನಕಾಮುರಾ ಎದುರು ಆಡಲಿದ್ದಾರೆ.

ಆರ್.ಪ್ರಜ್ಞಾನಂದ (6 ಪಾಯಿಂಟ್ಸ್) ಅವರು ಉಕ್ರೇನ್‌ನ ಆ್ಯಂಟೊನ್ ಕೊರೊಬೊವ್ ಅವರೊಂದಿಗೆ ಡ್ರಾ ಮಾಡಿಕೊಂಡರು. ಭಾರತದ ಇತರ ಸ್ಪರ್ಧಿಗಳಾದ ಪಿ.ಹರಿಕೃಷ್ಣ, ಅರವಿಂದ ಚಿದಂಬರಂ ಮತ್ತು ಎಸ್.ಎಲ್.ನಾರಾಯಣನ್ (ಎಲ್ಲರೂ ತಲಾ 5.5 ಪಾಯಿಂಟ್ಸ್) ಅವರು ತಮ್ಮ ಎದುರಾಳಿಗಳ ಜತೆ ಡ್ರಾ ಮಾಡಿಕೊಂಡರು.

ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಗೆಲುವು

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ಯಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ತಂಡದ ಪರ ಆರಿಫ್ ಶೇಖ್ (40ನೇ), ಸೈಯ್ಯದ್ ಉನೈರ್ (42ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು 4–1 ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಇಶಾನ್ ಶಾಹಿ (36, 67ನೇ), ಎಂ.ಡಿ ಅಲ್ತಾಬ್ ಹುಸೇನ್ (75ನೇ), ನಿಖಿಲ್ ಮಾಲಿ (85ನೇ) ಗೋಲು ಗಳಿಸಿದರು. ಇಂಡಿಪೆಂಡೆಂಟ್ಸ್ ಪರ ಮಾಹಿನ್ ಪಿ.ಹುಸೇನ್ (90 + 5ನೇ) ಏಕೈಕ ಗೋಲು ತಂದಿತ್ತರು.

ಕಲಬುರಗಿಯಲ್ಲಿ ಫಿಫಾ ಮಾನ್ಯತೆ ಫುಟ್‌ಬಾಲ್ ಮೈದಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಫಿಫಾ ಮಾನ್ಯತೆಯ ಸಿಂಥೆಟಿಕ್ ಟರ್ಫ್ ಫುಟ್‌ಬಾಲ್ ಮೈದಾನ ಕಲಬುರಗಿ ನಗರದ ವೀರೇಂದ್ರ ಪಾಟೀಲ ಬಡಾವಣೆಯಲ್ಲಿ ತಲೆಯೆತ್ತಿದೆ. ಈಗಾಗಲೇ ರಾಜ್ಯದಲ್ಲಿ ಬೆಂಗಳೂರು ಹಾಗೂ ಬಳ್ಳಾರಿಯಲ್ಲಿ ಇಂತಹ ಅಂಗಳಗಳಿದ್ದು, ಇದು ರಾಜ್ಯದ 3ನೇ ಅಂಗಳವಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ(ಕೆಕೆಆರ್‌ಡಿಬಿ)ಯು, ಜಿಲ್ಲೆಯಲ್ಲಿ ಫುಟ್‌ಬಾಲ್ ಕ್ರೀಡೆಯ ಅಭಿವೃದ್ಧಿಗಾಗಿ 2020–21ನೇ ಸಾಲಿನಲ್ಲಿ ₹3 ಕೋಟಿ ಅನುದಾವನ್ನು ಮೀಸಲಿರಿಸಿತ್ತು. ಲೋಕೋಪಯೋಗಿ ಇಲಾಖೆಯು ಕಾಮಗಾರಿಯನ್ನು ನಿರ್ವಹಿಸಿತ್ತು. ಸದ್ಯ ಮೈದಾನದ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರವೇ ಲೋಕಾರ್ಪಣೆಗೊಳ್ಳಲಿದೆ.

ಪೆವಿಲಿಯನ್, ಗ್ಯಾಲರಿ, ಫ್ಲಡ್‌ಲೈಟ್ ವ್ಯವಸ್ಥೆ ಸೇರಿದಂತೆ ಇನ್ನಿತರ ಕಾಮಗಾರಿಗಳು ಬಾಕಿಯಿದ್ದು, ಇದಕ್ಕಾಗಿ ಹೆಚ್ಚಿನ ಅನುದಾನದ ಅಗತ್ಯವಿದೆ.

ವಿಶೇಷತೆಗಳೇನು?: ಫುಟ್‌ಬಾಲ್ ಅಂಗಳವನ್ನು ಫಿಫಾ ಮಾನದಂಡಗಳ ಪ್ರಕಾರ ನಿರ್ಮಿಸಲಾಗಿದೆ. ಆರಂಭದಲ್ಲಿ ಕಂಕರ್, ವೆಟ್‌ಮಿಕ್ಸ್, ಎಂ–ಸ್ಯಾಂಡ್‌ಗಳನ್ನು ಬಳಸಿ ಭದ್ರ ಬುನಾದಿ ಹಾಕಲಾಗಿದೆ. ಬಳಿಕ ರಬ್ಬರ್ ಹಾಸು, ಸಿಂಥೆಟಿಕ್ ಟರ್ಫ್ (ಕೃತಕ ಹುಲ್ಲಿನ ಹಾಸು) ಅಳವಡಿಸಲಾಗಿದ್ದು, ನಂತರದಲ್ಲಿ ಸಿಲಿಕಾ ಸ್ಯಾಂಡ್ ಹಾಗೂ ಎಸ್‌ಬಿಆರ್ (ಸ್ಟೈರೀನ್ ಬ್ಯೂಟಾಡಿನ್ ರಬ್ಬರ್) ಅನ್ನು ಬಳಸಿ, ಬ್ರಷಿಂಗ್ ಮಾಡಲಾಗಿದೆ. ಇದು ಆಟಗಾರರಿಗೆ ಗಾಯಗಳಾಗದಂತೆ ತಡೆಯುತ್ತದೆ.

ಕಲಬುರಗಿಯ ವೀರೇಂದ್ರ ಪಾಟೀಲ ಬಡಾವಣೆಯಲ್ಲಿ ನಿರ್ಮಾಣವಾಗಿರುವ ಫುಟ್‌ಬಾಲ್ ಮೈದಾನ –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre

ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Multiple Vacancy

ವೆಜ್ ಹೋಟೆಲ್ಗೆ ಚೆಫ್, ದೋಸೆ ಮಾಸ್ಟರ್, ಕ್ಯಾಷಿಯರ್, ಟೀ ಮಾಸ್ಟರ್, ಕೌಂಟರ್ ಬಾಯ್ಸ್, ಕ್ಲೀನರ್ ಸಿಬ್ಬಂದಿ ಬೇಕಾಗಿದ್ದಾರೆ. +91 7019299055/ 8861453552

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000- 17,000. 8951315839, 9141634619

ಭವಿಷ್ಯ

Astrology

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Travel

ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: 17.11.2023 23.11.2023 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ,ಓಂಕಾರೇಶ್ವರ. 20.11.2023 14.02.2024 ಕಾಶಿ,ಬುದ್ಧಗಯಾ ನೈಮಿಶಾರಣ್ಯ,ಜಾರ್ಖಂಡ ಬೈದ್ಯನಾಥ್. 29.11.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ ದಕ್ಷಿಣ/ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 8431888138 9686708171

Pilgrimage Tours

ರಾಜಸ್ಥಾನ್ ಪ್ರವಾಸ 9ದಿನಗಳು 18/11/23. ಕಾಶಿ ಪ್ರವಾಸ ಎರಡು ಜ್ಯೋತಿರ್ಲಿಂಗದೊಂದಿಗೆ 7ದಿನಗಳು.24/11/23 ನೇಪಾಳ ಪ್ರವಾಸ ಹಾಗೂ ಕಾಶಿ ಸೇರಿ 10ದಿನಗಳು 28/11/23. ಸುವರ್ಣ ಯಾತ್ರ 9019462508, 9480843945

ಭಾರತೀಯ ರೈಲ್ವೇಸ್ ಭಾರತ್ ಗೌರವ್ ರೈಲು
ಖಾಸಗಿ ರೈಲು ಸರ್ವಿಸ್
ಗುಜರಾತ್ ಪ್ರವಾಸ
ಥಾಕೂರ್ ದ್ವಾರಕಾ - ಬೆಟ್ ದ್ವಾರಕ
ಸೋಮನಾಥ - ಉದೈಪುರ್ - ನಾಥದ್ವಾರ
ಕಂಕ್ರೋಲಿ ದ್ವಾರಕಾ - ನಿಷ್ಕಳಂಕ ಮಹಾದೇವ್
ಸರ್ದಾರ್ ವಲ್ಲಭಾಯಿ ಪಟೇಲ್ ಏಕತೆ ಪ್ರತಿಮೆ
10DEC|19050|12DAYS
ಖಾಸಗಿ ರೈಲು | ದೃಶ್ಯ ಪ್ರೇಕ್ಷಣ | ಟೂರ್ ಮ್ಯಾನೇಜರ್ ರೂಮ್ಸ್ | ಊಟ ವಸತಿ
9015500200 | RAILTOURISM.COM

ಅಂಡಮಾನ್ ಹವಳದ್ವೀಪ ಪ್ರತಿ ಗುರುವಾರ 5/8ದಿನಗಳು ಹಡಗು/ವಿಮಾನದಲ್ಲಿ Royal Package 27.11.2023 ಮಾತು11.12.2023 ರಿಯಾಯಿತಿ ದರದಲ್ಲಿ 6ದಿನಗಳು ಕಾಶಿ ಗಯಾ ಅಲಹಾಬಾದ್ ಅಯೋಧ್ಯ(ಕೆಲವೇ ಸೀಟುಗಳಿವೆ) ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ವಿರಾಟ್ ದಾಖಲೆಯ ಶತಕ • ಜಡೇಜ ಆಲ್‌ರೌಂಡ್ ಆಟ • 8ನೇ ಪಂದ್ಯ ಗೆದ್ದ ಭಾರತ • ಕುಸಿದ ದಕ್ಷಿಣ ಆಫ್ರಿಕಾ

ರೋಹಿತ್ ಬಳಗದ ಅಜೇಯ ಓಟ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಈಡನ್ ಗಾರ್ಡನ್‌ನಲ್ಲಿ ಭಾನುವಾರ ಕಿಕ್ಕಿರಿದು ಸೇರಿದ್ದ ಕ್ರಿಕೆಟ್ ಅಭಿಮಾನಿಗಳಿಗೆ ವಿರಾಟ್ ಕೊಹ್ಲಿ ತಮ್ಮ ಜನ್ಮದಿನದ 'ಸಿಹಿ'ಯನ್ನು ಹಂಚಿದರು.

ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 49ನೇ ಶತಕ ದಾಖಲಿಸಿದ ವಿರಾಟ್, ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಸಾಧನೆಯನ್ನು ಸಮಗಟ್ಟಿದರು. 11 ವರ್ಷಗಳ ನಂತರ ಸಚಿನ್‌ಗೆ ಸರಿಯಾಟಿಯಾಗಿ ನಿಂತರು. 2012ರಲ್ಲಿ ಏಕದಿನ ಪಂದ್ಯದಲ್ಲಿ ಸಚಿನ್ 49ನೇ ಶತಕ ದಾಖಲಿಸಿದ್ದರು. ಅದು ಅವರ ನೂರನೇ ನೂರು (ಟೆಸ್ಟ್ ಮಾದರಿಯ ಶತಕಗಳು ಸೇರಿ) ಕೂಡ ಆಗಿತ್ತು.

ಇನ್ನೊಂದೆಡೆ ಸ್ಪಿನ್ ಮೋಡಿ ಮೆರೆದ ರವೀಂದ್ರ ಜಡೇಜ ದಕ್ಷಿಣ ಆಫ್ರಿಕಾ ತಂಡವನ್ನು ಹೆಡೆಮುರಿ ಕಟ್ಟಿದರು. ಆತಿಥೇಯ ಭಾರತ ತಂಡವು 243 ರನ್‌ಗಳ ಭಾರಿ ಜಯ ಸಾಧಿಸಿ, ಅಂಕಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಗಟ್ಟಿ ಮಾಡಿಕೊಂಡಿತು. ಟೂರ್ನಿಯಲ್ಲಿ ಭಾರತಕ್ಕೆ ಇದು ಸತತ ಎಂಟನೇ ಜಯವಾಗಿದೆ.

ಟೂರ್ನಿಯುದ್ದಕ್ಕೂ ರನ್‌ಗಳ ಹೊಳೆಯನ್ನೇ ಹರಿಸಿದ್ದ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಇಲ್ಲಿ 327 ರನ್‌ಗಳ ಗೆಲುವಿನ ಗುರಿಗೆ ಉತ್ತರವಾಗಿ 27.1 ಓವರ್‌ಗಳಲ್ಲಿ 83 ರನ್ ಗಳಿಸಿ ಶರಣಾದರು. ಕ್ರೀಡಾಂಗಣದಲ್ಲಿ ಸೇರಿದ್ದ 70 ಸಾವಿರಕ್ಕೂ ಹೆಚ್ಚು ಅಭಿ ಮಾನಿಗಳು ಸಂಭ್ರಮದಲ್ಲಿ ತೇಲಿದರು. ತ್ರಿವರ್ಣ ಧ್ವಜಗಳು ನಲಿದವು.

ಉತ್ತಮ ಆರಂಭ: ಈಡನ್ ಗಾರ್ಡನ್ ಪಿಚ್ ಮರ್ಮವನ್ನು ಸರಿಯಾಗಿ ಅರಿತಿದ್ದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು.

ಅಲ್ಲದೇ ಶುಭಮನ್ ಗಿಲ್ ಅವರೊಂದಿಗೆ ರೋಹಿತ್ ಉತ್ತಮ ಆರಂಭವನ್ನೂ ನೀಡಿದರು. ಇನಿಂಗ್ಸ್‌ನ ಮೊದಲ 35 ಎಸೆತಗಳಲ್ಲಿ 62 ರನ್ ಪೇರಿಸಿದರು. ಅದರಲ್ಲಿ ಗಿಲ್ ತುಸು ನಿಧಾನವಾಗಿ (23; 24ಎ) ಆಡಿದರೂ ನಾಲ್ಕು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಆದರೆ ರೋಹಿತ್ 24 ಎಸೆತಗಳಲ್ಲಿ 40 ರನ್ ಸೂರೆ ಮಾಡಿದರು. ಆರು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಸಿಡಿಸಿ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿದರು. ಆದರೆ ಆರನೇ ಓವರ್‌ನಲ್ಲಿ ಕಗಿಸೊ ರಬಾಡ ಎಸೆತದಲ್ಲಿ ರೋಹಿತ್ ಔಟಾದರು.

ಗಿಲ್ ಜೊತೆಗೆ ಸೇರಿದ ವಿರಾಟ್ ಕೊಹ್ಲಿ ದೊಡ್ಡ ಹೊಡೆತಗಳಿಗೆ ಕೈಹಾಕಲಿಲ್ಲ. ಪಿಚ್‌ನಲ್ಲಿ ಚೆಂಡಿನ ಚಲನೆ ತುಸು ನಿಧಾನವಾಗತೊಡಗಿತ್ತು. ತಿರುವು ಮತ್ತು ಅನಿರೀಕ್ಷಿತ ಬೌನ್ಸ್ ಕೂಡ ಆಗುತ್ತಿತ್ತು. ಆದ್ದರಿಂದ ಅವರು ಎಚ್ಚರಿಕೆಯಿಂದ ಆಡಿದರು.

ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

11ನೇ ಓವರ್‌ನಲ್ಲಿ ಕೇಶವ್ ಮಹಾರಾಜ್ ಎಸೆತವನ್ನು ಅಂದಾಜಿಸುವಲ್ಲಿ ವಿಫಲರಾದ ಗಿಲ್ ಕ್ಲೀನ್‌ಬೌಲ್ಡ್ ಆದರು. ಈ ಹಂತದಲ್ಲಿ ವಿರಾಟ್ ಜೊತೆಗೂಡಿದ ಶ್ರೇಯಸ್ ಅಯ್ಯರ್ (77; 87ಎ) ಚೆಂದದ ಜೊತೆಯಾಟವಾಡಿದರು.

ಮೂರನೇ ವಿಕೆಟ್‌ಗೆ 134 ರನ್ ಸೇರಿಸಲು ಕಾರಣರಾದರು. ಅದರಲ್ಲಿ ಶ್ರೇಯಸ್ ಏಳು ಬೌಂಡರಿ ಮತ್ತು ಎರಡು ಸಿಕ್ಸರ್ ಬಾರಿಸಿದರು. 37ನೇ ಓವರ್‌ನಲ್ಲಿ ಶ್ರೇಯಸ್ ವಿಕೆಟ್ ಗಳಿಸಿದ ಲುಂಗಿ ಗಿಡಿ ಜೊತೆಯಾಟ ಮುರಿದರು. ಕೆ.ಎಲ್. ರಾಹುಲ್ ಕೇವಲ ಎಂಟು ರನ್ ಗಳಿಸಿದರು.

ಸೂರ್ಯಕುಮಾರ್ ಯಾದವ್ 14 ಎಸೆತಗಳಲ್ಲಿ 22 ರನ್ ಹೊಡೆದರು. ಆದರೆ ವಿರಾಟ್ ಮಾತ್ರ ತಮ್ಮ ಆಟಕ್ಕೆ ಅಂಟಿಕೊಂಡಿದ್ದರು.ಅವರು ಇಲ್ಲಿ ಒಂದೂ ಸಿಕ್ಸರ್ ದಾಖಲಿಸಲಿಲ್ಲ. 119 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಆದರೆ ಎಂದಿನಂತೆ ಸಂಭ್ರಮಿಸಲಿಲ್ಲ. ಹೆಲ್ಮೆಟ್ ತೆಗೆದು ಆಗಸದತ್ತ ಬ್ಯಾಟ್ ಎತ್ತಿ ವಂದಿಸಿದರು. ಬೆವರು ಒಸರುತ್ತಿದ್ದ ಮೊಗದಲ್ಲಿ ದಣಿವು ಕಂಡಿತ್ತು. ಇನ್ನೊಂದು ಬದಿಯಲ್ಲಿದ್ದ ರವೀಂದ್ರ ಜಡೇಜ ಅವರನ್ನು ಅಪ್ಪಿಕೊಂಡು ಅಭಿನಂದನೆ ಸ್ವೀಕರಿಸಿದರು.

ಕೇವಲ 15 ಎಸೆತಗಳಲ್ಲಿ 29 ರನ್ ಸೂರೆ ಮಾಡಿದ ಜಡೇಜ ಬೌಲಿಂಗ್‌ನಲ್ಲಿಯೂ ಮಿಂಚಿದರು.

ಐದು ವಿಕೆಟ್ ಗೊಂಚಲು: ಟೂರ್ನಿಯಲ್ಲಿ ನಾಲ್ಕು ಶತಕ ಬಾರಿಸಿರುವ ಕ್ವಿಂಟನ್ ಡಿ ಕಾಕ್ ಅವರನ್ನು ತಮ್ಮ ಮೊದಲ ಓವರ್‌ನಲ್ಲಿಯೇ ಕ್ಲೀನ್‌ಬೌಲ್ಡ್ ಮಾಡಿದ ಸಿರಾಜ್ ದಕ್ಷಿಣ ಆಫ್ರಿಕಾದ ಪತನಕ್ಕೆ ಮುನ್ನುಡಿ ಬರೆದರು.

ಒಂಬತ್ತನೇ ಓವರ್‌ನಲ್ಲಿ ತೆಂಬಾ ಬವುಮಾ ವಿಕೆಟ್ ಹಾರಿಸಿದ ಜಡೇಜ ತಮ್ಮ ಮೋಡಿ ಆರಂಭಿಸಿದರು. ಸಿಡಿಲಬ್ಬರದ ಶೈಲಿಯ ಬ್ಯಾಟರ್ ಹೆನ್ರಿಚ್ ಕ್ಲಾಸನ್, ಡೇವಿಡ್ ಮಿಲ್ಲರ್, ಕೇಶವ್ ಮಹಾರಾಜ್, ಕಗಿಸೊ ರಬಾಡ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಇನ್ನೊಂದು ಬದಿಯಿಂದ ಉಳಿದ ಬೌಲರ್‌ಗಳೂ ಅವರಿಗೆ ಉತ್ತಮ ಜೊತೆ ನೀಡಿದರು. ದಕ್ಷಿಣ ಆಫ್ರಿಕಾದ ಯಾವುದೇ ಬ್ಯಾಟರ್ ವೈಯಕ್ತಿಕ ಸ್ಕೋರ್ 15 ರನ್ ಕೂಡ ದಾಟಲಿಲ್ಲ.

ವಿಕೆಟ್ ಪಡೆದ ಸಂಭ್ರಮದಲ್ಲಿ ರವೀಂದ್ರ ಜಡೇಜ

ಶತಕ ಗಳಿಸಿದ ಭಾರತ ತಂಡದ ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ವಿವಿಧ ದೇಶಗಳ ವಿರುದ್ಧ ಕೊಹ್ಲಿ ಶತಕ

ದೇಶ	ಶತಕ
ಶ್ರೀಲಂಕಾ	10
ವೆಸ್ಟ್ ಇಂಡೀಸ್	9
ಆಸ್ಟ್ರೇಲಿಯಾ	8
ದಕ್ಷಿಣ ಆಫ್ರಿಕಾ	5
ನ್ಯೂಜಿಲೆಂಡ್	5
ಬಾಂಗ್ಲಾದೇಶ	5
ಇಂಗ್ಲೆಂಡ್	3
ಪಾಕಿಸ್ತಾನ	3
ಜಿಂಬಾಬ್ವೆ	1

ಮೊದಲ ಶತಕ

2009ರಲ್ಲಿ ಈಡನ್ ಗಾರ್ಡನ್ಸ್‌ನಲ್ಲಿ ಶ್ರೀಲಂಕಾ ವಿರುದ್ಧ 114 ಎಸೆತಗಳಲ್ಲಿ 107 ರನ್

ವೇಗದ ಶತಕ

2013ರಲ್ಲಿ ಜೈಪುರದಲ್ಲಿ ಆಸ್ಟ್ರೇಲಿಯಾ ಎದುರು 52 ಎಸೆತಗಳಲ್ಲಿ ಸಾಧನೆ

ಸ್ಕೋರ್ ಕಾರ್ಡ್

ಭಾರತ 5ಕ್ಕೆ 326 (50 ಓವರ್)

ರೋಹಿತ್ ಸಿ ಬವುಮಾ ಬಿ ರಬಾಡ 40 (24 ಎ., 4X6, 6X2)
ಗಿಲ್ ಬಿ ಮಹಾರಾಜ್ 23 (24 ಎ., 4X4, 6X1)
ಕೊಹ್ಲಿ ಔಟಾಗದೆ 101 (121 ಎ., 4X10)
ಅಯ್ಯರ್ ಸಿ ಮರ್ಕರಂ ಬಿ ಗಿಡಿ 77 (87 ಎ., 4X7, 6X2)
ರಾಹುಲ್ ಸಿ ಡಸೆ ಬಿ ಯಾನ್ಸನ್ 8 (17 ಎ)
ಸೂರ್ಯಕುಮಾರ್ ಸಿ ಡಿ ಕಾಕ್ ಬಿ ಶಮ್ಸಿ 22 (14 ಎ., 4X5)
ಜಡೇಜ ಔಟಾಗದೆ 29 (15 ಎ., 3X4, 6X1)

ಇತರೆ: 26 (ಲೆಗ್ ಬೈ 2, ನೋಬಾಲ್ 2, ವೈಡ್ 22)

ವಿಕೆಟ್ ಪತನ: 1–62 (ರೋಹಿತ್ ಶರ್ಮಾ; 5.5), 2–93 (ಶುಭಮನ್ ಗಿಲ್; 10.3), 3–227 (ಶ್ರೇಯಸ್ ಅಯ್ಯರ್; 36.5), 4–249 (ಕೆ. ಎಲ್.ರಾಹುಲ್; 42.1), 5–285 (ಸೂರ್ಯಕುಮಾರ್ ಯಾದವ್; 45.6)

ಬೌಲಿಂಗ್: ಲುಂಗಿ ಗಿಡಿ 8.2–0–63–1, ಮಾರ್ಕೊ ಯಾನ್ಸನ್ 9.4–0–94–1, ಕಗಿಸೊ ರಬಾಡ 10–1–48–1, ಕೇಶವ್ ಮಹಾರಾಜ್ 10–0–30–1, ತಬ್ರೇಜ್ ಶಮ್ಸಿ 10–0–72–1, ಏಡನ್ ಮರ್ಕರಂ 2–0–17–0

ದಕ್ಷಿಣ ಆಫ್ರಿಕಾ 83 (27.1 ಓವರ್)

ಡಿ ಕಾಕ್ ಬಿ ಸಿರಾಜ್ 5 (10 ಎ., 4X1)
ಬವುಮಾ ಬಿ ಜಡೇಜ 11 (19 ಎ., 4X1)
ಡಸೆ ಎಲ್‌ಬಿಡಬ್ಲ್ಯು ಬಿ ಶಮಿ 13 (32 ಎ., 4X1)
ಮರ್ಕರಂ ಸಿ ರಾಹುಲ್ ಬಿ ಶಮಿ 9 (6 ಎ., 4X2)
ಕ್ಲಾಸೆನ್ ಎಲ್‌ಬಿಡಬ್ಲ್ಯು ಬಿ ಜಡೇಜ 1 (11 ಎ)
ಮಿಲ್ಲರ್ ಬಿ ಜಡೇಜ 11 (11 ಎ., 4X2)
ಯಾನ್ಸನ್ ಸಿ ಜಡೇಜ ಬಿ ಕುಲದೀಪ್ 14 (30 ಎ., 4X1)
ಕೇಶವ್ ಬಿ ಜಡೇಜ 7 (11 ಎ., 4X1)
ರಬಾಡ ಸಿ ಮತ್ತು ಬಿ ಜಡೇಜ 6 (26 ಎ)
ಗಿಡಿ ಬಿ ಕುಲದೀಪ್ 0 (3)
ಶಮ್ಸಿ ಔಟಾಗದೆ 4 (4 ಎ., 4X1)

ಇತರೆ: 2 (ವೈಡ್ 2)

ವಿಕೆಟ್ ಪತನ: 1–6 (ಕ್ವಿಂಟನ್ ಡಿ ಕಾಕ್; 1.4), 2–22 (ತೆಂಬಾ ಬವುಮಾ; 8.3), 3–35 (ಏಡನ್ ಮರ್ಕರಂ; 9.5), 4–40 (ಹೆನ್ರಿಚ್ ಕ್ಲಾಸೆನ್; 12.5), 5–40 (ರೆಸಿ ವ್ಯಾನ್ ಡರ್ ಡಸೆ; 13.1), 6–59 (ಡೇವಿಡ್ ಮಿಲ್ಲರ್; 16.3), 7–67 (ಕೇಶವ್ ಮಹಾರಾಜ್; 18.4), 8–79 (ಮಾರ್ಕೊ ಯಾನ್ಸನ್; 25.4), 9–79 (ಕಗಿಸೊ ರಬಾಡ; 26.2), 10–83 (ಲುಂಗಿ ಗಿಡಿ; 27.1)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 5–0–14–0, ಮೊಹಮ್ಮದ್ ಸಿರಾಜ್ 4–1–11–1, ರವೀಂದ್ರ ಜಡೇಜ 9–1–33–5, ಮೊಹಮ್ಮದ್ ಶಮಿ 4–0–18–2, ಕುಲದೀಪ್ ಯಾದವ್ 5.1–1–7–2

ಪಂದ್ಯಶ್ರೇಷ್ಠ: ವಿರಾಟ್ ಕೊಹ್ಲಿ

ಫಲಿತಾಂಶ: ಭಾರತಕ್ಕೆ 243 ರನ್ ಗೆಲುವು

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	8	6	2	0	12	1.376
ಆಸ್ಟ್ರೇಲಿಯಾ	7	5	2	0	10	0.924
ನ್ಯೂಜಿಲೆಂಡ್	8	4	4	0	8	0.398
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	7	4	3	0	8	-0.330
ಶ್ರೀಲಂಕಾ	7	2	5	0	4	-1.162
ನೆದರ್ಲೆಂಡ್ಸ್	7	2	5	0	4	-1.398
ಬಾಂಗ್ಲಾದೇಶ	7	1	6	0	2	-1.446
ಇಂಗ್ಲೆಂಡ್	7	1	6	0	2	-1.504

ಅಗ್ರ ಐವರು

ಬ್ಯಾಟಿಂಗ್

ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	550
ವಿರಾಟ್ ಕೊಹ್ಲಿ (ಭಾರತ)	543
ರಚಿನ್ ರವೀಂದ್ರ (ನ್ಯೂಜಿಲೆಂಡ್)	523
ರೋಹಿತ್ ಶರ್ಮಾ (ಭಾರತ)	442
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	428

ಬೌಲಿಂಗ್

ಆ್ಯಡಂ ಜಂಪಾ (ಆಸ್ಟ್ರೇಲಿಯಾ)	19
ದಿಲ್ಶಾನ್ ಮಧುಶಂಕ (ಶ್ರೀಲಂಕಾ)	18
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	17
ಮೊಹಮ್ಮದ್ ಶಮಿ (ಭಾರತ)	16
ಶಹೀನ್ ಶಾ ಅಫ್ರಿದಿ (ಪಾಕಿಸ್ತಾನ)	16

ಶತಕವೆಂಬುದು ಇವರ (ವಿರಾಟ್ ಕೊಹ್ಲಿ) ರಕ್ತದಲ್ಲಿ ಹಿಮೊಗ್ಲೊಬಿನ್ ತರಹ ಹರಿಯುತ್ತಿದೆ. ಕಣ್ತುಂಬ ಕನಸು ತುಂಬಿಕೊಂಡು ತನ್ನ ಕಾರ್ಯದಕ್ಷತೆ, ಕಠಿಣ ಪರಿಶ್ರಮ, ಆಸಕ್ತಿ ಮತ್ತು ಪ್ರತಿಭೆಯಿಂದ ಆಟದ ಮೇಲೆ ಪ್ರಭುತ್ವ ಸಾಧಿಸಿದ ಯುವಕ. ಏಳು ಮತ್ತು ಬೀಳುಗಳಿದ್ದವು ನಿಜ. ಆದರೂ ತಮ್ಮ ಗುರಿ ಮತ್ತು ಸಾಧನೆಯ ಹಸಿವನ್ನು ನೀಗಿಸಿಕೊಳ್ಳುವತ್ತ ಗಟ್ಟಿಯಾಗಿ ನಿಂತರು. ಶುಭಾಶಯಗಳು.

-ವೀರೇಂದ್ರ ಸೆಹ್ವಾಗ್, ಮಾಜಿ ಕ್ರಿಕೆಟಿಗ

ಪಾಕಿಸ್ತಾನ ತಂಡಕ್ಕೆ ದಂಡ

ಬೆಂಗಳೂರು: ನ್ಯೂಜಿಲೆಂಡ್ ವಿರುದ್ಧ ಶನಿವಾರ ನಡೆದಿದ್ದ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ನಿಧಾನಗತಿಯಲ್ಲಿ ಓವರ್‌ಗಳನ್ನು ಮಾಡಿದ್ದಕ್ಕೆ ಪಾಕಿಸ್ತಾನ ತಂಡದ ಆಟಗಾರರಿಗೆ ಪಂದ್ಯ ಶುಲ್ಕದ ಶೇ 10 ದಂಡ ವಿಧಿಸಲಾಗಿದೆ.

'ನಿಗದಿಪಡಿಸಿದ ಸಮಯದಲ್ಲಿ ಎರಡು ಓವರ್‌ಗಳನ್ನು ಕಡಿಮೆ ಮಾಡಿದ್ದಕ್ಕೆ, ಐಸಿಸಿ ಮ್ಯಾಚ್ ರೆಫರಿ ರಿಚಿ ರಿಚರ್ಡ್ಸನ್ ಅವರು ಬಾಬರ್ ಬಳಗಕ್ಕೆ ದಂಡ ವಿಧಿಸಿದೆ' ಎಂದು ಐಸಿಸಿ ತಿಳಿಸಿದೆ.

'ಐಸಿಸಿ 2.22 ನಿಯಮದ ಪ್ರಕಾರ, ನಿಗದಿತ ಸಮಯದಲ್ಲಿ ಬೌಲಿಂಗ್ ಮಾಡಲು ವಿಫಲವಾದ ಪ್ರತಿ ಓವರ್‌ಗೆ ಆಟಗಾರರಿಗೆ ಪಂದ್ಯ ಶುಲ್ಕದ ಶೇ 5 ದಂಡ ವಿಧಿಸಲಾಗುತ್ತದೆ' ಎಂದಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಡಕ್ವರ್ಥ್ ಲೂಯಿಸ್ ನಿಯಮದಂತೆ ನ್ಯೂಜಿಲೆಂಡ್ ತಂಡವನ್ನು 21 ರನ್‌ಗಳಿಂದ ಮಣಿಸಿದ್ದ ಪಾಕ್, ಸೆಮಿಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿತ್ತು.

'ತೆಂಡೂಲ್ಕರ್ ಸದಾ ನನ್ನ ಹೀರೊ'

ಕೋಲ್ಕತ್ತ: 'ನನ್ನ ಹೀರೊ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಸರಿಗಟ್ಟಿರುವುದು ಭಾವನಾತ್ಮಕ ಕ್ಷಣವಾಗಿದೆ. ಅವರ ಆಟವನ್ನೇ ನೋಡುತ್ತ ಬೆಳೆದವನು. ಏನೇ ಆದರೂ, ಅವರಷ್ಟು ಶ್ರೇಷ್ಠನಾಗಲು ನನಗೆ ಸಾಧ್ಯವಿಲ್ಲ. ಅವರು ಸದಾ ನನ್ನ ಹೀರೊ' ಎಂದು ವಿರಾಟ್ ಕೊಹ್ಲಿ ಹೇಳಿದರು.

ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 49ನೇ ಶತಕ ದಾಖಲಿಸಿದ ವಿರಾಟ್ ಸಚಿನ್ ಸಾಧನೆಯನ್ನು ಸರಿಗಟ್ಟಿದರು. ಪಂದ್ಯದ ನಂತರ 'ಸ್ಟಾರ್ ಸ್ಪೋರ್ಟ್ಸ್'ನೊಂದಿಗೆ ಮಾತನಾಡಿದ ಅವರು ಸಚಿನ್ ಯಾವಾಗಲೂ ತಮಗೆ ಸ್ಫೂರ್ತಿ ಎಂದರು.

'ಟಿ.ವಿಯಲ್ಲಿ ಅವರ ಆಟವನ್ನು ನೋ ಡುತ್ತ ಬೆಳೆದ ದಿನಗಳನ್ನು ನಾನು ಮರೆತಿಲ್ಲ. ನಾನು ಸಾಧನ ಮಾಡಿದಾಗಲೆಲ್ಲ ಅವರಿಂದ ಬರುವ ಮೆಚ್ಚುಗೆಯ ನುಡಿಗಳು ಅತ್ಯಂತ ಅಪ್ಯಾಯಮಾನ' ಎಂದೂ ವಿರಾಟ್ ಹೇಳಿದರು.

ಪಂದ್ಯದ ಬಗ್ಗೆ ಮಾತನಾಡಿದ ಅವರು, 'ಟೂರ್ನಿಯಲ್ಲಿಯೇ ಅತ್ಯಂತ ಕಠಿಣ ಸ್ಪರ್ಧೆಯೊಡ್ಡಿದ ತಂಡದ ಎದುರಿನ ಪಂದ್ಯ ಇದಾಗಿತ್ತು. ನನ್ನ ಜನ್ಮದಿನದಂದು ಇದ್ದ ಪಂದ್ಯದಲ್ಲಿ ಗೆಲುವಿನ ತುಡಿತ ಇತ್ತು. ಈ ಗೆಲುವು ಮತ್ತು ಸಾಧನೆ ನನಗಂತೂ ವಿಶೇಷ. ನಾನು ಬೆಳಿಗ್ಗೆ ಎದ್ದಾಗಲೇ, ಇದು ಕೇವಲ ಒಂದು ಪಂದ್ಯವಷ್ಟೇ ಅಲ್ಲ. ವಿಶೇಷವಾದದ್ದು ಎಂದುಕೊಂಡಿದ್ದೆ' ಎಂದರು.

'ಆರಂಭಿಕ ಬ್ಯಾಟರ್‌ಗಳು ಉತ್ತಮ ಆರಂಭ ನೀಡಿದರು. ಆದರೆ ಚೆಂಡು ತುಸು ಹಳೆಯದಾದಂತೆ ಚಲನೆ ನಿಧಾನವಾಗತೊಡಗಿತು. ಅದಕ್ಕೆ ತಕ್ಕಂತೆ ಆಡುತ್ತ ಮೂನ್ನೂರಕ್ಕೂ ಹೆಚ್ಚಿನ ಮೊತ್ತವನ್ನು ಪೇರಿಸುವುದೇ ಗುರಿಯಾಗಿತ್ತು. 315ಕ್ಕಿಂತ ಹೆಚ್ಚು ಮೊತ್ತ ಗಳಿಸಿದಾಗ ನಿರೀಕ್ಷೆಗಿಂತಲೂ ಮುಂದಿದ್ದೇವೆ ಎಂಬ ವಿಶ್ವಾಸ ಮೂಡಿತು. ದೇವರು ಇಂತಹದೊಂದು ಸಂತಸ ಅನುಭವಿಸಲು ಆಶೀರ್ವದಿಸಿರುವುದು ತೃಪ್ತಿಯಾಗಿದೆ' ಎಂದರು.

ಚೆನ್ನಾಗಿ ಆಡಿದಿರಿ ವಿರಾಟ್. ಈಚೆಗೆ ನಾನು 49 ರಿಂದ 50 ಪೂರೈಸಲು 365 ದಿನಗಳನ್ನು ತೆಗೆದುಕೊಂಡೆ. ಆದರೆ ನೀವು ಕೆಲವೇ ದಿನಗಳಲ್ಲಿ 49 ರಿಂದ 50ಕ್ಕೆ ತಲುಪಿ, ನನ್ನ ದಾಖಲೆ ಮುರಿಯುತ್ತೀರೆಂಬ ವಿಶ್ವಾಸವಿದೆ. ಅಭಿನಂದನೆಗಳು.

ಸಚಿನ್ ತೆಂಡೂಲ್ಕರ್ (ಈಚೆಗೆ ಅವರು 50ನೇ ಜನ್ಮದಿನ ಆಚರಿಸಿದ್ದರು. ಅದನ್ನು ಉಲ್ಲೇಖಿಸಿದ್ದಾರೆ)

ವಿರಾಟ್ ತಮ್ಮ 35ನೇ ಜನ್ಮದಿನಕ್ಕೆ 49ನೇ ಶತಕದ ಕಾಣಿಕೆಯನ್ನು ತಾವೇ ಗಳಿಸಿಕೊಂಡಿದ್ದಾರೆ. ಇಂತಹ ಮೈಲಿಗಲ್ಲು ತಲುಪಲು ಅತ್ಯಂತ ಸೂಕ್ತ ದಿನ. ಜನ್ಮದಿನದ ಶುಭಾಶಯಗಳು ವಿರಾಟ್. ತಮ್ಮ ಅದ್ಭುತ ಸಾಧನೆಗೆ ಅಭಿನಂದನೆಗಳು.

ಆರ್. ವಿನಯಕುಮಾರ್, ಮಾಜಿ ಕ್ರಿಕೆಟಿಗ

ಸಂಕ್ಷಿಪ್ತ ಸುದ್ದಿ

ಆರ್ಚರಿ: ಅರ್ಹತಾ ಸುತ್ತಿನಲ್ಲಿ ಭಾರತಕ್ಕೆ 2ನೇ ಸ್ಥಾನ

ಬ್ಯಾಂಕಾಕ್ (ಪಿಟಿಐ): ಧೀರಜ್ ಬೊಮ್ಮದೇವರ ಮತ್ತು ತರುಣ್‌ದೀಪ್ ರಾಜ್ ಅವರ ಉತ್ತಮ ಪ್ರದರ್ಶನದ ನೆರವಿನಿಂದ ಭಾರತ ತಂಡ, ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನ ಪುರುಷರ ರಿಕರ್ವ್ ತಂಡ ವಿಭಾಗದ ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನ ಗಳಿಸಿತು.

ಶ್ರೇಯಾಂಕ ನಿಗದಿಪಡಿಸಲು ಭಾನುವಾರ ನಡೆದ ಸ್ಪರ್ಧೆಯಲ್ಲಿ ಭಾರತ ತಂಡ ಒಟ್ಟು 2,027 ಪಾಯಿಂಟ್ಸ್ ಗಳಿಸಿತು. 2,061 ಪಾಯಿಂಟ್ಸ್ ಕಲೆಹಾಕಿದ ಕೊರಿಯಾ ತಂಡ ಅಗ್ರಸ್ಥಾನ ಪಡೆಯಿತು. ಧೀರಜ್ ಅವರು 682 ಪಾಯಿಂಟ್ಸ್‌ಗಳೊಂದಿಗೆ ನಾಲ್ಕನೇ ಸ್ಥಾನ ಪಡೆದರೆ, ತರುಣ್‌ದೀಪ್ ಆರನೇ ಸ್ಥಾನದಲ್ಲಿ ಕಾಣಿಸಿಕೊಂಡರು. ವೈಯಕ್ತಿಕ ವಿಭಾಗದ ಮೊದಲ ಮೂರು ಸ್ಥಾನಗಳನ್ನು ಕೊರಿಯಾ ಸ್ಪರ್ಧಿಗಳು ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದ ಅರ್ಹತಾ ಸುತ್ತಿನ ಸ್ಪರ್ಧೆಯನ್ನು ಮಳೆಯ ಕಾರಣ ಅರ್ಧದಲ್ಲೇ ಮೊಟಕುಗೊಳಿಸಲಾಗಿದ್ದು, ಸೋಮವಾರ ಮುಂದುವರಿಯಲಿದೆ.

ಹಾಫ್ ಮ್ಯಾರಥಾನ್: ರಮೇಶ್, ಪ್ರಜಕ್ತಾ ಚಾಂಪಿಯನ್

ಹೈದರಾಬಾದ್ (ಪಿಟಿಐ): ತೆಲಂಗಾಣದ ಬಿ.ರಮೇಶ್ ಚಂದ್ರ ಮತ್ತು ಮಹಾರಾಷ್ಟ್ರದ ಪ್ರಜಕ್ತಾ ಗೋಡ್‌ಬೋಲೆ ಅವರು ಹೈದರಾಬಾದ್ ಹಾಫ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯನ್ನು (21.1 ಕಿ.ಮೀ ದೂರ) ರಮೇಶ್ 1 ಗಂಟೆ 13.10 ನಿ.ಗಳಲ್ಲಿ ಪೂರೈಸಿದರು. ಸತೀಶ್ ಕುಮಾರ್ (1 ಗಂ. 15:50 ನಿ.) ಮತ್ತು ಪೀಯೂಷ್ ಮಸಾನೆ (1 ಗಂ. 16.56 ನಿ.) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದುಕೊಂಡರು.

ಮಹಿಳೆಯರ ವಿಭಾಗದ ಸ್ಪರ್ಧೆಯನ್ನು ಪ್ರಜಕ್ತಾ ಅವರು 1 ಗಂಟೆ 23.45 ನಿ.ಗಳಲ್ಲಿ ಕ್ರಮಿಸಿದರು. ಪ್ರೀನು ಯಾದವ್ (1 ಗಂ. 24.46 ನಿ.) ಮತ್ತು ತೇಜಸ್ವಿನಿ (1 ಗಂ. 25.11 ನಿ.) ಅವರು ಬಳಿಕದ ಸ್ಥಾನಗಳನ್ನು ಗಳಿಸಿದರು.

10ಕೆ ಓಟದಲ್ಲಿ ಚೇತನ್ ಕುಮಾರ್ (34 ನಿ. 21 ಸೆ.) ಮತ್ತು ಶೀಲು ಯಾದವ್ (41 ನಿ. 34 ಸೆ.) ಅವರು ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ಬಾಂಗ್ಲಾದೇಶ–ಶ್ರೀಲಂಕಾ ಹಣಾಹಣಿ ಇಂದು: ದೆಹಲಿಯಲ್ಲಿ ವಾಯು ಗುಣಮಟ್ಟ ಕಳಪೆ

ಪಂದ್ಯದ ಮೇಲೆ ಕವಿದ 'ಮಾಲಿನ್ಯ'ದ ಮೋಡ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯಲ್ಲಿ ಮಲೀನವಾಗಿರುವ ಗಾಳಿಯ ಸಮಸ್ಯೆಯಿಂದಾಗಿ ಸೋಮವಾರ ಇಲ್ಲಿ ವಿಶ್ವಕಪ್ ಕ್ರಿಕೆಟ್ ಪಂದ್ಯವು ನಡೆಯುವುದು ಅನುಮಾನವೆನ್ನಲಾಗಿದೆ.

ಸೆಮಿಫೈನಲ್ ಪ್ರವೇಶದ ಹಾದಿಯಿಂದ ಈಗಾಗಲೇ ಹೊರಬಿದ್ದಿರುವ ಬಾಂಗ್ಲಾದೇಶ ಮತ್ತು ಇನ್ನೊಂದು ಸಣ್ಣ ಭರವಸೆ ಇರುವ ಶ್ರೀಲಂಕಾ ತಂಡಗಳು ಈ ಪಂದ್ಯದಲ್ಲಿ ಆಡಬೇಕಿದೆ. ದೆಹಲಿಯಲ್ಲಿ ಗಾಳಿ ಗುಣಮಟ್ಟ ಸೂಚ್ಯಂಕ (ಎಕ್ಯೂಐ)ದಲ್ಲಿ ಗಂಭೀರ ಪರಿಸ್ಥಿತಿ ಮುಂದುವರಿದಿದೆ. ದಪ್ಪನೆಯ ಮಲೀನ ಮಂಜಿನ ಪದರ ಕವಿದಿರುವುದು ಗೋಚರಿಸುತ್ತಿದೆ. ಇದರಿಂದಾಗಿ ಉಭಯ ತಂಡಗಳೂ ತಮ್ಮ ಅಭ್ಯಾಸವನ್ನೂ ಈಚೆಗೆ ರದ್ದು ಮಾಡಿದ್ದವು.

ಆದರೆ ಶನಿವಾರ ಶ್ರೀಲಂಕಾ ತಂಡವು ನೆಟ್ಸ್ ಅಭ್ಯಾಸ ನಡೆಸಲಿಲ್ಲ. ಒಳಾಂಗಣದಲ್ಲಿಯೇ ತಾಲೀಮು ಮಾಡಿತು. ಫಿರೋಜ್ ಶಾ ಕೋಟ್ಲಾದಲ್ಲಿರುವ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶ ತಂಡದ ಆಟಗಾರರು ಮುಖಗವಸು ಧರಿಸಿ ಅಭ್ಯಾಸ ನಡೆಸಿದ್ದರು.

ಗರಿಷ್ಠ ಎಕ್ಯೂಐ 400ರ ಮಟ್ಟದಲ್ಲಿಯೇ ಇದೆ. ಇದು ಅಪಾಯಕಾರಿ ಮಟ್ಟವಾಗಿದ್ದು ಇದು ಮಂಗಳವಾರದವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಭಾನುವಾರ ಬೆಳಿಗ್ಗೆಯೂ ಇದು 457ರ ಮಟ್ಟಕ್ಕೂ ಏರಿತ್ತು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ತಿಳಿಸಿದೆ.

ಪಂದ್ಯ ದಿನದ ಪರಿಸ್ಥಿತಿಯನ್ನು ಅವಲೋಕಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ.

'ಐಸಿಸಿಯ ನಿಯಮ ಆರ್ಟಿಕಲ್ 2.8ರ ಪ್ರಕಾರ ಪಂದ್ಯದ ದಿನ ಇಬ್ಬರೂ ಅಂಪೈರ್‌ಗಳು ಹವಾಮಾನ, ಬೆಳಕು, ಮೈದಾನದ ಪರಿಸ್ಥಿತಿ ಮತ್ತು ಕ್ರೀಡಾಂಗಣದ ಗುಣಮಟ್ಟಗಳನ್ನು ಅವಲೋಕಿಸಿ ಆಟಗಾರರಿಗೆ ಅಪಾಯಕಾರಿ ಇದೆಯೋ ಇಲ್ಲವೋ ಎಂದು ನಿರ್ಧರಿಸುತ್ತಾರೆ. ಒಂದೊಮ್ಮೆ ಸ್ಥಿತಿ ಆತಂಕಕಾರಿಯಾಗಿದ್ದರೆ ಪಂದ್ಯವನ್ನು ಕೂಡಲೇ ರದ್ದುಪಡಿಸಬಹುದು' ಎಂದು ಐಸಿಸಿ ತಿಳಿಸಿದೆ.

ಈ ಎರಡೂ ತಂಡಗಳಿಗೆ ಇದೇನೂ ಹೊಸ ಅನುಭವ ಅಲ್ಲ. 2017ರಲ್ಲಿ ಇಲ್ಲಿಗೆ ಟೆಸ್ಟ್ ಆಡಲು ಬಂದಿದ್ದ ಶ್ರೀಲಂಕಾ ತಂಡವು ಇಂತಹದೇ ಪರಿಸ್ಥಿತಿ ಎದುರಿಸಿತ್ತು. ಮಾಸ್ಕ್ ಧರಿಸಿ ಭಾಗವಹಿಸಿತ್ತು. ಆಗ ಲಂಕಾ ಆಟಗಾರರು ಉಸಿರಾಟದ ತೊಂದರೆಯನ್ನೂ ಎದುರಿಸಿದ್ದರು. 2019ರಲ್ಲಿ ಇಲ್ಲಿ ನಡೆದಿದ್ದ ಟಿ20 ಪಂದ್ಯದಲ್ಲಿ ಆಡಲು ಬಂದಿದ್ದ ಬಾಂಗ್ಲಾದೇಶ ತಂಡದವರಿಗೂ ಇದೇ ಅನುಭವ ಆಗಿತ್ತು. ಆದರೆ ಈ ಪಂದ್ಯವು ಬಾಂಗ್ಲಾಗಿಂತ ಶ್ರೀಲಂಕಾಕ್ಕೆ ಮುಖ್ಯ ವಾಗಿದೆ. ಅಂಕಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿರುವ ಲಂಕಾ ತಂಡಕ್ಕೆ ಇನ್ನೆರಡು ಪಂದ್ಯಗಳು ಬಾಕಿಯಿವೆ. ಅವೆರೆಡರಲ್ಲೂ ಜಯ ಸಾಧಿಸಿದರೆ ನಾಲ್ಕರ ಘಟ್ಟಕ್ಕೆ ಪ್ರವೇಶಿಸುವ ಅಣ್ಣ ಅವಕಾಶ ಅದಕ್ಕಿದೆ. ಅದಾಗದಿದ್ದರೂ ಅಂತಿಮ ಏಳು ತಂಡಗಳಲ್ಲಿ ಸ್ಥಾನ ಉಳಿಸಿಕೊಂಡರೆ 2025ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ನೇರ ಅರ್ಹತೆ ಗಿಟ್ಟಿಸಬಹುದು ಎಂಬ ಲೆಕ್ಕಾಚಾರದಲ್ಲಿ ಕುಸಾಲ ಮೆಂಡಿಸ್ ಬಳಗ ಇದೆ. ಆದರೆ ದೆಹಲಿಯ 'ಗಾಳಿ'ಯು ಲಂಕೆಯ ಪರವಾಗಿ ಬೀಸುವುದೇ ಕಾದು ನೋಡಬೇಕಿದೆ.

ವಾಯುಮಾಲಿನ್ಯದ ಹಿನ್ನಲೆಯಲ್ಲಿ ಆಟಗಾರರ ಆರೋಗ್ಯದ ಮೇಲೆ ನಿಗಾ ಇಡಲು ಐಸಿಸಿಯು ಈ ಪಂದ್ಯಕ್ಕೆ ಶ್ವಾಸಕೋಶ ತಜ್ಞರನ್ನು ನಿಯೋಜಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 2

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಶ್ರೀಲಂಕಾ ತಂಡದ ನಾಯಕ ಕುಸಾಲ ಮೆಂಡಿಸ್–ಪಿಟಿಐ ಚಿತ್ರ

ಬಾಂಗ್ಲಾದೇಶ ತಂಡದ ನಾಯಕ ಶಕೀಬ್ ಅಲ್ ಹಸನ್ –ಪಿಟಿಐ ಚಿತ್ರ

ಹಾಕಿ: ಭಾರತ ಚಾಂಪಿಯನ್

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ರಾಂಚಿ: ಆಕ್ರಮಣಕಾರಿ ಆಟ ಪ್ರದರ್ಶಿಸಿದ ಭಾರತ ತಂಡದ ವನಿತೆಯರು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಫೈನಲ್ ಪಂದ್ಯದಲ್ಲಿ 4–0 ಯಿಂದ ಜಪಾನ್ ತಂಡವನ್ನು ಸುಲಭವಾಗಿ ಮಣಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಸಂಗೀತಾ ಕುಮಾರಿ (17ನೇ ನಿಮಿಷ), ನೇಹಾ (46ನೇ), ಲಾರೆಮ್ಸಿಯಾಮಿ (57ನೇ) ಮತ್ತು ವಂದನಾ ಕಟಾರಿಯಾ (60ನೇ) ಅವರು ಭಾರತದ ಪರ ಗೋಲುಗಳನ್ನು ದಾಖಲಿಸುವ ಮೂಲಕ ಎರಡು ಬಾರಿಯ ಚಾಂಪಿಯನ್ ತಂಡಕ್ಕೆ ಆಘಾತ ನೀಡಿದರು.

ಲೀಗ್ ಹಂತದಲ್ಲಿ ಎಲ್ಲ ಐದೂ ಪಂದ್ಯಗಳನ್ನು ಗೆದ್ದು, ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದ ಸವಿತಾ ಪೂನಿಯಾ ನಾಯಕತ್ವದ ಆತಿಥೇಯ ತಂಡ, ಎರಡನೇ ಬಾರಿ ಚಾಂಪಿಯನ್ಸ್ ಟ್ರೋಫಿಗೆ ಮುತ್ತಿಕ್ಕಿತು. ಭಾರತವು 2016ರಲ್ಲಿ (ಸಿಂಗಪುರ) ಮೊದಲ ಬಾರಿ ಚಾಂಪಿಯನ್ ಆಗಿತ್ತು. ಜಪಾನ್ 2013 ಮತ್ತು 2021ರಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದಿತ್ತು.

ಫ್ಲಡ್‌ಲೈಟ್‌ಗಳ ತಾಂತ್ರಿಕ ದೋಷದಿಂದಾಗಿ ಪಂದ್ಯವು 50 ನಿಮಿಷ ತಡವಾಗಿ ಆರಂಭವಾಯಿತು. ಮೊದಲ ಕ್ವಾರ್ಟರ್‌ನ ಆರಂಭದಲ್ಲೇ ಭಾರತಕ್ಕೆ ಮುನ್ನಡೆ ಸಾಧಿಸಲು ಅವಕಾಶ ಸಿಕ್ಕಿತಾದರೂ ಚೆಂಡನ್ನು ಗುರಿ ಸೇರಿಸಲು ದೀಪಿಕಾ ವಿಫಲರಾದರು. ಆದರೆ, ಎರಡನೇ ಕ್ವಾರ್ಟರ್‌ನಲ್ಲಿ ಸಂಗೀತಾ ಕುಮಾರಿ ಗೋಲು ಗಳಿಸುವ ಮೂಲಕ ಆತಿಥೇಯ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಅಂತಿಮ ಕ್ವಾರ್ಟರ್‌ನಲ್ಲಿ ಚುರುಕಿನ ಆಟವಾಗಿದ ಭಾರತದ ಆಟಗಾರ್ತಿಯರು ಮೂರು ಗೋಲು ಗಳಿಸುವ ಮೂಲಕ ತಂಡದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಚೀನಾಕ್ಕೆ ಕಂಚು: ದಕ್ಷಿಣ ಕೊರಿಯಾ ತಂಡದವರ ಸ್ಫೂರ್ತಿಯುತ ಸವಾಲನ್ನು ಮೀರಿನಿಂತ ಚೀನಾ ತಂಡ ಟೂರ್ನಿಯಲ್ಲಿ ಕಂಚು ಜಯಿಸಿತು.

ಮೂರು ಮತ್ತು ನಾಲ್ಕನೇ ಸ್ಥಾನವನ್ನು ನಿರ್ಣಯಿಸಲು ಭಾನುವಾರ ನಡೆದ ಪಂದ್ಯವನ್ನು ಚೀನಾ 2–1 ಗೋಲುಗಳಿಂದ ಜಯಿಸಿತು.

ಆಕ್ರಮಣಕಾರಿ ಆಟವಾಡಿದ ಚೀನಾ ತಂಡಕ್ಕೆ ಚೆನ್ ಯಿ ಅವರು 3ನೇ ನಿಮಿಷದಲ್ಲಿ ಮೇಲುಗೈ ತಂದಿತ್ತರು. ವಿರಾಮದವರೆಗೂ ಚೀನಾ ಮುನ್ನಡೆಯನ್ನು ಉಳಿಸಿಕೊಂಡಿತು.

ಮರುಹೋರಾಟ ನಡೆಸಿದ ಕೊರಿಯಾ ತಂಡಕ್ಕೆ ಮೂರನೇ ಕ್ವಾರ್ಟರ್‌ನಲ್ಲಿ ಆನ್ ಸುಜಿನ್ (38ನೇ ನಿ.) ಅವರು ಸಮಬಲದ ಗೋಲು ತಂದಿತ್ತರು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಕೊನೆಯ ಕ್ವಾರ್ಟರ್‌ನಲ್ಲಿ ಲುವೊ ತಿಯಾನ್‌ತಿಯಾನ್ (47ನೇ ನಿ.) ಅವರು ಚೀನಾ ತಂಡಕ್ಕೆ ಗೆಲುವಿನ ಗೋಲು ಗಳಿಸಿಕೊಟ್ಟರು. ಕೊನೆಯ ನಿಮಿಷಗಳಲ್ಲಿ ಸಮಬಲದ ಗೋಲು ಗಳಿಸಲು ಕೊರಿಯಾ ನಡೆಸಿದ ಪ್ರಯತ್ನಗಳನ್ನು ಚೀನಾ ಡಿಫೆಂಡರ್‌ಗಳು ವಿಫಲಗೊಳಿಸಿದರು.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾರತ (ನೀಲಿ) ಮತ್ತು ಜಪಾನ್ ತಂಡದ ಆಟಗಾರ್ತಿಯರ ಪೈಪೋಟಿ –ಪಿಟಿಐ ಚಿತ್ರ



72198 21111 | BAJAJ FINANCE LTD - AF | BAJAJ SECURE • AMC • ROAD SIDE ASSISTANCE

ನಿಯಮ ಹಾಗೂ ಷರತ್ತುಗಳು ಅನ್ವಯಿಸುತ್ತವೆ. *ಪಲ್ಸರ್ N150 ವೇರಿಯಂಟ್‌ನ ಎಕ್ಸ್-ಶೋರೂಮ್ ಬೆಲೆ. ನಿಜವಾದ ಬಣ್ಣಗಳು ಮತ್ತು ಎಕ್ಸೆಸರೀಸ್‌ನಲ್ಲಿ ವ್ಯತ್ಯಾಸವಿರಬಹುದು ಅಥವಾ ಸ್ಟ್ಯಾಂಡರ್ಡ್ ಇಕ್ವಿಪ್‌ಮೆಂಟ್‌ನ ಅಂಗಭಾಗವಲ್ಲದೇ ಇರಬಹುದು. ನಿರ್ದಿಷ್ಟ ಮಾಡೆಲ್‌ಗಳಿಗಾಗಿ ನಿರ್ದಿಷ್ಟ ರಾಜ್ಯಗಳಲ್ಲಿ ಎಂಎಸ್‌ಪಿ ಲಭ್ಯ. ಹೆಚ್ಚಿನ ವಿವರಗಳಿಗಾಗಿ ಬಜಾಜ್ ಡೀಲರರಲ್ಲಿ ವಿಚಾರಿಸಿರಿ. ರೋಡ್‌ಸೈಡ್ ಸಹಾಯವನ್ನು ಥರ್ಡ್ ಪಾರ್ಟಿಯವರು ಒದಗಿಸುತ್ತಾರೆ ಮತ್ತು ಅವರ ನಿಯಮ ಹಾಗೂ ಷರತ್ತುಗಳ ಅನುಸಾರವಿರುತ್ತದೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 6360308373 • **Chandra Layout Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 96320 68142 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.